3115

ಕಾಂಫ್ಯೂಷನೆಂಬ ಮಹಾಪುರುಷ

Rw KUN
M92
3115

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

ಚೀಣಾರಾಜ್ಯದಲ್ಲಿ ಧರ್ಮಸಂಸ್ಥಾಪನೆಯನ್ನು ಮಾಡಿದ

# PREFACE.

ಕಾಂಫ್ಯೂಷಿಯಸ್ - ಮಹಾಪುರುಷ

Though this is more in the form of an essay on the life and character of the great Chinese philosopher than any regular work on biography, yet some of the minute facts, that could possibly be gathered from the few available sources, and that generally come within the scope of a biographer, have been carefully recorded. As some of the few prose works existing in Kannada, mostly abound in descriptions of concrete objects even to a fault, the present attempt at a discursive style treating of abstract questions, may appear a departure from the beaten path. Some of the opinions, rather too boldly launched forth, either as explanations and comments on some of the enigmatical theories and expressions of the great man, or as personal reflections on some of the important questions, may be taken as the writer's own individual opinion. The name "Kung-fu-tze" is slightly altered in Kannada to be easily pronounced by the ordinary people. Thanks are due to some friends at Bangalore, for having kindly heard the MS. read out to them and for their kind suggestions regarding the use of some terms &c.

**Bangalore,**
*March, 1892.*

M. S. P.

Digitized by ROJA MUTHIAH RESEARCH LIBRARY

# ಪೀಠಿಕೆ.

ಚೀಣಾ ಸಂಸ್ಥಾನದ ನೀತಿಯನ್ನೂ ಧರ್ಮಾಚರಣೆಯನ್ನೂ ವೃದ್ಧಿ ಮಾಡಿ ಧರ್ಮ ಸಂಸ್ಥಾಪನೆಯನ್ನು ಮಾಡಿದ ಕಾಂಫ್ಯೂಷನೆಂಬ ಮಹಾಪುರುಷನ ವಿಷಯವು ಕರ್ಣಾಟಕರಿಗೆ ಸ್ವಲ್ಪ ತಿಳಿಯಲೆಂದು ಇದನ್ನು ಕನ್ನಡದಲ್ಲಿ ಬರೆಯಲಾಯಿತು. ಕನ್ನಡದಲ್ಲಿ ಸ್ವಲ್ಪವಾಗಿರುವ ವಾಕ್ಯ ಗ್ರಂಥಗಳು ವಿಧವಿಧವಾದ ವರ್ಣನೆಗಳಿಂದ ತುಂಬಿರುವ ಕಾರಣ, ಅವುಗಳನ್ನು ಇಲ್ಲಿ ಬಿಟ್ಟಿದೆ. ಈ ಗ್ರಂಥಕರ್ತನು ಇಲ್ಲಿ ಹೇಳಿರುವ ಕೆಲವು ಸ್ವಕೀಯವಾದ ಅಭಿಪ್ರಾಯಗಳಿಗಾಗಿಯೂ ಇತರ ಸ್ಖಾಲಿತ್ಯಗಳಿಗಾಗಿಯೂ ತಿಳಿದಂಥಾ ಮಹಾಪುರುಷರು ಕ್ಷಮಿಸಬೇಕೆಂದು ಪ್ರಾರ್ಥನೆ. ಬೆಂಗಳೂರು ನಿವಾಸಿಗಳಾದ ಕೆಲವು ಮಿತ್ರರು ಇದನ್ನು ಓದಿಸಿ ಕೇಳಿ ಕೆಲವು ಸ್ಖಾಲಿತ್ಯಗಳನ್ನು ದಯಮಾಡಿ ತೋರಿಸಿಕೊಟ್ಟದ್ದಕ್ಕಾಗಿ ಗ್ರಂಥಕರ್ತ ಕೃತಜ್ಞನಾಗಿದಾನೆ.

ಬೆಂಗಳೂರು,
ಖರ ಸಂ|| ಚೈತ್ರಮಾಸ

ಸ್ವಾ. ಸೂ. ಪು

ಚೀಣಾರಾಜ್ಯದಲ್ಲಿ
ಧರ್ಮಸಂಸ್ಥಾಪನೆಯನ್ನು ಮಾಡಿದ

# ಕಾಂಫ್ಯೂಷನೆಂಬ

ಮಹಾಪುರುಷ.

—:0:—

## ೧ನೇ ಅಧ್ಯಾಯ.

ಲೋಕದಲ್ಲಿ ಧರ್ಮಾಚರಣೆಯೇ ಇಹಪರಸಾಧಕವಾದ್ದು. ಯಾವ ಮಾರ್ಗವನ್ನು ಅನುಸರಿಸಿ ನಡೆಯುವುದರಿಂದ ಮನುಷ್ಯ ವರ್ಗಕ್ಕೆ ದುಃಖನಿವಾರಣೆಯಾಗುವುದಲ್ಲದೆ ಸುಖ ಹೆಚ್ಚುವುದೋ, ಇಷ್ಟಪ್ರಾಪ್ತಿ ಅನಿಷ್ಟನಿವೃತ್ತಿಯಾಗುವುದೋ, ಅದೇ ಧರ್ಮ. ಪ್ರಪಂಚದಲ್ಲಿ ಯಾವ ಮತವಾದಾಗ್ಯೂ ಧರ್ಮಾಚರಣೆಯನ್ನು ಬಿಟ್ಟಿಲ್ಲ. ಯಾವ ಮತಕ್ಕೂ ಧರ್ಮವೇ ಆಧಾರಭೂತವಾದ್ದು. ಯಾವ ಮತರೀತ್ಯಾ ಧರ್ಮಾಚರಣೆಯು ಕಡಮೆಯಾಗುವುದೋ ಅದು ಕುಮತವೆಂತಲೂ, ಯಾವಮತರೀತ್ಯಾ ಧರ್ಮಾಚರಣೆಯು ವಿಶೇಷವಾಗಿರುವುದೋ ಅದು ಸನ್ಮತವೆಂತಲೂ ಪ್ರಾಜ್ಞರು ಹೇಳುವರು. ಹೀಗೆ ನೀತಿಯಿಂದ ಮತಗಳಿಗೆ ಪ್ರಾಶಸ್ತ್ಯ ಉಂಟಾಗಿರುವುದೇ ಹೊರತು, ಮತದಿಂದ ನೀತಿಗೆ ಯೋಗ್ಯತೆ ಹುಟ್ಟುವುದಿಲ್ಲ. ಯಾವ ಮತಾವಲಂಬಿಗಳಾದಾಗ್ಯೂ ಸನ್ಮಾರ್ಗಪ್ರವಿಷ್ಟರಾಗಿದ್ದಲ್ಲಿ ಪರದಲ್ಲಿ ಸದ್ಗತಿ ಎಂದಿಗೂ ತಪ್ಪುವುದಿಲ್ಲ.

Digitized by ROJA MUTHIAH RESEARCH LIBRARY

ದುರ್ನೀತರು ಯಾವ ದೇವರಲ್ಲಿ ಎಷ್ಟು ಭಕ್ತಿ ಇಟ್ಟುಕೊಂಡಿದಾಗ್ಯೂ ಅವರಿಗೆ ಅಧೋಗತಿ ತಪ್ಪುವುದಿಲ್ಲ. ಸತ್ಯವಿದ್ದರೆ ಎತ್ತಲೂ ಭಯವಿಲ್ಲ. ಧರ್ಮಕ್ಕೆ ಎಂದಿಗೂ ಚ್ಯುತಿ ಇಲ್ಲ. ಸಮಸ್ತ ಮತೋದ್ಧಾರಕರೂ ಇಂಥಾ ಪರಮಧರ್ಮಾಚರಣೆಯನ್ನು ಬೋಧಿಸುವುದರಲ್ಲಿ ನಿರತರಾದರು. ಹೀಗೆ ನೀತಿಸಂಸ್ಥಾಪನೆಯನ್ನು ಮಾಡಿದ ಮಹಾಪುರುಷರು ಎಲ್ಲಾ ದೇಶದಲ್ಲಿಯೂ ಇದ್ದರು. ಚೀಣಾರಾಜ್ಯದಲ್ಲಿದ್ದ ಕಾಂಫೂಷನೆಂಬ ಮಹಾತ್ಮನು ಇವರಲ್ಲಿ ಒಬ್ಬನು. ಈತನು ಚೀಣರಲ್ಲಿ ದೊಡ್ಡ ಆಚಾರ್ಯಪುರುಷ.

ಈತನ ಕಾಲದಲ್ಲಿ ಚೀಣಾರಾಜ್ಯದೊಳು ೧೩ ಮುಖ್ಯ ಸಂಸ್ಥಾನಗಳೂ ಅನೇಕ ಚಿಕ್ಕರಾಜವಾಡೆಗಳೂ ಇದ್ದವು. ಅಲ್ಲಿ ೧-೧॥ ಕೋಟಿ ಪ್ರಜೆಗಳಿರಬಹುದು. ಈ ಕಾಂಫೂಷನು ಕ್ರಿ। ಪೂರ್ವ ಸುಮಾರು ೫೫೦ನೇ ವರುಷದ ಹಿಮಂತ ಋತುವಿನಲ್ಲಿ, ಲೂ ಎಂಬ ರಾಜ್ಯದೊಳು ಜನನವಾದನು. ಈತನ ಜನನ ಕಾಲದೊಳು ಆಕಾಶದಲ್ಲಿ ಸಂಗೀತ ಗಾನವಾಯಿತೆಂದು ಒಂದು ಐತಿಹ್ಯವಿದೆ. ಎಲ್ಲಾ ಜನರಲ್ಲಿಯೂ ಇಂಥಾ ಅದ್ಭುತಗಳನ್ನು ಹೇಳುವರು. ಭೀಮಸೇನ ಹುಟ್ಟಿದಾಗ ಪರ್ವತಗಳು ಅಳ್ಳಾಡಿದವೆಂತಲೂ, ರಾಮಕೃಷ್ಣಾದ್ಯವತಾರಗಳಾದಾಗ ದೇವದುಂದುಭಿನಾದವು ಆಕಾಶದಲ್ಲಿ ಆಯಿತೆಂತಲೂ, ನಾವು ಹೇಳುವುದುಂಟು. ಇಂಥಾ ಮಹಾತ್ಮರ ಯೋಗ್ಯತೆಯನ್ನು ತಿರುಮಾಯು ಅರಿತು ಅದರ ಫಲವನ್ನು ಅನುಭವಿಸಿದ ಮನುಷ್ಯಸಾಮಾನ್ಯರು, ಈ ಅದ್ಭುತ ವ್ಯಕ್ತಿಗಳಿಗೆ ದೇವಾಂಶವನ್ನು ಕಲ್ಪಿಸಿ ತನ್ಮೂಲಕ ಪ್ರಾಶಸ್ತ್ಯವನ್ನು



ಉಂಟುಮಾಡಬೇಕೆಂದು ಹೀಗೆ ಅವುಟಗಳನ್ನು ಹುಟ್ಟಿಸುವುದು ನಮ್ಮ ಅನುಭವಸಿದ್ಧವಾಗಿದೆ. ಆದರೆ ಇಂಥಾ ಅದೃಶ್ಯಗಾನವು ಮುಂದೆ ಆಯಾ ಪ್ರಕೃತಿ ವಿಶೇಷಗಳಲ್ಲಿ ಉಂಟಾಗುವ ನೀತಿಸಮ್ಮೇಳನಗಾನವನ್ನು ಮುಂದಾಗಿ ಸೂಚಿಸುವ ಹಾಗೆ ಕಿವಿಗಿಂಪಾದ ಗಾನವಾಯಿತೆಂದು, ಅದ್ಭುತವಾಗಿ ನಮ್ಮ ಮನಸ್ಸು ಊಹಿಸಿಕೊಂಡರೂ, ಮಹನೀಯರ ವಿಷಯದಲ್ಲಿ ಪಾಪವಲ್ಲ.

ಈತನ ನಿಜ ನಾಮವು ಕಾಂ; ಫೂಷ್ ಎಂದರೆ ಆಚಾರ್ಯ; ಕಾಂಫೂಷ್ ಎಂದರೆ ಆಚಾರ್ಯನಾದ ಕಾಂ ಎಂದು ಅರ್ಥ. ಈತನ ತಂದೆಯ ಹೆಸರು ಹೇ. ಈ ಹೇ ಎಂಬುವನು ಅತ್ಯಂತ ಪರಾಕ್ರಮಶಾಲಿಯಾಗಿ ರಣಧೀರನಾಗಿದ್ದನು. ಕ್ರಿ। ಪೂ। ೫೬೨ರಲ್ಲಿ ಒಂದು ಪಟ್ಟಣವು ಮುತ್ತಿಗೆಯಾಯಿತು. ಆ ಮುತ್ತಿಗೆ ಹಾಕುವ ಸೇನೆಯಲ್ಲಿ ಹೇ ಸೇರಿದ್ದನು. ಪಟ್ಟಣದ ಒಳಗಿದ್ದ ಸೇನೆಯವರು ಊರಬಾಗಿಲನ್ನು ತೆಗೆದಿದ್ದರು. ಮುತ್ತಿಗೇ ಹಾಕಿದ್ದ ಶತ್ರುಗಳು ಬಾಗಿಲಿನಿಂದ ಒಳಕ್ಕೆ ನುಗ್ಗಲು ಪಟ್ಟಣದವರು ತಕ್ಷಣವೇ ಮೇಲಿನಿಂದ ಭಾರವಾಸಿಯಾದ ಬಾಗಿಲನ್ನು ಕೆಳಕ್ಕೆ ಬಿಟ್ಟರು. ಆಗತಾನೇ ಒಳಕ್ಕೆ ನುಗ್ಗುತ್ತಿದ್ದ ಹೇ ಯು ತನ್ನ ಸ್ವಶಕ್ತಿಯಿಂದ ಮೆಲ್ಲಗೆ ಅದನ್ನು ಹಿಡಿದು ಮೇಲಕ್ಕೆ ಎತ್ತಿ ತನ್ನ ಕಡೇ ಜನರೆಲ್ಲಾ ಸಂದಿಯಲ್ಲಿನುಸಿದು ತಲೆತಪ್ಪಿಸಿಕೊಂಡು ಓಡಿಹೋಗುವ ತನಕ ಹಾಗೆಯೇ ಹಿಡಿದುಕೊಂಡು ನಿಂತಿದ್ದನು. ಕಾಂಫೂಷನ ತಾಯಿಯ ಹೆಸರು ಯೆ ಚಿಂಗುತ್ಸಾಯಿ. ಹೇಯು ತನ್ನ ೭೦ನೆ ವರುಷದಲ್ಲಿ ಈಕೆಯನ್ನು ಮದುವೆಯಾದನು. ಹೀಗೆ ಮಕ್ಕಳಾಗುವ ಕೋರಿಕೆ ಬಹಳ ಕಡಮೆಯಾಗಿದ್ದ ಕಾರಣ ಚ್ಯುತಿಇಲ್ಲದ ಪ್ರಖ್ಯಾತಿ

Digitized by ROJA MUTHIAH RESEARCH LIBRARY

ಯನ್ನು ಹೊಂದಿದ ಇವರ ಪುತ್ರನು ಜನನವಾದಾಗ ಅತ್ಯಂತ ಸಂಭ್ರಮದೊಡನೆ ಪುತ್ರೋತ್ಸವ ಬೆಳೆಯಿತು.

ಜನವಾರ್ತೆಯಿಂದ ತಿಳಿಯಬರುವುದೇನಂದರೆ:— ಚಿಂಗುತ್ಸಾಯಿಗೆ ಒಂದು ಸ್ವಪ್ನಬೀಳಲು, ಅದರಪ್ರಕಾರ ನೆ ಎಂಬ ಪರ್ವತದ ಒಂದು ಗುಹೆಯಲ್ಲಿ ಮಗುವನ್ನು ಹೆತ್ತಳು. ಈ ಜನನಕಾಲದಲ್ಲಿ ವಿಶೇಷವಾದ ಅದ್ಭುತಗಳು ಉಂಟಾದ ಹಾಗೂ, ಆ ಮಹಾಪುರುಷನ ಅವತಾರವು ಚಿಂಗುತ್ಸಾಯಿಗೆ ದೇವತೆಗಳಿಂದ! ಮುಂಚಿತವಾಗಿಯೇ ಸೂಚನೆಯಾಗಿದ್ದಂತೆಯೂ ಹೇಳುವರು.

## ೨ನೇ ಅಧ್ಯಾಯ.

### ಆತನ ಬಾಲ್ಯಾವಸ್ಥೆ ಮತ್ತು ಸರಕಾರದ ಉದ್ಯೋಗ.

ಈತನ ಬಾಲ್ಯದಶೆಯನ್ನು ಕುರಿತು ವಿಶೇಷವಾಗಿ ಏನೂ ಗೊತ್ತಾಗಿಲ್ಲ. ಮೊದಲಿನಿಂದಲೂ ಈತನಿಗೆ ಆನ್ಹಿಕ ಮೊದಲಾದ ಕರ್ಮಗಳಲ್ಲಿ ಅತ್ಯಂತ ಆಸಕ್ತಿ ಇತ್ತು. ಪಾತ್ರೆಗಳನ್ನು ಓರಣವಾಗಿ ಸಾಲಾಗಿ ಇಟ್ಟು ಆಟವಾಡುತಿದ್ದನು.

ಗುರುಹಿರಿಯರಲ್ಲಿಯೂ ಪೂರ್ವಾಚಾರದಲ್ಲಿಯೂ ಈ ಮಗುವಿಗೆ ಬಹಳ ಭಕ್ತಿ ಇತ್ತು. ತಾತನು ಮುಖವನ್ನು ಸ್ವಲ್ಪ ಜೋಲು ಹಾಕಿಕೊಂಡು ಕೂತಿರುವದನ್ನು ಈ ಹಸುಳೆಯು ಕಂಡು— ತಾತ, ಯಾಕೆ ಮ್ಲಾನವದನ? ಭಯಪಡಬೇಡ, ನಾನು ತಮ್ಮನ್ನು ಅನುಸರಿಸುವದಿಲ್ಲ, ಎಂದು ಹೇಳಿತು. ಆಗ ಅಜ್ಜನು—ಮಗುವೇ, ನೀನು ಹೀಗೆ ಮೃದು

Digitized by ROJA MUTHIAH RESEARCH LIBRARY



ವಾಗಿ ಮಾತನಾಡುವುದನ್ನು ಎಲ್ಲಿ ಕಲಿತೆಯಪ್ಪ ಎಂದು ಕೇಳಿದನು. ಕೂಡಲೆ ಹುಡುಗನು—ನಿಮ್ಮಿಂದ, ತಾತ, ತನ್ನ ಹಿರಿಯರು ನಡೆದಂತೆ ನಡೆಯದ ಪುತ್ರ ದುಷ್ಪುತ್ರ, ಎಂದು ಉತ್ತರ ಕೊಟ್ಟನು. ಹೀಗೆ ಆ ಮಹತ್ತಿನ ಕಿರಣಗಳು ಬಾಲ್ಯದಲ್ಲಿಯೇ ಪ್ರಸರಿಸುತ ಬಂದವು. ಸಿಂಹವು ಮರಿಯಾದರೂ ಪರಾಕ್ರಮದ ಬೀಜ ಅದರಲ್ಲಿ ಇದ್ದೇ ಇರುವುದು.

ಹೀಗಿರುವಲ್ಲಿ ಹುಡುಗನಿಗೆ ಕೆಲವು ವರುಷಗಳಾದುವು. ಈತನು ತನ್ನ ೧೫ನೇ ವಯಸ್ಸಿನಲ್ಲಿ ವಿದ್ಯಾಭ್ಯಾಸಂಗಕ್ಕೆ ತೊಡಗಿದನಂತೆ. ಪುರಾತನರಾದ ಮಹಾರಾಜರುಗಳ ಚರಿತ್ರೆಯನ್ನು ಓದಿ ತಿಳಿದುಕೊಳ್ಳುವುದರಲ್ಲಿ ಈತನಿಗೆ ಬಹಳ ಆಸಕ್ತಿಯುಂಟಾಗಿತ್ತು. ಯು ಮತ್ತು ಷರ್ ಎಂಬ ಮಹಾರಾಜರ ಕಾಲವು ಬಹುಸತ್ಯಕಾಲವೆಂದು ಭಕ್ತಿಯನ್ನಿಟ್ಟುಕೊಂಡಿದ್ದನು. ಇಪ್ಪತ್ತನೇ ವಯಸ್ಸಿನಲ್ಲಿ ಸಂಗ ಎಂಬ ಊರಿನ ಒಂದುಹೆಣ್ಣನ್ನು ಮದುವೆಯಾದನು. ಕೂಡಲೇ ಈತನಿಗೆ ಧೊರೆಯ ಉಗ್ರಾಣದ ಪಾರುಪತ್ಯವಾಯಿತು. ಜೀವನೋಪಾಯಕ್ಕೆ ಒಂದು ಭಿತ್ತಿಯನ್ನು ಕಲ್ಪಿಸಿಕೊಳ್ಳಬೇಕೆಂಬ ಅಗತ್ಯದಿಂದ ಈ ಕೆಲಸಕ್ಕೆ ಒಪ್ಪಿಕೊಂಡನು. ಮೂರನೇ ವರುಷ ಮುಲಕೀಬಾಬಿನಲ್ಲಿ ಒಂದು ಅಧಿಕಾರವಾಯಿತು.

ಈ ಕಾಲದಲ್ಲಿ ಈತನಿಗೆ ಪುತ್ರೋತ್ಸವ ವಾದ್ದು. ಈ ಉತ್ಸವಕಾಲದಲ್ಲಿ ದೊರೆಯು ಬಹುಮಾನವನ್ನು ಕಳುಹಿಸಿದನು. ಮಗನಹೆಸರು “ಲಿ”. ಹೀಗಿರಲು ಪತ್ನಿಗೂ ಈತನಿಗೂ ಸರಿಬೀಳಲಿಲ್ಲ. ದೊಡ್ಡ ಶಾಸ್ತ್ರಜ್ಞರಿಗೂ ಗ್ರಂಥಕರ್ತರಿಗೂ, ಪ್ರಾಜ್ಞರಿಗೂ, ಸಂಸಾರಸುಖ ವಿಶೇಷವಾಗಿರುವದಿಲ್ಲವೇತಲೂ ಇವರಿಗೂ ಇವರುಗಳ ಹೆಂಡಿರಿಗೂ ದಾಂಪ

ತ್ಯಾನುಕೂಲ್ಯಕಡವೆ ಎಂತಲೂ ಹೇಳುವ ಲೋಕವಾರ್ತೆಗೆ
ಈತ ಒಂದು ಸಾಮತಿಯಾದನು. ಇಲ್ಲಿ ಸ್ವಲ್ಪವಿಚಾರಕ್ಕೆ
ಆಸ್ಪದವಿದೆ. ಬರೀ ಪಾಂಡಿತ್ಯವಿದ್ದಮಾತ್ರದಲ್ಲಿಯೇ ಹೆಂಡಿರಲ್ಲಿ
ಯಾಗಲೀ ಇತರರಲ್ಲಿಯಾಗಲೀ ಈ ವಿಧವಾದ ವೈಮನಸ್ಯವಿ
ರುವುದೆಂದು ಹೇಳುವುದಕ್ಕಾಗುವುದಿಲ್ಲ. ಅನೇಕಪಂಡಿತರು
ಎಲ್ಲರಲ್ಲಿಯೂ ಮಿತ್ರಭಾವದಲ್ಲಿಯೇ ಇರುತ್ತಾ ಸುಖವಾಗಿ ಕಾ
ಲವನ್ನು ಕಳೆಯುವರು. ಆದಕಾರಣ ಪಾಂಡಿತ್ಯವು ಇದಕ್ಕೆ
ಹೇತುವಲ್ಲ. ಲೋಕದಲ್ಲಿ ಎಲ್ಲರೂ ಅಸೌಜನ್ಯವೆಂದು ವಾ
ಡಿಕೆಯಾಗಿ ಹೆಸರಿಟ್ಟುಕೊಂಡಿರುವ ಈ ಗುಣಕ್ಕೆ ಮೂಲವು
ಬೇರೆಯುಂಟು ; ಅದುಯಾವುದೆಂದರೆ, ಉತ್ತಮ ಪುರುಷರ
ಲ್ಲಿರತಕ್ಕ ಪ್ರತಿಭೆ ಎಂಬ ಬುದ್ಧಿವಿಶೇಷ. ಇದು ದೀಪದ ಪ್ರಕಾ
ಶದ ಹಾಗೂ, ಹಣ್ಣಿನ ಮಾಧುರ್ಯದ ಹಾಗೂ, ಫಲದಲ್ಲಿ ಕಾ
ಣುವುದೇ ಹೊರತು ಕಣ್ಣಿನಿಂದ ನೋಡುವದಕ್ಕಾಗಲಿ ಕೈಯಿಂ
ದ ಮುಟ್ಟುವುದಕ್ಕಾಗಲಿ ಬೇರೆ ಸಿಕ್ಕತಕ್ಕ ಪದಾರ್ಥವಲ್ಲ.
ಬಹುಕಾಲಕ್ಕೆ ಒಂದೊಂದುಸಾರಿ ಅವತರಿಸುವ ಒಬ್ಬೊಬ್ಬ
ಮಹಾತ್ಮನಲ್ಲಿ ಇದು ಬೂದಿಯೊಳಗಿನ ಕೆಂಡದಹಾಗೆ ಸೇರಿ
ಕೊಂಡಿರುವುದು. ಹಾಗೆಂದರೆ ಈ ಗುಣವು ಯಾರಲ್ಲಿ ಸೇರಿ
ಕೊಂಡಿರುವುದೋ ಅವರೇ ಮಹಾತ್ಮರೆನಿಸುವರು. ಅದು
ಇಂಥವರ ಸಮ ಕಾಲಿಕರಾದ ಸಾಮಾನ್ಯರಿಗೆ ಗೋಚರವಾಗ
ಲಿ, ಅಥವಾ ತತ್ಸದೃಶವಾದ ಯೋಗ್ಯತೆಯುಳ್ಳವರಿಗೆ ಗೋಚರ
ವಾಗಲಿ, ಇಲ್ಲ, ದಿನೇದಿನೇ ಮನುಷ್ಯರು ವಿಶೇಷ ಸಂಗತಿಗ
ಳನ್ನು ತಿಳಿದು ಯೋಚಿಸಿಕೊಳ್ಳುವ ಯೋಗ್ಯತೆಯನ್ನು ಸಂ
ಪಾದಿಸುತ್ತಾ ಬರುವ ಕಾರಣ ತಲತಲಾಂತರದವರಿಗೆ ಗೋ
ಚರವಾಗಲಿ, ಅಂತು ಈ ಗುಣವಿಶೇಷವು ಆ ಮಹನೀ

Digitized by ROJA MUTHIAH RESEARCH LIBRARY



ಯರ ಕಾರ್ಯದಲ್ಲಿ ಗೋಚರವಾದೀತೇ ಅಲ್ಲದೆ, ಮತ್ತೆಬೇರೇ
ವಿಧದಲ್ಲಿ ಅದನ್ನು ಕಂಡು ಹಿಡಿಯುವುದಕ್ಕೆ ಆಗುವದೇ ಇಲ್ಲ.
ಹೀಗಿರುವಲ್ಲಿ ಆ ಕಾಲದ ಸಾಮಾನ್ಯ ಬುದ್ಧಿಯುಳ್ಳ ಹೆಂಗಸರು,
ಇಂಥವರಿಗೆ ಬಹುವಾಗಿ ಹೆಂಡಿರಾಗುವ ಕಾರಣ ಆ ಹೆಂಡಿರಿ
ಗೆ ಈ ವಿಚಿತ್ರ ವಾದ ಬುದ್ಧಿಯ ಯೋಗ್ಯತೆಯು ತಿಳಿಯುವ
ದಿಲ್ಲ. ಕತ್ತೆ ಬಲ್ಲದೆ ಭತ್ತದ ಗುಣವ. ಮುಳ್ಳುಬಲ್ಲದೆ ತನ್ನ
ಮೇಲಿನ ಪುಷ್ಪ ಪರಿಮಳವ. ನಿಜವಾದ ಶಕ್ತಿಯನ್ನರಿಯುವ
ದಕ್ಕೆ ಸಾಮರ್ಥ್ಯವಿಲ್ಲದಿರುವಾಗ, ಪರಸ್ಪರ ಆಲೋಚನೆ ಭೇದಿ
ಸುವುದು. ಇದರಿಂದ ಅನುಭವ ಭೇದಿಸುವುದು. ಇಂಥಾಭೇದ
ದಿಂದ ವೈರಹುಟ್ಟುವುದು; ವೈರದಿಂದ ವಿಯೋಗವು ಸಿದ್ಧವಾಗ
ವುದು. ಇಂಗ್ಲೀಷ್ ಮಹಾಕವಿಗಳಾದ ಷೇಕ್ಸ್ ಪೀರ್ ಬೈರ್ನ್
ಇವರುಗಳಿಗೂ ಈ ದುರವಸ್ಥೆ ಸಂಭವಿಸಿತ್ತು, ಬೈರನ್ನನ
ಹೆಂಡತಿಯು ತನ್ನ ಗಂಡನಿಗೆ ಹುಚ್ಚೆಂದು ಭಯಪಟ್ಟು ಆತ
ನ ಹತ್ತಿರಕ್ಕೆ ಹೋಗುತ್ತಿರಲಿಲ್ಲ. ಹವುದು ಹುಚ್ಚೇಸರಿ. ಬೀದಿ
ಯಲ್ಲಿ ಕಂಡವರ ಮೇಲೆ ಕಲ್ಲಿಡುವ ಹುಚ್ಚಲ್ಲ. ಬೀದಿಯಲ್ಲಿ ಬಿ
ದ್ದಿರುವ ಕಲ್ಲನ್ನು ಆಚೆಗೆ ತೆಗೆದು ಹಾಕುವ ಹುಚ್ಚು. ಎಂ
ತಾದರೂ ಆಗಲಿ ಲೋಕೋತ್ತರವಾದ ಯೋಗ್ಯತೆಯು
ಸ್ವಪ್ರಯೋಜನವನ್ನು ಲೇಶವೂ ಉಂಟುಮಾಡದೆ ಪರಪ್ರ
ಯೋಜನಕ್ಕಾಗಿಯೇ ಒದ್ದಾಡುತಿತ್ತು. ಆದರೆ ಸ್ವಪ್ರಯೋ
ಜನವೂ ದೃಷ್ಟಿಯಲ್ಲಿ ಸ್ವಲ್ಪ ಇದ್ದದಾದರೆ ಅದರ ಮೂ
ಲಕ ಪರೋಪಕಾರಕ್ಕೆ ಉಂಟಾಗುತಿದ್ದ ಪುಷ್ಟಿಯು ಶುದ್ಧವಾ
ದ ಆತ್ಮ ದಂಡನೆಯಿಂದ ಕೊಂಚ ಕಡಿಮೆಯಾಯಿತಲ್ಲಾ ಎಂ
ದು ಖೇದ ಉಂಟಾಗುವುದು. ಅಂತು ಇಂಥವರ ಸಂಸಾರಗ
ಳಲ್ಲಿ ಸೌಖ್ಯವೇನೇನೂ ಇಲ್ಲ. ಕೊನೆಗೆ ವೈಮನಸ್ಯವು ದಿನೇ
ದಿನೇ ಹೆಚ್ಚಿ ಕಾಂಫ್ರೂಷನು ಪತ್ನಿಪರಿತ್ಯಾಗವನ್ನು ಮಾಡಿದನು.

ಈ ಕಾಲದಲ್ಲಿ ಚೀಣಾರಾಜ್ಯದ ಸ್ಥಿತಿಯು ಬಹಳ ಗಲಭೆಯಾಗಿ [ತೀನತೇರವಾಗಿತ್ತು. ಈತನ ಅತ್ಯಂತ ಪ್ರಖ್ಯಾತರಾದ ಶಿಷ್ಯರಲ್ಲಿ [ಒಬ್ಬನಾದ ಮೆಂಸಿ ಎಂಬಾತನು ಹೇಳುವುದೇನೆಂದರೆ: ಲೋಕವೆಲ್ಲಾ ಕೆಟ್ಟು ನಾಶವಾಗಿ ಹೋಗಿತ್ತು. ಸದ್ಧರ್ಮಾಚರಣೆ ಎಲ್ಲಿಯೂ ಇರಲಿಲ್ಲ. ಹಿಂಸೆಯೂ ಕುತರ್ಕವೂ ಎಲ್ಲಾ ಕಡೆಯಲ್ಲಿಯೂ ನಿಬಿಡೀಕೃತವಾಗಿತ್ತು. ಮಂತ್ರಿಗಳು ರಾಜರನ್ನೂ ಮಕ್ಕಳು ತಂದೆಗಳನ್ನೂ ಕೊಲ್ಲುತ್ತಿದ್ದರು. ಕಾಂಫ್ಯೂಷನು ಇದೆಲ್ಲವನ್ನೂ ಕಂಡು ಭೀತನಾಗಿ ಧರ್ಮವನ್ನು ಜೀರ್ಣೋದ್ಧಾರ ಮಾಡಬೇಕೆಂದು ಖಂಡಿತ ಮಾಡಿಕೊಂಡನು. ಕಾಂಫ್ಯೂಷನ ವಿವೇಕವೂ ಪಾಂಡಿತ್ಯವೂ ಎಲ್ಲೆಲ್ಲಿಯೂ ಹೆಸರುಗೊಂಡಿತು. ಈತನು ೨೨ನೇ ವಯಸ್ಸಿನಲ್ಲಿ ಆಚಾರ್ಯಪಟ್ಟವನ್ನು ವಹಿಸಿ ಲೋಕಕ್ಕೆ ಧರ್ಮಬೋಧಕನಾಗಿ ಹೊರಟನು. ವಿಚಾರಪರರಾಗಿ ಪೂರ್ವಿಕರ ಮತವನ್ನು ತಿಳಿದುಕೊಳ್ಳುವುದರಲ್ಲಿ ಆಸಕ್ತರಾದ ಯೌವನಸ್ಥರು ಈತನ ಮನೆಗೆ ಬರಲು ಮೊದಲುಮಾಡಿದರು. ಶಿಷ್ಯರು ಎಷ್ಟು ಅಲ್ಪವಾದ ಗುರುದಕ್ಷಿಣೆಯನ್ನು ತಂದುಕೊಟ್ಟಾಗ್ಯೂ ಆಚಾರ್ಯನು ಅಷ್ಟರಲ್ಲಿಯೇ ತೃಪ್ತನಾಗಿ ಅವರಿಗೆ ಪಾಠವನ್ನು ಹೇಳುತಿದ್ದನು. ಆತನಿಗೆ, ಬೇಕಾದ್ದೆಲ್ಲಾ ಏನೆಂದರೆ: ಶಿಷ್ಯರಿಗೆ ವಿದ್ಯದಲ್ಲಿ ಶ್ರದ್ಧೆ, ಬೋಧೆಯಿಂದ ಶಿಕ್ಷತಕ್ಕ ಪ್ರಯೋಜನವನ್ನು ಹೊಂದುವ ಯೋಗ್ಯತೆ ಇಷ್ಟೇ. ಒಂದಾನೊಂದು ಕಾಲದಲ್ಲಿ ಆತನು—ಜ್ಞಾನಸಂಪಾದನೆಯನ್ನು ಮಾಡಬೇಕೆಂದು ಕುತೂಹಲವಿಲ್ಲದವನಿಗೆ ನಾನು ತತ್ವವನ್ನು ಬಿಚ್ಚಿ ಹೇಳುವುದಿಲ್ಲ; ತಾನಾಗಿ ವಿಚಾರಮಾಡಿ ತಿಳಿದುಕೊಳ್ಳಬೇಕೆಂಬ ಶ್ರದ್ಧೆ ಇಲ್ಲದವನಿಗೆ ನಾನು ಸಹಾಯಮಾಡುವುದಿಲ್ಲ; ನಾನು ಒಂದು ಸಂಗತಿಯಲ್ಲಿ ಒಂದು ಮೂಲೆಯನ್ನು



ತೋರಿಸಲು ಉಳಿದ ಮೂರು [ಮೂಲೆಯನ್ನೂ ಅದರಿಂದ ತಿಳಿದುಕೊಳ್ಳಲಾರದವನಿಗೆ ನಾನು ಪ್ರವಚನವನ್ನು ಹೇಳುವುದಿಲ್ಲ ಎಂದನು.

## ೩ನೇ ಅಧ್ಯಾಯ.

ಇವನ ಮಾತೃವಿನ ಪಂಚತ್ವ. ಸಂಗೀತಾಭ್ಯಾಸ.

ಕ್ರಿ. ಪೂ. ೫೨೭ರಲ್ಲಿ ಕಾಂಫ್ಯೂಷನ ಮಾತೃವು ಮೃತಳಾದಳು. ಅವನ ರಾಜ್ಯವಿಚಾರಣೆಯ ಅಧಿಕಾರಕ್ಕೆ ಇದರಿಂದ ಬಾಧಕ ಉಂಟಾಯಿತು. ಮಾತಾಪಿತೃಗಳಲ್ಲಿ ಯಾರು ಮರಣಹೊಂದಿದಾಗ್ಯೂ ಮಕ್ಕಳು ಸರಕಾರದ ಉಪಾಧೆ ಏನೇ ಆಗಲಿ ಬಿಟ್ಟು ಬಿಡಬೇಕೆಂಬ ಒಂದು ಪುರಾತನ ಪದ್ಧತಿಯನ್ನು ಪೂರ್ವದಲ್ಲಿ ಚೀಣರು ಆಚರಿಸುತಿದ್ದರು. ಕಾಂಫ್ಯೂಷನ ಕಾಲದಲ್ಲಿ ಈ ಆಚಾರವನ್ನು ಯಾರೂ ಪರಿಭಾವಿಸುತಿರಲಿಲ್ಲ, ಆದರೆ ಕಾಂಫ್ಯೂಷನು ವೃದ್ಧಾಚಾರಗಳನ್ನೆಲ್ಲಾ ಅನುಸರಿಸಬೇಕೆಂದು ಮನಸ್ಸುಮಾಡಿ ತನ್ನ ಉದ್ಯೋಗದಿಂದ ನಿವೃತ್ತನಾದನು.

ಚೀಣಾರಾಜ್ಯದಲ್ಲಿ ಶವವನ್ನು ಬೈಲಿನಲ್ಲಿ ಎಸೆದು ಬಿಡುವ ಪದ್ಧತಿ ಈಚೆಗೆ ಉಂಟಾಗಿತ್ತು. ಈ ಕೆಟ್ಟ ಪದ್ಧತಿಯನ್ನು ತಾನು ಅನುಸರಿಸದೆ ಒಳ್ಳೇನಡೆತೆಗೆ ತಾನು ಮೇಲುಪಂಕ್ತಿಯನ್ನು ಹಾಕಬೇಕೆಂದು ಕಾಂಫ್ಯೂಷನು ತನ್ನನ್ನು ಇತರರು ನೋಡಿ ಕಲಿತುಕೊಳ್ಳುವಹಾಗೆ, ತಾಯಿಯ ಉತ್ತರಕ್ರಿಯಾದಿಗಳನ್ನು ಅತ್ಯಂತ ಭಕ್ತಿಯಿಂದಲೂ, ಅಟ್ಟಹಾಸದಿಂದಲೂ ಸಾಂಗವಾಗಿ ನಡಿಸಿದನು. ಡಂಭವೂ, ಔಚಿತ್ಯವೂ, ಮಿಳಿತವಾಗಿದ್ದ ಈ



Digitized by ROJA MUTHIAH RESEARCH LIBRARY

ಕ್ರಿಯಾದಿಗಳಿಂದ ಎಲ್ಲರೂ ಆಶ್ಚರ್ಯದಲ್ಲಿ ಮುಳುಗಿ ಅವರ ಪೂ ರ್ವಾಚರಣೆಯನ್ನು ಯೋಚಿಸಿಕೊಂಡು ವ್ಯಸನಪಟ್ಟು ಮೃತಿ ಹೊಂದಿದವರಿಗೆ ಉತ್ತರಕ್ರಿಯಾದಿಗಳನ್ನು ಭಕ್ತಿಯಿಂದ ಮಾಡ ಲು ಆರಂಭಿಸಿದರು. ಮೊದಲು ಕಾಂಫೂಷನ ಊರಿನಲ್ಲಿಯೂ, ತರುವಾಯ ಆ ರಾಜ್ಯದಲ್ಲಿಯೂ ಆಮೇಲೆ ನೆರೆ ರಾಜ್ಯಗಳ ಲ್ಲಿಯೂ, ಕೊನೆಗೆ ಒಟ್ಟು ಚೀನಾಸಂಸ್ಥಾನದಲ್ಲಿಯೂ ಈ ಪೂರ್ವಾಚರಣೆ ಹರಡಿಕೊಂಡಿತು. ಕಾಂಫೂಷನು ಸತ್ತವ ರ ಶವವನ್ನು ಅಟ್ಟ ಹಾಸದಿಂದ ಸಾರ್ಥಕ್ಯ ಹೊಂದಿಸುವದರಲ್ಲಿ ಮಟ್ಟಿಗೆ ತೃಪ್ತನಾಗಲಿಲ್ಲ. ಸಮಾಧಿಯ ಬಳಿಯಲ್ಲಿ ಯಾಗಲಿ ಅಥವಾ ಗೃಹದಲ್ಲಿಯಾಗಲಿ ಕ್ಲಿಪ್ತವಾದ ಕಾಲದೊಳು ಕೆಲವು ಕರ್ಮಾಚರಣೆಗಳು ನಡೆಯಲೇಬೇಕೆಂದು ನಿಶ್ಚೈಸಿದನು. ಈ ಕಾರಣದಿಂದ ಇದಕ್ಕಾಗಿ ಪಿತ್ರಾಲಯವೆಂಬ ಒಂದು ಆಲ ಯವೂ, ಅಲ್ಲಿ ಪಿತೃದೇವತೆಗಳ ವಿಗ್ರಹಸ್ಥಾಪನೆಯೂ ಅದಕ್ಕೆ ಕಾಲಕಾಲಕ್ಕೆ ಪೂಜೆಯೂ ಇವೆಲ್ಲಾ ಚೀನಾರಾಜ್ಯದಲ್ಲಿ ರೂಢಿ ಗೆ ಬಂದವು. ಇಂಥಾ ಪಿತೃದೇವತಾರಾಧನಾಚರಣೆಯು ಚೀನಾಜನರಲ್ಲಿ ವಿಶೇಷವಾಗಿದೆ. ತಾನು ಜೀರ್ಣೋದ್ಧಾರ ಮಾಡ ಬೇಕೆಂದು ಯತ್ನಿಸಿದ ಪದ್ಧತಿಯು ಇಷ್ಟರಮಟ್ಟಿಗೆ ಸಾಗಿತಲ್ಲಾ ಎಂದು ಕಾಂಫೂಷನು ಸಂತೋಷಭರಿತನಾಗಿ ದೇಶದ ಚರಿ ತ್ರೆಗಳು ಕಾವ್ಯಗಳೇ ಮೊದಲಾದ ಪೂರ್ವಗ್ರಂಥಗಳು ಮತ್ತು ರಾಜ್ಯಭಾರಕ್ರಮಗಳು ರಾಜ್ಯದಲ್ಲಿರತಕ್ಕ ಪದ್ಧತಿಗಳು ಇವುಗ ಳನ್ನು ನೋಡಿ, ವ್ಯಾಸಂಗಮಾಡುತಾ ವಿಚಾರಪರರಾಗಿ ತನ್ನಲ್ಲಿ ಬಂದ ಜನರಿಗೆ ಪಾಠಪ್ರವಚನಗಳನ್ನು ನಡಿಸುತಾ ಲೂ ಎಂಬ ಸ್ಥಳದಲ್ಲಿ ಇದನು.



ಈತನ ೭ನೇ ವಯಸ್ಸಿನಲ್ಲಿ ಕಾಂಫೂಷನು ಸಿಯಾಂಗ ನೆಂಬ ಪ್ರಸಿದ್ಧನಾದ ಸಂಗೀತಗಾರನಸಮೀಪದಲ್ಲಿ ಸಂಗೀತ ವನ್ನು ಅಭ್ಯಾಸಮಾಡುತಿದ್ದನು. ಕಳೆದ ೧೫ ವರುಷದಿಂದಲೂ ಈ ಶಾಸ್ತ್ರವಿಷಯವಾಗಿ ಪರಿಶ್ರಮಪಡುತಿದ್ದ ಕಾಂಫೂಷನ ಆಶೆ ಯು ಇಲ್ಲಿಗೆ ಪೂರ್ತಿಯಾಗಲು ಸಂದರ್ಭದೊರೆಯಿತು. ಆದಿಯಿಂದಲೂ ಈತನಿಗೆ ಸಂಗೀತದಲ್ಲಿ ವಿಶೇಷ ಅಭಿರುಚಿ ಯುಂಟು. ಶಿಶು ಪಶುಗಳಿಗೂ, ಖಗನಾಗಗಳಿಗೂ ರುಚಿಕರ ವಾದ ಗಾನವು ಮನುಷ್ಯನನ್ನು ಎದೆಗೊಳಿಸುವುದು ಏನಾಶ್ಚರ್ಯ? ಆದರಲ್ಲಿಯೂ ಗಾನಕ್ಕೂ ಆದ್ರ್ರಹೃದಯಕ್ಕೂ ಪರಸ್ಪರ ಮೈತ್ರಿಯುಂಟು. ಇದು ತಾಯಿಮಕ್ಕಳ ಹಾಗೆ ಜನ್ಯಜನಕಸಂ ಬಂಧವೋ ಗಾಳಿ ಧೂಳಿನ ಹಾಗೆ ಸಾಮಾನಾಧಿಕರಣ್ಯ ಸಂ ಬಂಧವೋ ಹೇಳಲಾಗದು. ಅಂತೂ ಒಳ್ಳೇ ಜಮಾವಟ್ಟಿನ ಮುಕ್ತಾಯಕ್ಕೆ ತಲೆದೂಗದವನಲ್ಲಿ ಮೂರ್ಛನೆಗೆ ಕಣ್ಣುಮು ಚ್ಚಿ ಅರೆನಿದ್ರೆಯಂಮಾಡುವನಂತೆ ಅಪ್ರಯತ್ನವಾಗಿ ಸ್ತಬ್ಧವಾ ಗದವನಲ್ಲಿ, ಕಂಡವರ ಮಕ್ಕಳನ್ನು ಭಾವಿಗೆ ತಳ್ಳಿ ಅವು ತೇಲಿ ಮುಳುಗುವದನ್ನು ನೋಡಿ ಲಲ್ಲೇಹಾಕುವ ಗುಣವಿಲ್ಲವೆಂದು ನಾವು ಹೇಳುವಾಗ್ಯೆ, ನಾಲ್ಕುಸಾರಿ ಯೋಚಿಸಿಯೇ ಹೇಳಬೇಕು. ಇವರೆಲ್ಲಾ ಒಬ್ಬ ತಾಯಿಮಕ್ಕಳೆಂದು ಲೋಕವಾಡಿಕೆ ಇದೆ. ಹೀಗಿರುವಲ್ಲಿ ವಿಶೇಷವಾಗಿ ಉದಾರವಾದ ಮನಸ್ಸುಳ್ಳ ಕಾಂಫೂ ಷನಿಗೆ ಸಂಗೀತದಲ್ಲಿ ಅಭಿರುಚಿ ಇದ್ದದೇನೂ ಆಶ್ಚರ್ಯವಲ್ಲ ವಿಷಯಗಳ ನಿಜಸ್ವರೂಪವನ್ನರಿತು ಸ್ವಾರಸ್ಯಾನುಭವ ಮಾಡ ತಕ್ಕ ಅಂತರ್ಯೋಗ್ಯತೆಯೇ ಮುಖ್ಯವಾದ್ದು.

ಸವಿಯಾದಲೇಖನ, ಇಂಪಾದಮಾತು, ಅಚ್ಚುಗಟ್ಟಾಗಿ

Digitized by ROJA MUTHIAH RESEARCH LIBRARY

ಕಟ್ಟಿದಮನೆ, ಚಿತ್ರವಿಚಿತ್ರವಾದ ಆಕಾಶ, ಅತ್ಯುನ್ನತವಾದಮರ,
ಹೊಂಬಣ್ಣವಾದ ಮೈ, ಸುಂದರವಾದ ಮುಖ, ಶಿರಣವಾಗಿ
ಮಾಡಿದ ಬದುಕು, ಒಳ್ಳೇ ಕೆಲಸ ಇವುಗಳನ್ನೆಲ್ಲಾ ನೋಡಿದರೆ
ಆನಂದವನ್ನು ಹುಟ್ಟಿಸುವ ನಮ್ಮ ಬುದ್ಧಿ ವಿಶೇಷವೇ ಉತ್ತಮ
ವಾದ ಗಾನವಲ್ಲಿಯೂ ಆನಂದವನ್ನು ಹುಟ್ಟಿಸುವುದು. ಇಂಥ
ವುಗಳಲ್ಲಿ ಪ್ರತಿಯೊಂದೂ ಅದರದರ ಉತ್ತಮೋತ್ತಮವಾದ
ಸ್ವರೂಪಕ್ಕೆ ಅಥವಾ ಸ್ವಭಾವಕ್ಕೆ ಸಮೀಪಿಸಿದ ಹಾಗೆಲ್ಲಾ ಅದ
ರದರ ನಿಜಸ್ವರೂಪಕ್ಕೆ ಅಷ್ಟರಮಟ್ಟಿಗೆ ಸಮೀಪಿಸಿದ ಹಾಗಾ
ಯಿತಾಗಿ, ಉತ್ತಮೋತ್ತಮವಾದ ಗಾನವೇ ಗಾನದ ನಿಜರೂಪ.
ಅತ್ತ ಪರಹಿತವು ನೀತಿಗೆ ಮೂಲ, ನೀತಿಯು ಒಳ್ಳೇ ಕಾರ್ಯಕ್ಕೆ
ಆಧಾರ. ಈ ಒಳ್ಳೇ ಕಾರ್ಯವೇ ಕಾರ್ಯದ ನಿಜರೂಪ. ಒಳ್ಳೇ
ಕಾರ್ಯವೇ ನಮ್ಮ ನಿಜವಾದಮುಖ. ಕೆಟ್ಟಕಾರ್ಯವೇ ಆಟಗಾರನ
ಮುಖ. ಆದಕಾರಣ ಗಾನದ ನಿಜರೂಪವಾದ ಸುಗಾನವನ್ನು
ಕೇಳಿ ಆನಂದಪಡುವ ಬುದ್ಧಿಯೇ ಒಳ್ಳೇಕಾರ್ಯದಲ್ಲಿಯೂ ಆನಂ
ದಪಡುವುದು. ಇಂಥಾ ಒಳ್ಳೇತನವು ಆರ್ದ್ರಹೃದಯದಿಂದ
ಜನಿಸುವುದಾಗಿ ಇಂಥಾ ಹೃದಯಕ್ಕೂ ಗಾನರಸಾಸ್ವಾದನೆಗೂ
ಸಂಬಂಧವಾಯಿತು.

ಹಾಗಾದರೆ ಮತ್ತೆ ಯಾವ ಇತರವಸ್ತುಗಳ ನಿಜಸ್ವರೂ
ಪವನ್ನು ಅರಿತುಕೊಳ್ಳುವ ಬುದ್ಧಿಯೂ ಪರೋಪಕಾರ ತತ್ಪ
ರವಾದ ಆರ್ದ್ರಹೃದಯಕ್ಕೆ ಸಂಬಂಧಪಟ್ಟದ್ದೆಂದು ಹೇಳಬಹು
ದಲ್ಲಾ ? ಗಾನರಸಕ್ಕೆ ಮಾತ್ರವೇ ಈ ಸಂಬಂಧವನ್ನು ಹೇಳು
ವದಕ್ಕೆ ಕಾರಣವೇನು ? ಎಂದು ಕೋರಿನೋಡಿದರೆ, ಉತ್ತರ
ವನ್ನು ಚೆನ್ನಾಗಿ ಯೋಚಿಸಿ ತಿಳಿದುಕೊಳ್ಳಬೇಕಾಗಿದೆ. ಇತರ



ವಸ್ತುಗಳಲ್ಲಿ ಹುಟ್ಟುವ ಆನಂದವು ಅಪ್ರಯತ್ನವಾಗಿ ನಾವು
ಅನುಭವಿಸುವಾಗ ಹಲವು ಇಂದ್ರಿಯಗಳಿಂದ ಹುಟುವುದಾಗಿ
ಇದರ ಸ್ವಭಾವವು ಇಂಥಾದ್ದೇ ಎಂದು ಹೇಳುವಾಗ್ಯೆ ಗಲಭೆ
ಹೆಚ್ಚಾಗುವುದು. ಯಾಲಕ್ಕಿಯಿಂದ ನಮಗೆ ಹುಟ್ಟುವ ಆನಂ
ದವು ಎರಡು ಇಂದ್ರಿಯಗಳಿಂದ ಬರುವುದು. ಅದನ್ನು ತಿನ್ನು
ವಾಗ್ಯೆ ನಾಲಗೆಯರುಚಿಯೂ ಮೂಗಿನ ವಾಸನೆಯೂ ಮಿಳಿತ
ವಾಗಿರುವದರಿಂದ, ಇದರ ಆನಂದವು ಇಂಥಾದ್ದರಿಂದಲೇ
ಹುಟ್ಟಿತೆಂದು ಹೇಳುವದಕ್ಕೆ ಸ್ವಲ್ಪ ತೊಡಕು. ರಸಬಾಳೆ ಹಣ್ಣು
ಕೈಯಿಂದ ಮುಟ್ಟಿದರೆ ಮೃದುವಾಗಿಯೂ, ಕಣ್ಣಿಗೆ ಬಣ್ಣಗೆ
ಚೆನ್ನಾಗಿಯೂ, ಇಂಪಾದವಾಸನೆಯುಳ್ಳದ್ದಾಗಿಯೂ, ತಿಂದರೆ
ರುಚಿಯಾಗಿಯೂ, ಸಿಪ್ಪೆತೆಳುವಾಗಿ ಸುಲಿಯುವದಕ್ಕೆ ಸುಲಭ
ವಾಗಿಯೂ ಇರುವುದು. ಶ್ರೋತ್ರೇಂದ್ರಿಯ ಹೊರತು ಉಳಿ
ದ ನಾಲ್ಕು ಇಂದ್ರಿಯಗಳೂ ಸೇರಿರುವುದಲ್ಲದೆ, ನಮ್ಮ ಹಸ್ತ
ಚಲನ ಸೌಲಭ್ಯವೂ ಸೇರಿ ಒಂದು ವಿಧವಾದ ಆನಂದವನ್ನು
ಈ ಹಣ್ಣು ಉಂಟುಮಾಡುವುದು. ಇದರ ಆನಂದವು ಇಂ
ಥಾದ್ದರಿಂದಲೇ ಹುಟ್ಟಿತೆಂದು ಹೇಳುವದು ಸುಲಭವಾಗಿಲ್ಲ.
ಹೀಗೆ ಆಯಾ ಆನಂದದ ಸ್ವಭಾವವನ್ನೇ ಹೇಳಿತಿಳಿಸುವುದು
ಕಷ್ಟವಾಗಿರುವಾಗ ಆ ಫಲದ ಉತ್ತಮರೂಪ ಅಥವಾ ಅದರ
ನಿಜರೂಪವು ಇಂಥಾದ್ದೇ ಎಂದು ಗ್ರಹಿಸುವುದು ಹೇಗೆ ?
ಇದೂ ಅಲ್ಲದೆ ಒಂದು ಪುಷ್ಪವನ್ನು ನಾವು ಒಂದು ಕಾಡಿನಲ್ಲಿ
ನಿಂತು ವಾಸನೆ ನೋಡುತ್ತೇವೆ. ಆಗ ಹಕ್ಕಿಗಳ ಕೂಗು ಕೇಳು
ವುದು. ವಿಚಿತ್ರವಾದ ಆರಾಮಕ್ಷೇತ್ರಗಳು ಕಾಣುವವು. ಇಂ
ಪಾದಗಾಳಿ ಬೀಸುವುದು. ಈ ಆನಂದಗಳನ್ನೆಲ್ಲಾ ಅನುಭವಿ
ಸುವಾಗ ಉತ್ತರಕ್ಷಣದಲ್ಲಿಯೇ ಹುವ್ವನ್ನೂ ನಾವು ಮೂಸಿವಾ

Digitized by ROJA MUTHIAH RESEARCH LIBRARY

ಸನೆಯನ್ನು ತೆಗೆದು ಕೊಳ್ಳುತಿರುವೆವಲ್ಲವೆ? ಇನ್ನೊಂದರ ಮೇಲೇಯೂ ಗಮನವನ್ನು ಕೊಡಕೂಡದೆಂದು ನಾವು ಪ್ರಯತ್ನಪುರಸ್ಸರವಾಗಿ ಕೂತುಕೊಂಡ ಹೊರತು, ಆವಾಸನೆಯ ಅನುಭವವು ಇತರಸಮಕಾಲಿಕವಾದ ಅನುಭವ ದಂಡುಗದಿಂದ ಆವೃತವಾಗಿರುವ ಕಾರಣ ಆವಾಸನಾಸುಖವು ಇಂಥಾದ್ದೆಂದು ಹೇಳಲು ಸಿಲಕು ಹೆಚ್ಚು. ಮೇಲೂ ತ್ವಗ್ಜಿಹ್ವಾಘ್ರಾಣಗಳಗಿಂತಲೂ ಶ್ರೋತ್ರೇಂದ್ರಿಯವು ಮೇಲಾದ್ದು. ನೇತ್ರೇಂದ್ರಿಯಕ್ಕಿಂತಲೂ ಕೀಳಾದ್ದು. ಆದರೂ ನೇತ್ರೇಂದ್ರಿಯಕ್ಕೆ ಪ್ರತ್ಯೇಕಸ್ವಭಾವಗಳುಳ್ಳ ಬಣ್ಣ ಲಾವಣ್ಯ ಆಕಾರ ಮೊದಲಾದವುಗಳು ವಿಷಯವಾಗಿರುವುವು. ಶ್ರೋತ್ರಕ್ಕೆ ಶಬ್ದ ಒಂದು ಹೊರತು ಮತ್ತೆ ಯಾವುದೂ ವಿಷಯವಲ್ಲ. ಇದೂ ಅಲ್ಲದೆ ಇತರ ಇಂದ್ರಿಯಗಳಲ್ಲಿ ಆಯಾ ಪದಾರ್ಥಗಳೇ ವಿಷಯವಾಗಿರುತಿರಲಾಗಿ, ಗಾನದಲ್ಲಿ ಸ್ವರಗಳ ಪರಸ್ಪರ ಭೇದವೇ ವಿಷಯವಾಗಿ ಆನಂದ ಜನಕವಾದ್ದರಿಂದಲೂ, ಇಂಥಾ ನಿಜವಾದ ಆನಂದಕ್ಕೆ ತದೇಕಧ್ಯಾನತೆಯು ಕೂಡಿದ ಮಟ್ಟಿಗೂ ಆಗತ್ಯವಾದ್ದರಿಂದಲೂ ಶ್ರೋತ್ರೇಂದ್ರಿಯಕ್ಕಿರುವ ಅದ್ವಿತೀಯವಾದ ಶಕ್ತಿಯು ನಿಸರ್ಗತ್ವವನ್ನು ತೊಡಕಿಲ್ಲದೆ ತೋರಿಸುವ ಹಾಗೆ ಉಳಿದ ಯಾವ ಇಂದ್ರಿಯವೂ ತೋರಿಸಲಾರದು. ಹೀಗಿರುವಕಾರಣ ವಸ್ತುವಿನ ನಿಜಸ್ವರೂಪವನ್ನು ಕಂಡು ಹಿಡಿಯುವ ತ್ರಾಣವು ಕಿವಿಗೆ ಖಂಡಿತವಾಗಿಯೂ ಹೆಚ್ಚು ಎಂದು ಹೇಳಬಹುದು.

ಅಂತು ಸಂಗೀತದಲ್ಲಿ ಈತನಿಗಿದ್ದ ಅಭಿರುಚಿಯು ಸಾಧಾರಣವಾದ್ದಲ್ಲ. ಒಂದಾನೊಂದು ವಿನುಕೆಯನ್ನು ಕೇಳಿ ಆ

Digitized by ROJA MUTHIAH RESEARCH LIBRARY



ಅನಂದದಲ್ಲಿ ಮೂರುತಿಂಗಳು ಆಹಾರವೇ ಬೇಕಿಲ್ಲದೇ ಇದ್ದ ಕಾಂಫೂಷನ ಮನಸ್ಸು ಇನ್ನು ಎಷ್ಟು ಉದಾರವಾದ್ದೋ!

---

## ೪ನೇ ಅಧ್ಯಾಯ.

—:0:—

### ರಾಜ್ಯದಿಂದ ರಾಜ್ಯಕ್ಕೆ ಓಡಾಟ.

ಇದು ಹೀಗಿರಲಾಗಿ ಲೂ ರಾಜ್ಯದ ಮಂತ್ರಿಪುತ್ರರಾದಹೋಕೆ, ನಂಕುಂಗ, ಕಿಂಷ, ಇವರು ಈತನ ಶಿಷ್ಯರಾದ ಕಾರಣ ಇವರ ಐಶ್ವರ್ಯದಿಂದಲೂ ಪದವಿಯಿಂದಲೂ ಈತನು ಸುಖವಾಗಿರುವಂತೆ ಉಪಪತ್ತಿ ಕಲ್ಪನೆಯಾಯಿತು. ಕಿಂಷನ ಅಧಿಕಾರ ಬಲವೂ ಸಾಕ್ಸಹಾಯವೂ ಚೋ ರಾಜ್ಯದ ಆಸ್ಥಾನಕ್ಕೆ ಹೊಕ್ಕು ಬರಬೇಕೆಂಬ ಕಾಂಫೂಷನ ಕೋರಿಕೆಯನ್ನು ಕೈಗೂಡಿಸಿದವು. ಈತನು ಜೋಡು ಕುದುರೇ ಸಾರೋಟಿನಲ್ಲಿ ಚೋ ಪಟ್ಟಣಕ್ಕೆ ಹೋದನು. ಆದರೆ ಚೋ ಪಟ್ಟಣಕ್ಕೆ ಬಂದದ್ದು ಅಲ್ಲಿನ ಅರಸುಗಳ ಮೂಲಪುರುಷನು ನಡಿಸುತ್ತಿದ್ದ ಆಚರಣೆಗಳನ್ನೂ ಮಾಡುತ್ತಿದ್ದ ಪ್ರವಚಗಳನ್ನೂ ವಿಚಾರಿಸಿ ತಿಳಿದುಕೊಳ್ಳುವುದಕ್ಕೋಸ್ಕರವೇ ಹೊರತು ರಾಜ್ಯನೀತಿಗೋಸ್ಕರವಲ್ಲ. ಆದರೆ ಅಲ್ಲಿ ಇವನು ಬಹುದಿವಸ ಇರದೆ ಒಂದು ವರುಷದಲ್ಲಿಯೇ ಲೂಗೆ ಹಿಂತಿರುಗಿಬಂದು ಎಂದಿನಂತೆ ಶಿಷ್ಯರಿಗೆ ಪಾಠವನ್ನು ಹೇಳಲು ಮೊದಲು ಮಾಡಿದನು. ಈತನ ಖ್ಯಾತಿ ಹೆಚಿತು. ಅನೇಕ ಪ್ರಾಂತಗಳಿಂದ

ಈತನ ಬಳಿಗೆ ಶಿಷ್ಯರು ಬಂದರು. ಅವರ ಸಂಖ್ಯೆ ೩,೦೦೦ದ ವರಿಗೂ ಬಂತು. ಈ ಶಿಷ್ಯರೆಲ್ಲಾ ಒಟ್ಟಾಗಿ ಸೇರಿ ಒಂದೇ ಕೂಟವಾಗಿ ಒಂದುಕಡೆಯಲ್ಲಿ ವಾಸವಾಗಿದ್ದರೆಂದು ನಾವು ಯೋಚಿಸಕೂಡದು. ಕೆಲವರುಮಾತ್ರ ಹಾಗಿದ್ದರೂ ಇರಬಹುದು. ಕಾಂಫೂಷನು ತನ್ನನ್ನು ಮೆಚ್ಚಿ ಸ್ತೋತ್ರಮಾಡತಕ್ಕ ಶಿಷ್ಯರಿಂದ ಆವೃತನಾಗಿರುತಿದ್ದನು. ಆದರೆ ಇವರಲ್ಲಿ ಅನೇಕರು ಅವರವರ ಕಾರ್ಯೋದ್ಯೋಗನಿರತರಾಗಿಯೇ ಇರುತಿದ್ದರು. ತಮಗೆ ಬುದ್ಧಿವಾದವೂ ಪಾಠಪ್ರವಚನಗಳೂ ಅಗತ್ಯವಾಗಿದ್ದಾಗ ಈ ಆಚಾರ್ಯನ ಸಮೀಪಕ್ಕೆ ಬಂದು ತಮ್ಮ ಸಂಶಯಪರಿಚ್ಛೇದವನ್ನು ಮಾಡಿಕೊಂಡು ಹೋಗುತ್ತಿದ್ದರು. ಆದರೆ ಈತನು ಲೂ ಎಂಬ ಸ್ಥಳದಲ್ಲಿ ವಿಷೇಷದಿವಸ ಇರಲಿಲ್ಲ. ಅಲ್ಲಿನ ದೊರೆಯು ಶತ್ರುಪೀಡಿತನಾಗಿ ತ್ಸಿ ಎಂಬ ಸ್ಥಳಕ್ಕೆ ಓಡಿಹೋಗಲು ಕಾಂಫೂಷನೂ ಅಲ್ಲಿಗೇ ಹೋದನು.

ಷೀ ಚಕ್ರವರ್ತಿಯ ಆಸ್ಥಾನದಲ್ಲಿ ಖ್ಯಾತಿಗೊಂಡಿದ್ದ ಸಂಗೀತವಿದ್ಯದ ಶೇಷವು ಏನಾದರೂ ಅಲ್ಲಿರಬಹುದೆಂಬ ಆಶೆಯೂ ಸಹಾ ಈತನನ್ನು ಅಲ್ಲಿಗೆ ಆಕರ್ಷಿಸಿತು. ಅದು ಹೇಗಾದರೂ ಇರಲಿ, ಅವನು ಆರಾಜಧಾನಿಯಾದ ತ್ಸಿಪಟ್ಟಣಕ್ಕೆ ಹೋಗುತ್ತಾ ದಾರಿಯಲ್ಲಿ ಕೇಳಿದ ಒಂದಾನೊಂದು ಗಾನದಿಂದಲೇ ಕಾಂಫೂಷನು ಆನಂದಪರವಶನಾಗಿ ಮೂರುತಿಂಗಳ ವರೆಗೆ ಆಹಾರವನ್ನುಕೂಡ ಮುಟ್ಟಲು ಮನಸ್ಸಿಲ್ಲದೆಹೋದ್ದು. ತರುವಾಯ ಕಾಂಫೂಷನು—ಸಂಗೀತ ಇಂಥಾ ಉತ್ತಮೋತ್ತಮವಾದ ಸ್ಥಿತಿಗೆ ಬರಬಹುದೆಂದು ನಾನು ತಿಳಿದಿರಲಿಲ್ಲ. ಎಂದುಕೊಂಡನು. ಈತನು ರಾಜಧಾನಿಯಾದ

Digitized by ROJA MUTHIAH RESEARCH LIBRARY



ಎಂಬ ಸ್ಥಳಕ್ಕೆ ಹೋಗುತ್ತಿರುವಾಗ ಒಂದಾನೊಂದು ಸಂಗತಿ ನಡೆಯಿತು. ಈಮಹಾತ್ಮನು ಪ್ರತಿಯೊಂದು ಸಂದರ್ಭದಲ್ಲಿಯೂ ತನ್ನ ಶಿಷ್ಯರಿಗೆ ಒಂದು ನೀತಿಯನ್ನು ತಪ್ಪದೆ ತೋರಿಸುತಿದ್ದನೆಂಬುವುದಕ್ಕೆ ಒಂದು ಇತಿಹಾಸವಾಗಿ ಆ ಸಂಗತಿಯು ಇಲ್ಲಿ ಸೂಚಿಸಿದೆ. ಕಾಂಫೂಷನೂ, ಅವನ ಜೊತೆಯಲ್ಲಿದ್ದವರೂ ದಾರಿಯಲ್ಲಿ ಬರುತ್ತಾ ಒಂದು ಸಮಾಧಿಯನ್ನು ಕಂಡರು. ಅದರ ಸಮೀಪದಲ್ಲಿ ಒಬ್ಬ ಸ್ತ್ರೀಯು ಗೋಳಾಡುತ್ತಾ ಕೂತಿದ್ದಳು. ಕಾಂಫೂಷನು ಕೂಡಲೇ ದಾರಿಯಲ್ಲಿ ನಿಂತು ಆ ಹೆಂಗಸಿನ ಪ್ರಲಾಪಕ್ಕೆ ಕಾರಣವನ್ನು ವಿಚಾರಿಸೆಂದು ತನ್ನ ಶಿಷ್ಯನೊಬ್ಬನನ್ನು ಅತ್ತ ಅಟ್ಟಿದನು. ವಿಚಾರಿಸಲಾಗಿ ಆ ಅಬಲೆಯು ಶಿಷ್ಯನನ್ನು ಕುರಿತು—ಅಯ್ಯಾ ನಾನೇನು ಹೇಳಲಿ? ನನ್ನ ಗಂಡನ ತಂದೆಯನ್ನು ವ್ಯಾಘ್ರವು ಇಲ್ಲಿ ಹಿಡಿದು ಕೊಂದಿತು. ಇದೇ ರೀತಿಯಲ್ಲಿ ನನ್ನ ಗಂಡನೂ ಕೊನೆಗ ನನ್ನ ಮಗನೂ ಆ ಕ್ರೂರಮೃಗದಿಂದ ಇಲ್ಲಿಯೇ ಹತರಾದರು ಎಂದಳು.; ಆದರೆ ಇಲ್ಲಿ ಯಾಕೆ ಕೂತಿದ್ದಿಯೆ ಎಂದು ಕೇಳಲಾಗಿ ಅವಳು—ಯಾಕೆಂದರೆ ಲೋಕಬಾಧಕವಾದ ರಾಜ್ಯಭಾರದ ಕಾಟವು ಇಲ್ಲಿಲ್ಲ, ಎಂದಳು. ಕೂಡಲೇ ಕಾಂಫೂಷನು ಶಿಷ್ಯವರ್ಗವನ್ನು ಕುರಿತು—ಹುಡುಗರಾ ನೋಡಿಕೊಳ್ಳಿ, ಲೋಕಬಾಧಕವಾದ ರಾಜ್ಯಭಾರವು ಹುಲಿಗಿಂತಲೂ ಅತಿ ಭಯಂಕರವಾದ್ದು, ಎಂದನು.

ಆದರೆ ರಾಜ್ಯಭಾರವೆಂಬ ಒಬ್ಬ ಪುರುಷ ಬೇರೆಯಾಗಿಲ್ಲ. ಸರ್ಕಾರವೆಂಬುದೇ ಒಂದು ದೊಡ್ಡವ್ಯಕ್ತಿ. ಅದರ ಅಂಗ

ಗಳೇ ಅಧಿಕಾರಿಗಳು. ಈ ಅಂಗಗಳು ಸತ್ಕಾರ್ಯಗಳನ್ನು ಮಾಡಿದರೆ ಸರ್ಕಾರ ಸತ್ಪುರುಷನಾಗುತಾನೆ, ದುಷ್ಕಾರ್ಯಗಳನ್ನು ಮಾಡಿದರೆ ಅವ ದುಷ್ಟನಾಗುತಾನೆ. ಲೋಕದಲ್ಲಿ ಮತ್ತೊಂದು ಪ್ರಾಣಿಯನ್ನು ಕೊಂದು ತಾನು ಬದುಕಬೇಕೆಂಬ ಒಂದು ವಿಜಾತೀಯವಾದ ಸ್ವಭಾವವು ಸಮಸ್ತ ಜೀವರಾಶಿಗಳಲ್ಲಿಯೂ ಕೊನೆಗೆ ಸಸ್ಯಾದಿಗಳಲ್ಲಿಯೂ ಕೂಡ ವ್ಯಾಪಿಸಿದೆ. ಇದರಂತೆ ಚಿಕ್ಕಮೀನನ್ನು ದೊಡ್ಡಮೀನು ತಿಂದರೂ ಸರಿಯೆ, ಇಲ್ಲ ನೊಣವನ್ನು ಕಪ್ಪೆಯೂ, ಕಪ್ಪೆಯನ್ನು ಹಾವೂ, ಹಾವನ್ನು ಗರುಡನೂ, ಇಲಿಯನ್ನು ಬೆಕ್ಕೂ, ಬೆಕ್ಕನ್ನು ನಾಯಿಯೂ, ದನವನ್ನು ಹುಲಿಯೂ ತಿಂದರೂ ಸರಿಯೆ, ಮೇಲೆ ಹೇಳಿದ ಅದೇ ಸ್ವಭಾವವು ವ್ಯಕ್ತವಾಗಿರುವುದು. ಇದು ಆತ್ಮ ಸಂರಕ್ಷಣೆಗೆ ಸ್ವಲ್ಪವಾಗಿ ಅಗತ್ಯವಾದ್ದೇನೋ ಸರಿ. ಇದು ಮನುಷ್ಯರಾಶಿಗೂ ಇತರ ಜಂತುಗಳಿಗೂ ಸಾಮಾನ್ಯವಾದ ಗುಣವಾಗಿದೆ. ಮನುಷ್ಯನ ಜನ್ಮ ಅಗ್ರಜನ್ಮವಾಗಿ ಇತರ ಒಳ್ಳೇ ಗುಣ ಸಮುದಾಯಗಳಿರುವ ಕಾರಣ, ಇದು ಸ್ವಾರ್ಥಪರತ್ವವೆನಿಸಿಕೊಂಡು ಅಧಮ ಗುಣವಾಗಿ ನಿಲ್ಲುವುದು. ಸ್ವಾರ್ಥ ಪರಾರ್ಥಗಳೆರಡೂ ಸೇರಿದ್ದರೆ ಇದು ಮಧ್ಯಮ. ಶ್ರೀಗಂಧದ ಹಾಗೆ ಪರಾರ್ಥವೇ ಆದರೆ ಇದು ಉತ್ತಮ. 'ನೆರೆಮನೆ ತಿಪ್ಪಾಭಟ್ಟನಿಗೆ ಬರದೇ ಹೋದ ಹಸು ಒಂದು, ನನಗೆ ಬಂದಹಸು ಒಂದು, ಹೀಗೆ ನನಗೆ ಎರಡು ಗೋದಾನ ಬಂತೆನ್ನುವುದು, ಅಧಮಾಧಮಗುಣ. ಈ ಕೊನೇ ಗುಣವು ಮನುಷ್ಯವರ್ಗದಲ್ಲಿಯೇ ಇರುವುದಾದ್ದರಿಂದ ಈ ಭಾಗದಲ್ಲಿ ಮನುಷ್ಯನು ಮೃಗಗಳಿಗಿಂತಲೂ ಕೇಡು. ಆದರೆ ಮತ್ತೊಂದನ್ನು ಕೊಂದು ತಾನು ಬದುಕಬೇಕೆಂಬ ಅಧಮ ಗುಣ



ವು ಮನುಷ್ಯನಲ್ಲಿ ಬೇರೆ ರೂಪವಂ ತಾಳಿತು. ನಿಜವಾಗಿ ಕೊಲ್ಲಲೇಬೇಕೆಂಬ ಅಪೇಕ್ಷೆ ಹೋಗಿ ಮತ್ತೊಬ್ಬ ನಮ್ಮ ಅಡಿಯಾಳಾಗಿ ತಮ್ಮ ಪ್ರಯೋಜನಕ್ಕೆ ಅನುಕೂಲನಾಗಿದ್ದರೆ ಸಾಕೆಂಬುವುದರಲ್ಲಿ ತೃಪ್ತಿ ಹೊಂದಿತು. ಕೊನೆಗೆ ಅದೂ ಕಡಮೆಯಾಗಿ ಮತ್ತೊಬ್ಬ ನಮ್ಮ ಪಾದಾಉಜ್ಜುವ ಚಿಟಗಂಣನಾಗಿಯೇ ಇರಬೇಕೆಂಬ ಅಹಂ ಬ್ರಹ್ಮತ್ವವಾಯಿತು. ಈ ಪದವಿಯನ್ನು ಹೊಂದಲು ಮಾಡುವ ಪ್ರಯತ್ನಗಳೆಲ್ಲಾ ಪರಪೀಡಾಕರವಾದ್ದು. ಅನ್ಯರ ವಿಧೇಯತೆಯು ಸರಕಾರಕ್ಕೆ ಸ್ವಲ್ಪ ಮಟ್ಟಿಗೆ ಬೇಕಾದ್ದೇ ಸರಿ. ಆದರೆ ಇದನ್ನು ಸಂಪಾದಿಸುವುದೇ ಮುಖ್ಯವಾದ್ದು, ಎಂದು ತಿಳಿಯತಕ್ಕ ಉದ್ಯೋಗಸ್ಥರು ಸರಕಾರದಲ್ಲಿ ವಿಶೇಷವಾಗಿರುವರು. ಅವರಲ್ಲಿ ಈ ತತ್ವಜ್ಞಾನವೃದ್ಧಿ ಹೊಂದಿರುವ ಹಾಗೆ ಉಳಿದ ಸುಗುಣಗಳೆಲ್ಲಾ ಹೊಂದಿರುವುದಿಲ್ಲ. ಯಾವುದು ಕಷ್ಟವಾದ ಕೆಲಸವೊ ಆದೇ ಮುಖ್ಯವಾದ ಕೆಲಸವಾಗುವುದು. ಪ್ರಜಾಸಂರಕ್ಷಣೆಯ ನಿಂತ ಕೆಲಸವೆಲ್ಲಾ ಸುಲಭಸಾಧ್ಯವಾದ್ದರಿಂದ ಅದು ಮರೆತುಹೋಗುವುದು, ಆಚರಣೆಗೆ ಬರುವುದೇ ಇಲ್ಲ. ಇಂಥ ಅವಿವೇಕದಿಂದ ಹೀಗಾಡಿ ಹಾಗಾಡಿ ಅಧಿಕಾರವೆನ್ನುವುದು, ಪರಪೀಡನಕ್ಕೆ ಪ್ರತಿಪದವಾಯಿತು. ಇಂಥಾ ಲೋಕಕಂಟಕರಾದ ಅಧಿಕಾರಿಗಳ ರಾಜ್ಯಭಾರವೇ ಹುಲಿಗಿಂತಲೂ ಭಯಂಕರವಾದ್ದೆಂದು ಕಾಂಫೂಷನ ಅಭಿಪ್ರಾಯವೇ ಹೊರತು ಪ್ರಪಂಚದಲ್ಲಿ ರಾಜ್ಯಭಾರವೆಂಬುದೆಲ್ಲಾ ಅಂಥಾದ್ದೆಂದು ಆತ ಹೇಳಿದ ಹಾಗೆ ಅರ್ಥಮಾಡಕೂಡದು. ಹಾಗಿಲ್ಲದಿದ್ದರೆ ಆತನಿಗಿದ್ದ ಅನ್ಯಾದೃಶವಾದ ರಾಜಕೀಯ ವ್ಯಾಪಾರಶಕ್ತಿಯೂ, ಖಿಲವಾಗಿ ಹೋಗುತಿದ ರಾಜ್ಯಗಳನ್ನು ಕ್ರಮಪಡಿಸಬೇಕೆಂದು ಆತ ಮಾಡಿದ ಪ್ರಯತ್ನವೂ ಅರ್ಥವಿಲ್ಲವಾಗುವವು.

Digitized by ROJA MUTHIAH RESEARCH LIBRARY

ಇದಂತಿರಲಿ, ಕಾಂಫೂಷನು ತ್ಸಿ ಪಟ್ಟಣಕ್ಕೆ ಬಂದದನ್ನು ಕೇಳಿ ಅಲ್ಲಿನ ಅರಸು ಈ ಪ್ರಸಿದ್ಧನಾದ ಪಂಡಿತನನ್ನು ಎದುರುಗೊಂಡು ಕರೆದುಕೊಂಡು ಹೋಗಿ ಕುಶಲಪ್ರಶ್ನೆಯಾದಮೇಲೆ ಮಿತವಾಗಿ ಸಂಭಾಷಣೆಯಂ ಮಾಡಿದನು. ಕಾಂಫೂಷನು ಅರಸನಿಗೆ ರಾಜನೀತಿಯನ್ನೂ ಅನೇಕ ತತ್ವಗಳನ್ನೂ ಉಪದೇಶಿಸಿದನು. ತರುವಾಯ ಧೊರೆಯು ಇಂಥಾ ಪ್ರಸಿದ್ಧಪುರುಷನಿಗೆ ಪ್ರತ್ಯುಪಕಾರವನ್ನು ಮಾಡಿ ಯಶಸ್ಸನ್ನು ಸಂಪಾದಿಸಬೇಕೆಂಬ ಆಶೆಯಿಂದ ಲಿರ್ಕ್ಯೂ ಎಂಬ ಗ್ರಾಮವನ್ನು ಜಹಗೀರಿಯಾಗಿ ಸ್ವೀಕರಿಸಬೇಕೆಂದು ಮುನಿಯನ್ನು ಬೇಡಿಕೊಂಡನು.

ಆದರೆ ಉದಾತ್ತಸ್ವಭಾವವು ಇಂಥಾ ಉಪಹಾರಗಳನ್ನು ಸ್ವೀಕರಿಸುವಂಥಾದ್ದಲ್ಲ. ಸ್ವತಃಶ್ರಮಪಟ್ಟು ಸಂಪಾದನೆ ಮಾಡತಕ್ಕ ಶಕ್ತಿಯೂ, ಉದಾರವಾದ ಮನಸ್ಸೂ, ಇವೆರಡೂ ಪರದ್ರವ್ಯಾಣಿ ಲೋಷ್ಟವತ್ ಎಂಬ ಮಾತನ್ನು ದೃಢೀಕರಿಸುವುದಕ್ಕೆ ಸಹಕಾರಿಗಳು. ಉಪಹಾರವು ಹಿಂದೆ ಮಾಡಿದ ಕಾರ್ಯಕ್ಕೆ ಪ್ರತಿಯಾಗಿರಬೇಕು. ಇಲ್ಲ ಭೋಕ್ತನೂ ಶಿಶು ಪಶುಗಳ ಹಾಗೆ ಸಾಮರ್ಥ್ಯಲೋಪದಿಂದ ಸಂರಕ್ಷಣಾರ್ಹನಾಗಿರಬೇಕು. ಹಿಂದೆ ಮಾಡಿದ ಕಾರ್ಯವಿಲ್ಲದೆ ಕೊಟ್ಟದ್ದನ್ನು ಸ್ವೀಕರಿಸುವುದು ಎಂದರೆ ಸಾಮರ್ಥ್ಯ ಲೋಪವನ್ನು ಪರೋಕ್ಷವಾಗಿ ಒಪ್ಪಿಕೊಂಡಹಾಗಾಯಿತು. ಶಕ್ತಿಯೂ ಇದ್ದು ಅದು ತನಗೆ ಇದೆ ಎಂಬ ಜ್ಞಾನವೂ ಇದ್ದು ಕೊಡತಕ್ಕದಾತನಿಗೆ ಸಮಯಾಂತರದಲ್ಲಿ ಇಲ್ಲದೇ ಹೋದೀತೆಂಬ ಬೆಣ್ಣೆಯಂಥಾ ಮನಸ್ಸೂ ಇರತಕ್ಕವರಿಗೆ ಇಂಥಾ ಅಂಗೀಕಾರವು ಹೇಯವಾದ್ದೆಂದು ಖಂಡಿತವಾಗಿ ತೋರುವುದು. ಆದ ಕಾರಣ ಕಾಂಫೂಷನು ಕೂಡಲೆ ದೊರೆಯ ಮುಖವನ್ನು ನೋಡಿ— ರಾಜಾಧಿರಾಜನೆ,



ಇಂಥಾ ಉಪಹಾರವನ್ನು ನಾನು ಖಂಡಿತವಾಗಿಯೂ ಸ್ವೀಕರಿಸುವುದಿಲ್ಲ ಎಂದು ತಿರಸ್ಕರಿಸಿ ಶಿಷ್ಯರನ್ನು ಕುರಿತು— ಪುರುಷಶ್ರೇಷ್ಠನಾದವನು ಪರರಲ್ಲಿ ತಾನು ಮಾಡಿದ ಸೇವೆಗೆ ಪ್ರತಿಯಾಗಲ್ಲದೆ ಸುಮ್ಮನೆ ನಿಷ್ಕಾರಣವಾಗಿ ಯಾರಿಂದಲೂ ಉಪಹಾರವನ್ನು ಈಸುಕೊಳ್ಳಕೂಡದು ; ಧೊರೆಗೆ ರಾಜನೀತಿಯನ್ನು ನಾನು ಹೇಳಿದೆ, ಅದನ್ನು ಇನ್ನೂ ಆತನು ಆಚರಣೆಗೆ ತರಲಿಲ್ಲ. ಆದಾಗ್ಯೂ ಈ ಗ್ರಾಮವನ್ನು ಮಾತ್ರ ನನಗೆ ಮಾನ್ಯವಾಗಿ ಕೊಡುತಾನಂತೆ. ಹಾಗಾದರೆ ನನ್ನ ಅಭಿಪ್ರಾಯವನ್ನು ತಿಳಿದುಕೊಳ್ಳಲು ಆತನು ಇನ್ನೂ ಬಹಳ ದೂರವಿದಾನೆ ಎಂದನು. ದೊರೆ ದೊರೆಯಾಗಿಯೂ ಮಂತ್ರಿ ಮಂತ್ರಿಯಾಗಿಯೂ, ತಂದೆ ತಂದೆಯಾಗಿಯೂ, ಮಗ ಮಗನಾಗಿಯೂ ಎಲ್ಲಿ ಇರುತಾರೆಯೋ ಅಂಥಾ ಸ್ಥಳದಲ್ಲಿ ಉತ್ತಮವಾದ ರಾಜಭಾರವಿದ್ದೀತು, ಎಂದು ಕಾಂಫೂಷನು ಆ ಅರಸನಿಗೆ ಧರ್ಮಬೋಧೆಯನ್ನು ಮಾಡಿದನು ಹೀಗೆ ತಿರಸ್ಕರಿಸಿದ ಕಾರಣ ನಾವು ಹಿಂದೆ ಮಾಡಿದ ಕಾರ್ಯಗೌರವಕ್ಕಾಗಿ ಉಪಹಾರ ನಮಗೆ ದೊರೆತಾಗ್ಯೂ ಆ ನಮ್ಮ ಕಾರ್ಯದಿಂದಾತನಿಗೆ ಪ್ರಯೋಜನವಿಲ್ಲದ ಪಕ್ಷಕ್ಕೆ ಆಗಲೂ ನಾವು ಅಂಥಾ ಭಿತ್ತಿಯನ್ನು ಸ್ವೀಕರಿಸಕೂಡದೆಂದಹಾಗಾಯಿತು. ಇದು ಬಿಸಸ್ತೈನ್ಯೋಪಾಖ್ಯಾನದಲ್ಲಿ ಸಪ್ತಋಷಿಗಳು ತೋರಿಸಿದ ನೈಸ್ಪೃಹ್ಯಕ್ಕೆ ಸಮಾನವಾದ್ದಾಗಿದೆ.

ಆದರೂ ತ್ಸಿ ಪಟ್ಟಣವು ಕಾಂಫೂಷನ ಮನಸ್ಸಿಗೆ ಅಷ್ಟೊಂದು ತಕ್ಕ ಸ್ಥಳವಾಗಿರಲಿಲ್ಲ. ಹೀಗಿದ್ದಾಗ್ಯೂ ಅನ್ಯದೇಶೀಯನಾದ ಈತನಿಗೆ ಅಲ್ಲಿ ಯಾವ ಅಧಿಕಾರವೂ ಇರಲಿಲ್ಲವಾಗಿ ಆತನ ಯೋಗ್ಯತೆಗೆ ಅರ್ಹವಾದ ಮರ್ಯಾದೆಯನ್ನು ತೋ

Digitized by ROJA MUTHIAH RESEARCH LIBRARY

ರಿಸಬೇಕೆಂದು ಅರಸು ಯತ್ನಿಸಿದನು. ಆದ್ದರಿಂದ ಕಾಂಫ್ಯೂಷನಿಗೆ ತ್ಸಿ ರಾಜ್ಯದಲ್ಲಿ ಒಂದು ಕೋಶಾಧಿಕಾರ ದೊರೆಯಿತು. ಇತರ ದೇಶಗಳಲ್ಲಿದ್ದಂತೆಯೇ ಆಕೋಶದ ಸ್ಥಿತಿಯೂ ಬಹಳ ಕೆಟ್ಟಿತ್ತು. ಅಲ್ಲಿನ ದಂಡನಾಥಿಕಾರಿಗಳೆಲ್ಲರೂ ಸ್ವಪ್ರಯೋಜನಪರಾಯಣರಾಗಿ ಲಂಚಕ್ಕೆ ಪ್ರತ್ಯುಪಕಾರವೆಂದು ಹೆಸರಿಟ್ಟುಕೊಂಡು ಜನರನ್ನು ಭಾಧಿಸುತಿದ್ದರು. ಕಾಯುವವರೇ ಕೊಲ್ಲುವುದಕ್ಕೆ ಬಂದರೆ ಕಾಪಾಡುವವರು ಯಾರೂ ಇಲ್ಲ. ಪ್ರಜೆಗಳು ಸಂಪಾದಿಸಿದ ಕಾಸಿನಮೇಲಿನ ಕಿಲುಬು ಸಹ ಅಧಿಕಾರಿಗಳ ಪಾಲಾಗಿ ಜನರು ದಾರಿದ್ರ್ಯದಿಂದ ಹೀನ ಸ್ಥಿತಿಯಲ್ಲಿದ್ದರು. ಕಾಂಫ್ಯೂಷನ ಮನಸ್ಸಿಗೆ ಇದು ತಟ್ಟಿ ಇಂಥಾ ದುರ್ಮಾರ್ಗರನ್ನು ಅಡಗಿಸಬೇಕೆಂದು ಸಂಕಲ್ಪವಮಾಡಿದನು. ಒಬ್ಬ ದೊಡ್ಡ ಅಧಿಕಾರಿಯನ್ನು ಹಿಡಿಸಿ ತಾನೇ ನಿಂತು ವಿಚಾರಣೆ ಮಾಡಿ ಅವನಿಗೆ ಶಿಕ್ಷೆಯನ್ನು ವಿಧಿಸಿದನು. ಇದರಿಂದ ಅತ್ಯಂತ ಭೀತಿ ಹುಟ್ಟಿ ಲಂಚವು ಚಿಗುಟಿಹಾಕಿ ಬಿಟ್ಟಹಾಗಾಯಿತು. ಆದರೆ ಬಹಿರಂಗವಾದ ಭೀತಿಯು ಅಂತರಂಗವಾದ ದ್ವೇಷವನ್ನು ಉತ್ಪತ್ತಿ ಮಾಡಿತು. ಆ ರಾಜ್ಯದ ಅಧಿಕಾರಿಗಳೆಲ್ಲಾ ಇವನನ್ನು ಹೇಗಾದರೂ ಮುರಿಯಬೇಕೆಂದು ಬದ್ಧಕಂಕಣರಾದರು. ಯಾವ ಕಾಲಕ್ಕೆ ಯಾವ ಅಭಿಮತ ಹೊಸದೋ ಅಂಥಾದ್ದನ್ನು ನಿರ್ಮೂಲವಮಾಡಬೇಕೆಂದು ಅನೇಕವಾದ ಪ್ರಯತ್ನ ನಡೆಯುವುದು. ಆ ಅಭಿಮತವು ಸತ್ಯವಾದ್ದೆಂದು ತಮ್ಮ ಪಂಚಭೂತಸಾಕ್ಷಿಯಾಗಿಯೂ ತಿಳಿದಿದ್ದಾಗ್ಯೂ ಅದರಿಂದ ಆತ್ಮೀಯವಾದ ಉಪಹತಿ ಉಂಟಾಗುವ ಕಾರಣ ಆತ್ಮಸಂರಕ್ಷಣಾರ್ಥವಾಗಿ ಎಲ್ಲರೂ ಸೇರಿ "ಲಂಗೋಟಿ ಕಟ್ಟಿದ ಊರಿನಲ್ಲಿ ಕಟ್ಟಿದವನೇ ಹುಚ್ಚನೆಂಬ ನಾಣ್ಣುಡಿಯ ಅರ್ಥವನ್ನು

Digitized by ROJA MUTHIAH RESEARCH LIBRARY



ದೃಢೀಕರಿಸಿದರು. ಕಾಂಫ್ಯೂಷನೇ ಅಲ್ಲಿ ಲಂಗೋಟಿ ಕಟ್ಟಿ ಹುಚ್ಚನಾದನು. ಹೀಗಿರುವುದರಿಂದ ತ್ಸಿ ದೊರೆಯ ಸಮೀಪವರ್ತಿಗಳಾದ ಕೆಲವರು, ಇವ ಕಾರ್ಯನಿಷ್ಪ್ರಯೋಜಕನೆಂತಲೂ, ದುರಹಂಕಾರಿ ಎಂತಲೂ, ಸಾವಿರಾರು ವಕ್ರಚೇಷ್ಟೆಗಳಿಂದ ಅಂಕಿತನಾದವನೆಂತಲೂ ಕಾಂಫ್ಯೂಷನನ್ನು ಹಳಿದರು. ಆದರೂ ಇವನಿಗೆ ಪುಷ್ಕಳವಾದ ಸರ್ವಮಾನ್ಯವನ್ನು ಕೊಡತಕ್ಕದ್ದೆಂದು ಕೊನೆಗೆ ನಿಷ್ಕರ್ಷೆಯಾಯಿತು.

ಆದರೆ ತಾನು ಹೇಳಿದ ಬುದ್ಧಿವಾದವನ್ನು ಆ ಅರಸನು ಅನುಸರಿಸಿ ನಡೆದ ಹೊರತು ಅಂಥಾ ಭಿತ್ತಿಯನ್ನು ತಾನು ಸ್ವೀಕರಿಸುವುದಿಲ್ಲವೆಂದು ಕಾಂಫ್ಯೂಷನು ತಿರಸ್ಕರಿಸಿದನು. ಮೇಲೂ ತ್ಸಿ ರಾಜ್ಯದ ಜನರು ಈತನನೀತಿಮಾರ್ಗವನ್ನ ಅನುಸರಿಸಿ ನಡೆಯಲು ಸಿದ್ಧರಾಗಿರಲಿಲ್ಲ. ಇದರಿಂದ ಅಸಮಾಧಾನಹುಟ್ಟಿ ಕಾಂಫ್ಯೂಷನು ತಾನು ಬಂದ ಲೂ ದೇಶಕ್ಕೆ ಹಿಂತಿರುಗಿ ಹೊರಟುಹೋದನು. ಈ ಲೂದೇಶವು ಇನ್ನೂ ಅವ್ಯವಸ್ಥೆಯಾಗಿಯೇ ಇತ್ತು. ಅಲ್ಲಿನ ರಾಜ್ಯಭಾರವು ಬಲಿಷ್ಠರಾದ ಕಕ್ಷಿಯವರ ಪಾಲಾಗಿತ್ತು.

# ೫ನೇ ಅಧ್ಯಾಯ.

---

## ಲೂ ರಾಜ್ಯಕ್ಕೆ ಪುನಃ ಪ್ರವೇಶ, ಮತ್ತು ಅಲ್ಲಿನ ಮಂತ್ರಿತ್ವ.

ಲೂ ಪಟ್ಟಣದಲ್ಲಿ ೧೫ ವರುಷಗಳವರೆಗೂ ಯಾವ ಸರ್ಕಾರದ ಉದ್ಯೋಗವೂ ಇಲ್ಲದೆ ಕಾಂಫೂಷನು ಗ್ರಂಥವ್ಯಾಸಂಗದಲ್ಲಿಯೂ, ಶಿಷ್ಯಸಮೂಹಾಭಿವೃದ್ಧಿಯಲ್ಲಿಯೂ ಕಾಲವನ್ನು ಕಳೆಯುತಿದ್ದನು. ಚಾಟುಕಾವ್ಯಗಳನ್ನು ಹುಡುಕುವುದರಲ್ಲಿಯೂ, ಚರಿತ್ರೆಯನ್ನು ಸೇರಿಸುವುದರಲ್ಲಿಯೂ ಆತನು ತನ್ನ ವೈವಧಾನಕಾಲವನ್ನು ವಿನಿಯೋಗಿಸುತಿದ್ದನು.

ಹೀಗೆ ಈತನು ಸದ್ವ್ಯಾಸಂಗದಲ್ಲಿ ಪ್ರವರ್ತಿಸಿಕೊಂಡಿರುವಾಗ ಈತನ ಪ್ರಖ್ಯಾತಿಯು ಎಲ್ಲೆಲ್ಲಿಯೂ ಹರಡಿಕೊಳ್ಳಲು ಈ ಮಹಾತ್ಮನ ದರ್ಶನ ಮಾಡಬೇಕೆಂದು ಅನೇಕರಿಗೆ ಆಶೆ ಹುಟ್ಟಿತು. ಆ ಕಾಲದಲ್ಲಿ ಚೀನಾರಾಜ್ಯದ ಸ್ಥಿತಿಯೂ ಮೇಲೂ ಜನರ ನೀತಿಯೂ, ಬಹಳವಾಗಿ ಹುಳುತು, ಕೊಳೆತು ಹೋಗಿದ್ದದು ಪೂರ್ವದಲ್ಲಿಯೇ ಸೂಚನೆಯಾಗಿದೆ. ಹೀಗಿರುವಲ್ಲಿ ಕೆಸರಿನಲ್ಲಿ ಕಮಲ ಹುಟ್ಟಿದಹಾಗೆ ಉರಿಯಲ್ಲಿ ಸೊಸಿ ಎದ್ದಹಾಗೆ ಯುದ್ಧರಂಗದಲ್ಲಿ ಜೈನಸನ್ಯಾಸಿ ಇದ್ದಹಾಗೆ ಕಾಂಫೂಷನು ಹುಟ್ಟಿ, ನೀತಿವಂತರಿಂದ ಸ್ತುತಿಸಲ್ಪಟ್ಟು ಸನ್ಮಾರ್ಗಕ್ಕೆ ತಾನು ನೆಲೆಮನೆಯಾಗಿದ್ದನು. ತನ್ನ ಸಮಕಾಲಿಕರಾದವರೆಲ್ಲಾ ಒಂದು ನಡತೆಯನ್ನು ಆಚರಿಸುತ್ತಿರುವಾಗ ಎಣ್ಣೆ ಸೀಗೇಕಾಯಿ ನ್ಯಾಯವುಳ್ಳ ಅಭಿಪ್ರಾಯವನ್ನು ಇಟ್ಟುಕೊಂಡಿರುವ ಪುರುಷ ಹುಟ್ಟುವುದು ಕಷ್ಟ. ಹುಟ್ಟಿದರೂ



ಉಳಿಯುವುದು ಶ್ರಮ; ಉಳಿದರೂ ಅವರೇ ಹುಳುಹೋಗಿ ಕಡಚನಾದಂತೆ ಸ್ವಭಾವವು ವ್ಯತ್ಯಸ್ತವಾಗದಿರುವುದು ಹೆಚ್ಚು. ವ್ಯತ್ಯಸ್ತವಾದರೂ ಮತ್ತೂ ಕೆಟ್ಟು ವ್ಯತ್ಯಸ್ತವಾಗದೆ ಎಲ್ಲರಲ್ಲಿಯೂ ಹರಡಿಕೊಂಡಿರುವ ಗುಣಕ್ಕೆ ಪ್ರತಿಗುಣವಾಗುವುದು ಅಪೂರ್ವ. ಹಾಗೆ ಪ್ರತಿಗುಣವಾದಾಗ್ಯೂ ಮಣ್ಣೆಲ್ಲವನ್ನೂ ಚಿನ್ನ ಮಾಡುತ್ತೇನೆ ಎಂದ ಹಾಗೆ ದುರ್ಮಾರ್ಗರನ್ನೆಲ್ಲಾ ಸನ್ಮಾರ್ಗಕ್ಕೆ ತರುತ್ತೇನೆಂದು ತಾನು ಒಂಟಿಯಾಗಿ ನಿಂತು ಪ್ರಯತ್ನ ಮಾಡುವುದು ಅತ್ಯಾಶ್ಚರ್ಯ. ಇಂಥಾ ಮಹಾ ಕಾರ್ಯವನ್ನು ಮಾಡುತೇನೆಂಬ ಪ್ರಯತ್ನಿಸುವ ಪುರುಷನು ಲೋಕಕ್ಕೆ ಅದ್ಭುತವಾಗಿ ಕಾಣಿಸುವುದು ಸಹಜವೇ. ಮತ್ತು ಇಂಥ ಪನದರ್ಶನ ಮಾಡಬೇಕೆಂಬ ಆಶೆಯು ಇತರರಿಗೆ ಹುಟ್ಟತಕ್ಕದ್ದು ಅನುಭವವೇದ್ಯವಾಗಿದೆ. ಬೆಟ್ಟವನ್ನು ಹೊರುತಾನೆ, ಸವೀರ ಪಾಷಾಣವನ್ನು ತಿನ್ನುತ್ತಾನೆ, ಸೂಜೀ ಕಣ್ಣಿನಲ್ಲಿ ದೂರುತಾನೆ, ಆಕಾಶದಲ್ಲಿ ಕುಣಿಯುತಾನೆ, ಎಂದು ಹೇಳಿದರೆ ಅಂಥಾ ಅಸಾಧ್ಯವಾದ ಕಾರ್ಯಗಳನ್ನು ಮಾಡತಕ್ಕ ಅದ್ಭುತನಾದ ಪುರುಷನನ್ನು ನೋಡಬೇಕೆಂದು ಜನರು ನೆರೆಯುವುದು ಅಸಾಧ್ಯವಲ್ಲ. ಹೀಗೆಯೇ ಜನರನ್ನು ಹೊಸ ದಾರಿಗೆ ಎಳೆಯಬೇಕೆಂದು ಪ್ರಯತ್ನಿಸುವ ಪುರುಷನೆಂಥವನೋ ನೋಡಿರಬೇಕೆಂದು ಕೆಲವರು ಆಶ್ಚರ್ಯದಿಂದಲೂ, ಕೆಲವರು ತಿರಸ್ಕಾರಭಾವದಿಂದಲೂ, ಕೆಲವರು ಭಕ್ತಿಯಿಂದಲೂ, ಅನೇಕರು ವಿನೋದಕ್ಕಾಗಿಯೂ ಬರುವರು. ಇದೇ ಪ್ರಕಾರ ಕಾಂಫೂಷನನ್ನು ಕಾಣಬೇಕೆಂದು ಅನೇಕರು ಆತ ಇದ್ದ ಸ್ಥಳಕ್ಕೆ ಬರುತ್ತಿದ್ದರು. ಹಾಗೆಯೇ ಈತನ ಸಮಕಾಲಿಕನಾದ ಲಿಯೆಾೕತ್ಸೆ ಎಂಬ ದೊಡ್ಡ ಪಂಡಿತನೂ ಕಾಂಫೂಷನ ದರ್ಶನಾರ್ಥವಾಗಿ ಬಂದು ಅನೇಕ ವಿಷ



Digitized by ROJA MUTHIAH RESEARCH LIBRARY

ಯಗಳನ್ನು ಚರ್ಚಿಸಿ ತನ್ನ ಪಾಂಡಿತ್ಯವನ್ನು ಬಹುವಾಗಿ ಪ್ರಕಾಶಮಾಡಿದನು. ಆಗ ನಮ್ಮ ಮುನಿಯು ಆ ವಿದ್ವಾಂಸನನ್ನು ಕುರಿತು—ಅಯ್ಯ ಪಂಡಿತರೆ, ಈ ಪ್ರಪಂಚದಲ್ಲಿ ಸರ್ವ ಪ್ರಯತ್ನದಿಂದಲೂ ಪರಪ್ರಯೋಜನವನ್ನು ಕೋರತಕ್ಕದ್ದೇ ಸಕಲ ಧರ್ಮದ ಸಾರ; ಯಾವ ಕಾರ್ಯದಿಂದ ಎಷ್ಟರಮಟ್ಟಿಗೆ ಈ ಧರ್ಮವು ಲಭಿಸುವುದೋ ಅಷ್ಟಷ್ಟರಮಟ್ಟಿಗೆ ಆಕಾರ್ಯವು ಉತ್ತಮವೆನಿಸುತ್ತಾ ಬರುವುದು. ತಾವು ಸಂಪಾದಿಸಿರತಕ್ಕ ಮಹಾ ಪಾಂಡಿತ್ಯವು ಪರಹಿತಾರ್ಥವಾಗಿ ಉಪಯೋಗಿಸಿದರೆ ಸಾಕು. ಅದನ್ನು ಬಿಟ್ಟು ಜನರು ನಿಮ್ಮನ್ನು ನೋಡಿ "ಅಬ್ಬಾ ಎಷ್ಟು ದೊಡ್ಡ ಪಂಡಿತರು" ಎಂದು ಮೆಚ್ಚಿ ಭಯಪಡುವ ಹಾಗೆ ವೈದುಷ್ಯದ ಅಂಗಡಿಯನ್ನು ಹರಡಿದ್ದರಿಂದ ಪುರುಷಾರ್ಥವೇನಾಯಿತು ? ಎಂದು ಧಿಃಕರಿಸಿ ಮಾತನಾಡಿದನು.

ಹೀಗೆ ಲೋಕೋಪಕಾರದೃಷ್ಟಿಯುಳ್ಳ ಪುರುಷರಿಗೆ ತಾವು ನಿಶ್ಚಯವನ್ನು ಚೆನ್ನಾಗಿ ಬಲ್ಲೆವೆಂಬ ಪರಿಜ್ಞಾನವಿಶೇಷವಾಗಿರುವ ಕಾರಣ ದಾಕ್ಷಿಣ್ಯವು ಅವರನ್ನು ಬಾಧಿಸುವುದಿಲ್ಲ. ಅವರು ಸುಮ್ಮನಿದ್ದಲ್ಲಿ ಕೊನೆಗೆ ಕಾರ್ಯ ಹದ ಗೆಟ್ಟರೆ ಪುನಃ ಪ್ರಯತ್ನ ವಿಶೇಷಶ್ರಮಕ್ಕೆ ಆಕರ, ಅಂಥಾ ಪ್ರಯತ್ನದಿಂದ ಕೊನೇ ಫಲವು ಸಾಧ್ಯವಾದರೂ ಕಾಲವಿಳಂಬವಾಗಿ ಹೋಗುವುದು, ಎಂಬ ಈ ಚಿಂತೆಯು ಎದುರಾಳಿನ ಸ್ವಭಾವವನ್ನಾಗಲಿ, ಯೋಗ್ಯತೆಯನ್ನಾಗಲಿ ಲಕ್ಷಿಸದೆ ನಿಷ್ಠೂರವೆಂದು ಹಿಂತೆಗೆಯದೆ ತನ್ನ ಅಭಿಪ್ರಾಯವನ್ನು ಖಂಡಿತವಾಗಿ ಹೇಳುವುದು. ಇಂಥಾ ಖಂಡಿತೋಕ್ತಿಯನ್ನು ಕೆಲವರು ದುರಹಂಕಾರವೆಂತಲೂ, ಕೆಲವರು ಕುಚೇಷ್ಟೆಯೆಂತಲೂ, ಕೆಲವರು ಅಪ್ರಮಾಣಿಕತೆಯೆಂತಲೂ, ಹೀಗೆ ಅರ್ಥಮಾಡುವವರ ಯೋಗ್ಯತೆ

Digitized by ROJA MUTHIAH RESEARCH LIBRARY



ಇದ್ದಹಾಗೆಲ್ಲಾ ಉದ್ದೇಶ್ಯಕಲ್ಪನೆಯಾಗುವುದು. ಆದರೆ ಈ ಗುಣಗಳುಳ್ಳ ಜನರಲ್ಲಿ ಖಂಡಿತೋಕ್ತಿಯು ಒಂದು ವಿಧವಾಗಿರುವ ಕಾರಣ ನಿಜವಾದ ಮನುಷ್ಯನನ್ನು ಕಂಡು ಹಿಡಿಯಲು ಅಶಕ್ತರಾದ ಪುರುಷರು ಖಂಡಿತೋಕ್ತಿಗೆ ಕೆಟ್ಟ ಉದ್ದೇಶ್ಯವನ್ನು ಆರೋಪಿಸಿದ ಮಾತ್ರದಲ್ಲಿಯೇ ಖಂಡಿತವಾಗಿ ಆಡತಕ್ಕವನ ಸ್ವಪ್ರಯೋಜನಕ್ಕೆ ವಿರುದ್ಧವೇ ಹೊರತು ಆತನ ನಿಜವಾದ ಮನೋದ್ದೇಶ್ಯಕ್ಕೆ ಲೋಪವೇನೂ ಇಲ್ಲ.

## ೬ನೇ ಅಧ್ಯಾಯ.

### ಲೂ ರಾಜ್ಯದಲ್ಲಿ ಅಧಿಕಾರ, ಅಲ್ಲಿಂದ ಉಚ್ಚಾಟನೆ.

ಕೊನೆಗೆ ಗಲಭೆಯಾಗಿದ್ದ ಲೂ ರಾಜ್ಯವು ಸ್ಥಿಮಿತಕ್ಕೆ ಬಂತು. ಅಲ್ಲಿನ ಸರ್ಕಾರದಲ್ಲಿ ಈತನಿಗೆ ಒಂದು ಉದ್ಯೋಗವಾಗುವುದಕ್ಕೆ ಸಮಯ ದೊರೆಯಿತು. ದಂಡನಾಧಿಕಾರಿಯ ಉದ್ಯೋಗವಾಗಲು, ಈತನ ರಾಜ್ಯಭಾರಧರ್ಮವನ್ನು ಪರೀಕ್ಷಿಸುವುದಕ್ಕೆ ಅವಕಾಶ ದೊರೆಯಿತು. ಕಾಂಫ್ಯೂಷನಿಗೆ ಈ ಪದವಿಯಾದ್ದು ದುರ್ನೀತಿಗೆ ಸಾಯಗೊಲೆಯಾಯಿತು. ದಂಡನ ಶಾಸ್ತ್ರವನ್ನು ಆಚರಣೆಗೆ ತರಲು ಅಗತ್ಯವೇ ಇರಲಿಲ್ಲ. ಯಾಕೆಂದರೆ ಅಲ್ಲಿ ಅಪರಾಧಿಗಳೇ ಇರಲಿಲ್ಲ. ಜನರು ಈತನ ರಾಜ್ಯಭಾರಧರ್ಮವನ್ನು ಬಹಳ ಕೊಂಡಾಡುತಾ ಈತ ಮಾಡಿದ ದುಷ್ಟನಿಗ್ರಹವನ್ನು ಹಾಡಿ ಹಾಡಿಕೊಂಡು ಹೊಗಳುತಿದ್ದರು. ಹೀಗೆಂದು ತಿಳಿಯಬಂದಿದೆ.

ಆದರೆ ಉದಾರವಾದ ಮನಸ್ಸಿನಿಂದ ಜನರ ನೀತಿಯನ್ನು ಸರಿಮಾಡಬೇಕೆಂಬ ಅಭಿಪ್ರಾಯವು ಲೋಕೋತ್ತರವಾದ್ದೆ ಹವದು. ಆದಾಗ್ಯೂ ಪ್ರಯತ್ನದಲ್ಲಿ ಫಲಪ್ರಯೋಜನ ಇಷ್ಟರ ಮಟ್ಟಿಗೆ ಆಗುವುದೆಂದು ಹೇಳಲು ಸ್ವಲ್ಪ ಸಂದೇಹವಿದೆ. ಲೋಕದಲ್ಲಿ ನೀತಿ ಹೆಚ್ಚುವುದು ಸಾಧ್ಯವೇ ಆದಾಗ್ಯೂ, ಪ್ರಜೆಗಳೆಲ್ಲರೂ ನೀತಿವಂತರಾಗುತಾರೆಂತಲೂ, ಇನ್ನುಮೇಲೆ ಕಾರಾಗೃಹವೇ ಅಗತ್ಯವಿಲ್ಲವೆಂತಲೂ. ಹೇಳುತ ರಾಮರಾಜ್ಯದಸ್ಥಿತಿ ಪುರಾಣದಲ್ಲಿ ಪ್ರಸಿದ್ಧವಾದ್ದೇ ಹೊರತು ಕಾರ್ಯತಃ ನಡೆಯುವ ಮಾತಾಗಿ ಕಾಣಿಸಲಿಲ್ಲ. ಈತನಿಗೆ ಅಭಿಮತವಾದ ಕಾರ್ಯದಲ್ಲಿ ಎಷ್ಟು ಸಾಧ್ಯವೆಂಬ ಸಂದೇಹ ಈತನಿಗೆ ಉಂಟಾಗಲಿಲ್ಲ. ಆತನ ಶಾಸ್ತ್ರಪಜ್ಞತೆಯು ಆಚರಣೆಯಲ್ಲಿ ತೇರ್ಗಡೆಯನ್ನು ಹೊಂದತಕ್ಕದ್ದಾಗಿದ್ದರೆ ಆತನ ರಾಜ್ಯದ ಆಡಳತವು ಪ್ರಜೆಗಳಿಗೆ ಪ್ರಾಜ್ಞಾಪ್ರದವಾಗಿಯೂ ಸೌಖ್ಯಪ್ರದಗಿವಾಯೂ ಇರಬೇಕಾದದ್ದೇ ಅಲ್ಲದೆ ನೆರೆರಾಜ್ಯದಲ್ಲಿಯೂ, ಇಂಥಾ ಲೋಕೋಪಕಾರಪ್ರದರ್ಶಕವಾದ ವ್ಯತ್ಯಸ್ತವನ್ನು ತೋರ್ಪಡಿಸಬೇಕಾಗಿತ್ತು.

ಆದರೆ ನಿಜವಾಗಿಯೂ ಆದ್ದೇನು. ಲೂ ದೇಶದಲ್ಲಿ ಜನರಿಗೆ ಉಂಟಾದ ತೃಪ್ತಿಯೂ, ಸೌಖ್ಯವೂ ತ್ಸಿ ರಾಜ್ಯದ ಅರಸನಿಗೆ ತಾನೂ ಈ ರೀತಿಯಲ್ಲಿ ರಾಜ್ಯದ ಆಡಳತವನ್ನು ಇಟ್ಟುಕೊಳ್ಳಬೇಕೆಂಬ ಹುರುಡನ್ನು ಹುಟ್ಟಿಸದೆ ಈರ್ಷೆಯನ್ನುಂಟು ಮಾಡಿತು. ಆ ದೊರೆಯು—ಲೂ ದೇಶದ ಸರ್ವಾಧಿಕಾರಕ್ಕೆ ಕಾಂಫೂಷನು ನಿಲ್ಲಲು ಸಕಲ ಸಾಮ್ರಾಜ್ಯ ಪದವಿಯೂ ಉಂಟಾಗುವುದು ನಿಸ್ಸಂದೇಹವಾಗಿದೆ; ಆದಕಾರಣ ಅದಕ್ಕೆ ಸಮೀಪವರ್ತಿಯಾದ ತ್ಸಿ ದೇಶವನ್ನು ಲೂ ಸೀಮೆಯು ನುಂಗಿಕೊಳ್ಳುವುದು. ಆದ್ದರಿಂದ ಸ್ವಲ್ಪ ದೇಶವನ್ನು ಅವರಿಗೆ ಒಪ್ಪಿಸಿಕೊಟ್ಟು ಸಖ್ಯವನ್ನು ಮಾಡಿಕೊಳ್ಳುವುದು ಉತ್ತಮ, ಎಂದು ಯೋಚಿಸಿದನು.



ಆದರೆ ಚಮತ್ಕಾರಿಯಾದ ಒಬ್ಬ ಮಂತ್ರಿಯು ಭೇದೋಪಾಯದಿಂದ ಮೊದಲು ಕಾಂಫೂಷನಿಗೆ ಅವಮಾನಮಾಡಿ ಲೂ ಸೀಮೆಯಿಂದ ಅವನನ್ನು ಹೊರಡಿಸಲು ಯತ್ನಿಸಬೇಕೆಂದು ಹೇಳಿದನು. ಆಗ ಸಂಗೀತ, ಸಾಹಿತ್ಯ, ಭರತಾದಿ ಶಾಸ್ತ್ರನಿಪುಣೆಯರಾಗಿಯೂ ಸಕಲ ಕಲಾಪ್ರವೀಣೆಯರಾಗಿಯೂ, ಸನ್ಮೋಹನಾಂಗಿಯರಾಗಿಯೂ, ಇರತಕ್ಕ ೮೦ ಜನ ವಾರನಾರೀಮಣಿಗಳನ್ನೂ ೧೦೦ ಉತ್ತಮಾಶ್ವಗಳನ್ನೂ ಲೂ ರಾಜ್ಯಾಧೀಶನಿಗೆ ಉಪಹಾರವಾಗಿ ಕಳುಹಿಸಿದರು.

ಇದರ ಫಲವು ಮೊದಲು ಯೋಚಿಸಿದ್ದಂತೆಯೇ ಆಯಿತು. ಇದನ್ನು ಕಂಡು ಆನಂದಪರವಶನಾದ ದೊರೆಯು ಆ ವಿಲಾಸಿನಿಯರ ನಟನೆಯಿಂದ ಜಿತನಾಗಿ ಅವರನ್ನು ತನ್ನ ರಾಣಿವಾಸಕ್ಕೆ ಕಳುಹಿಸಿ ಘೋಟಕಗಳನ್ನು ಲಾಯದಲ್ಲಿ ಕಟ್ಟಿಸಿದನು. ಕಾಂಫೂಷನಾದರೋ ಪೂರ್ವಿಕರ ವಿವೇಕವನ್ನು ತ್ಯಜಿಸಿ ಸುಂದರಿಯರ ಅಲ್ಪವಾದ ಗಾನ ರಸಕ್ಕೆ ಮನಸೋಲುವ ಮನುಷ್ಯಸಾಮಾನ್ಯರ ಅವಿವೇಕವನ್ನು ಕುರಿತು ಬೇಕಾದ ಆಕ್ಷೇಪಣೆಯನ್ನು ತನ್ನೊಳು ಮಾಡಿಕೊಳ್ಳುತಾ ಬಿದ್ದಿರುವ ಹಾಗಾಯಿತು.

ಕೊನೆಗೆ ಆ ರಾಜ್ಯವನ್ನು ಬಿಟ್ಟು ಹೊರಟುಹೋಗಬೇಕೆಂದು ಕಾಂಫೂಷನಿಗೆ ತೋರಿತು. ಆಗ ಆ ಲೂ ರಾಜ್ಯದ ಅಧಿಪತಿಯು ಮಂತ್ರಿಗಳಿಗೆ ದೇವರ ಪ್ರಸಾದವನ್ನು ವಾಡಿಕೆಯಾಗಿ ಕಳುಹಿಸುವಂತೆ ಕಳುಹಿಸದೇ ಮಾಡಿದ ತಾತ್ಸಾರವು ಆಸ್ಥಾನವನ್ನು ಕೂಡಲೇ ತ್ಯಜಿಸುವುದಕ್ಕೆ ಒಂದು ವ್ಯಾಜವಾಯಿತು.

Digitized by ROJA MUTHIAH RESEARCH LIBRARY

ಅಲ್ಲಿ ಆತ ಹೇಗೆ ನಿಂತಾನು? ನಿಸರ್ಗವಾದ ಯೋಗ್ಯತೆಗೂ, ದುಷ್ಕಾಕ್ಯಾಚರಣೆಗೂ ಬಹಳದೂರ, ಅದೆರಡನ್ನೂ ಎಷ್ಟು ಬಲವಾಗಿ ಒಂದೇ ಕಡೆ ನೂಕಿದಾಗ್ಯೂ ಅಷ್ಟು ವೇಗದಿಂದ ಹಿಂದಕ್ಕೆ ಹೋಗುವುದು. ಪೂರ್ವಾಪರಯೋಚನಾಪರತ್ವವೇ ನೀತಿದಾಯಕವಾದ್ದು. ಗಂಟು ಕತ್ತರಿಸುವ ಕಳ್ಳನಿಗೆ ಎಷ್ಟು ಬುದ್ಧಿ ಇದ್ದಾಗ್ಯೂ ಅದು ಕುಬುದ್ಧಿಯೇ ಹೊರತು ಅದು ನಿಜವಾದ ಬುದ್ಧಿ ಎಂಬ ಹೆಸರಿಗೆ ಪಾತ್ರವಾಗುವುದಿಲ್ಲ. ಮೊದಲು ಊ ದೊರೆಯು ಕಾಂಫ್ಯೂಷನನ್ನು ತನ್ನ ರಾಜ್ಯಭಾರಕ್ಕೆ ಇರಿಸಿಕೊಳ್ಳುವವರಲ್ಲಿ ಎಷ್ಟೇವಿವೇಕವನ್ನು ತೋರಿಸಿರಲಿ, ಅದು ಸಮಯಾಂತರದಲ್ಲಿ ಅನ್ಯಥಾ ಆದಕಾರಣ ನಿಜವಾದ ಸದ್ಗುಣಕ್ಕೆ ವಿರುದ್ಧ ತೋರಿ ಪೂರ್ತಿಯಾಗಿ ಪರೀಕ್ಷಿಸಿದಲ್ಲದೆ ಯಾವುದನ್ನೂ ನಿಶ್ಚೈಸಕೂಡದೆಂಬ ನಿರ್ಧರ ಹುಟ್ಟಿ, ವ್ಯಾಜ ದೊರೆಯಲು ಮೊದಲಿನಿಂದ ಮನಸ್ಸಿನಲ್ಲಿ ನಾಟದ್ದ ಅಹಿತವು ಆತನನ್ನು ದೂರಮಾಡಿತು. ಆದರೂ ಸಾವಿರ ಚಿತ್ರವನ್ನು ಮಸಿನುಂಗಲು ಎಷ್ಟು ಮಾತ್ರದ್ದು? ಮಸಿಯನ್ನಳಿಸಿ ಮತ್ತೆರಡುಸಾರಿ ಬಣ್ಣದ ಕಡ್ಡಿಯನ್ನು ಎಳೆದು ಸರಿಮಾಡಬಹುದೋ ಎಂಬ ಆಶೆಯು ಆ ಪ್ರಯತ್ನದ ಭಗ್ನಕಾಲದಲ್ಲಿ ಬುದ್ಧಿವಂತರಿಗೆ ಹುಟ್ಟುವುದು ಸಹಜ. ಮಹಾಕಾರ್ಯ ಪ್ರಯತ್ನದ ಮುಖ್ಯಪ್ರಾಣವು ದೈವಸಹಾಯವಾದ್ದರಿಂದ, ಈ ದೈವಸಹಾಯವಾದರೂ ದೊರೆಯಲ್ಲಿಯೂ, ಅವನ ಸಭೆಯವರಲ್ಲಿಯೂ, ಸದ್ಯಃ ಕಂದೆರೆದು ತನ್ನನ್ನು ಹಿಂದಕ್ಕೆ ಕರೆಸಿದರಾದೀತಲ್ಲಾ ಎಂದು ಕಾಂಫ್ಯೂಷನು ತನ್ನನ್ನು ಯಾರಾದರೂ ಹಿಂದಕ್ಕೆ ಕರೆಯಲು ಬರಬಹುದೆಂಬ ಕೋರಿಕೆಯೊಡನೆ ಮನಸ್ಸಿಲ್ಲದ ಮನಸ್ಸಿನಿಂದ ಮೆಲ್ಲಮೆಲ್ಲಗೆ ಕಾಲನ್ನು ಸೆಳೆಸೆಳೆದು ಹಾಕುತ್ತಾ ಹೊ-

Digitized by ROJA MUTHIAH RESEARCH LIBRARY



ರಟನು. ಯಾರೂ ಕರೆಯುವುದಕ್ಕೆ ಬರಲಿಲ್ಲ. ಕೊನೆಗೆ ಗ್ರಂಥವ್ಯಾಸಂಗದಿಂದ ವಿಶೇಷವಾಗಿ ಉಂಟಾದ ಮುಪ್ಪಿನ ಹಾವಳಿಗೆ ತನ್ನ ಶರೀರವನ್ನು ಒಪ್ಪಿಸಿದ್ದ ಕಾಂಫ್ಯೂಷನು ದೇಶದೇಶದ ಮೇಲೆ ಸುತ್ತುತ್ತಾ, ಶ್ರಮವನ್ನು ಅನುಭವಿಸುತ್ತಾ ಹೊರಟು ಹೋದನು. ಅಲ್ಲಿನವರೆಗೆ ೫೬ ವಯಸ್ಸಾಗಿತ್ತು.

## ೭ನೇ ಅಧ್ಯಾಯ.

### ರಾಜ್ಯಭಾರಕ್ರಮ, ನೀತಿ.

ರಾಜ್ಯಭಾರಕ್ರಮಮಾಡತಕ್ಕವರಿಂದಲೇ ಜನರ ಐಶ್ವರ್ಯವೂ ಸೌಖ್ಯವೂ, ಇವೆರಡಕ್ಕಿಂತಲೂ ಅಧಿಕವಾದ ಅವರನೀತಿಯೂ ಕ್ರಮಪಡುವುದು. ಆದ್ದರಿಂದಲೇ ಇಂಥಾ ರಾಜ್ಯಭಾರವನ್ನು ತಾನುಮಾಡಿ ತೋರಿಸುತೇನೆಂದು ಯತ್ನಿಸಿದ ಕಾಂಫ್ಯೂಷವ ರಾಜ್ಯಭಾರಮತದಲ್ಲಿ ವ್ಯುತ್ಪಾದಕವಾದ ಕೆಲವು ಸಂಗತಿಗಳು ಇರುವುದು ಆಶ್ಚರ್ಯವಲ್ಲ. ಏನೆಂದರೆ, ಯಾವುದಾದರೂ ಒಂದು ರಾಜ್ಯದ ಆಡಳತವನ್ನು ನಡಿಸುವುದಕ್ಕಾಗಿ ತಮಗೆ ನೇಮಕವಾದರೆ ತಾವು ಮೊದಲು ಮಾಡತಕ್ಕ ಕಾರ್ಯವೇನು? ಎಂದು ಒಬ್ಬ ಶಿಷ್ಯನು ಕಾಂಫ್ಯೂಷನನ್ನು ಪ್ರಶ್ನೆಮಾಡಲು "ನಾಮಭೇದಮಾಡತಕ್ಕದ್ದು" ಎಂದು ಉತ್ತರದೊರೆಯಿತು. ಪರಸ್ಪರ ಸಂಬಂಧವಿಲ್ಲವೆಂದು ವಾದಿಸಲು, ಹಾಗೆಯೇ ಸರಿ ಎಂದು ಕಾಂಫ್ಯೂಷನು ಸ್ಥಾಪಿಸಿದನು. ಇದು ಸತ್ಯ. ಲೋಕದಲ್ಲಿ ಪ್ರತಿಯೊಂದು ಪದಾರ್ಥಕ್ಕೂ ಪ್ರತಿಯೊಬ್ಬ

ಮನುಷ್ಯನಿಗೂ ಸಹಜವಾದ ಕೆಲವು ಧರ್ಮಗಳುಂಟು. ಅಣು
ರೇಣು ತೃಣಕಾಷ್ಠವೆಲ್ಲಾ ತಂತಮ್ಮ ಯೋಗ್ಯತಾನುಸಾರ ಗು
ಣಗಳ ಸಮೂಹ. ಸಹಜವಾದ ಗುಣಗಳೇ ಸಹಜವಾದ ಧ
ರ್ಮಗಳೆನ್ನಿಸುವವು. ಈ ಧರ್ಮಭೇದದಿಂದಲೇ ಎಂದರೆ ಈ
ಗುಣವ್ಯತ್ಯಾಸದಿಂದಲೇ ಪದಾರ್ಥಗಳಲ್ಲಿ ಪರಸ್ಪರಭಿನ್ನಜ್ಞಾನ
ಉಂಟಾಯಿತು. ಇದಕ್ಕಾಗಿ ಅಕಸ್ಮಾತ್ತಾದ ಒಂದು ಶಬ್ದ
ಹುಟ್ಟಿ ಪದಾರ್ಥವನ್ನು ಗುರುತು ಹಿಡಿಯುವುದಕ್ಕೋಸ್ಕರ ಅದ
ಕ್ಕೆ ಇಟ್ಟಂಥಾದ್ದಾಗಿ ಅದರ ಹೆಸರೆನಿಸಿಕೊಂಡು ಕೊನೆಗೆ ಅ
ದರ ಗುಣಸಮೂಹಕ್ಕೆ ತಾನೂ ಬಂದು ಸೇರಿದಾಗ್ಯೂ, ನಾ
ಮೋಚ್ಚಾರಣ ಮಾತ್ರಕ್ಕೆ ಪದಾರ್ಥದ ಗುಣಗಳೆಲ್ಲಾ ತಿಳಿದ
ಮಟ್ಟಿಗೆ ಸ್ಫೂರ್ತಿಗೆ ಬರುವ ಕಾರಣ ನಾಮವು ಗುಣಸಮು
ದಾಯವನ್ನು ಸೂಚಿಸತಕ್ಕದ್ದಾಯಿತು. ಹೀಗೆ ನಾಮವೂ
ಗುಣವೂ ಗಂಡ ಭೈರುಂಡದ ತಲೆಗಳ ಹಾಗೆ ಎಣಿಕೆಗೆ
ಬಂತು ಗುಣಭೇದವಾದರೆ ಪದಾರ್ಥಭೇದವಾಯಿತು. ಆ
ದ್ದರಿಂದಲೇ ನಾಮಭೇದವಾಗುವುದು ಸರಿಯೇ. ತಾಮ್ರಕ್ಕೆ ಕ್ಲಿಪ್ತ
ವಾದಷ್ಟು ಸತ್ತುಬೆರೆಯಲು ಆ ಮಿಶ್ರವು ಹಿತ್ತಾಳೆ ಎಂದು ಕ
ರಿಸಿಕೊಳ್ಳುವದಲ್ಲದೆ ತಾಮ್ರವೆಂದು ಹೇಳಿಸಿಕೊಳ್ಳಲಾರದು.
ತ್ಸೀ ರಾಜನಿಗೆ ಕಾಂಫೂಷನು ರಾಜ್ಯಧರ್ಮವನ್ನು ವಿವರಿಸಿ
ಹೇಳುತ್ತಾ, ರಾಜರಾಜನಾಗಿಯೂ ಮಂತ್ರಿಮಂತ್ರಿಯಾಗಿಯೂ
ತಂದೆತಂದೆಯಾಗಿಯೂ ಮಗಮಗನಾಗಿಯೂ ಇರುವಲ್ಲಿ ರಾ
ಜ್ಯಭಾರದ ಸದ್ಧರ್ಮಪರಿಪಾಲನೆಯಾಗುವುದು '' ಎಂದು
ಹೇಳಿದಾಗಲೂ ಈ ಮುನಿಯ ಅರ್ಥ ಇದೇ. ರಾಜನಲ್ಲಿ ರಾಜ
ಧರ್ಮಾಚರಣೆಯೂ ಮಂತ್ರಿಯಲ್ಲಿ ಮಂತ್ರಿಧರ್ಮಾಚರಣೆ
ಯೂ ಹೀಗೆಯೇ ಆಯಾ ಪ್ರಾಣಿಗಳಲ್ಲಿ ಆಯಾ ಧರ್ಮಾಚರಣೆ



ಯೂ ಇಲ್ಲದಿದರೆ ಗುಣಭೇದವಾಯಿತು. ಆದ್ದರಿಂದಲೇ
ಬೇರೆ ಹೆಸರು ಅಗತ್ಯವಾಯಿತು. ನಾಮಮಾತ್ರ ಚಕ್ರವರ್ತಿ
ಎಂದು ಹೇಳಿಸಿಕೊಳ್ಳುತಾ ರಾತ್ರಿ ಕಾಲದಲ್ಲಿ ಸ್ತ್ರೀ ವೇಷವನ್ನೂ
ರೂಪಾಂತರವನ್ನೂ ವಹಿಸಿ ಸೂಳೆಯರ ಹಿಂದೆ ತಾಳಮದ್ದಳೆ
ಗಳನ್ನು ಹೊತ್ತೂ ತಿರುಗುತಿದ್ದ ದಿಳ್ಳೀ ಪಾದಷಹನು ನಟ
ವನೇ ಹೊರತು ಅರಸೆಂತಾದಾನು ? ಅಲಕ್ಷ್ಯವಾಗಿದ್ದು ತನ್ನ
ಕೆಲಸದಮೇಲೆ ಉದ್ಯುಕ್ತನಾದ ಮನುಷ್ಯನಿಗೆ ವೃಶ್ಚಿಕವೂ
ಸರ್ಪವೂ ಕಚ್ಚುವುದು ಉಂಟಷ್ಟೆ. ಈ ಕ್ರೂರಜಂತುಗಳು
ಮನುಷ್ಯನ ದೃಷ್ಟಿಗೆ ಗೋಚರವಾಗದೇ ಒಳಗೇ ಮುಟ್ಟಿಸು
ವುದು ಇವುಗಳ ಸ್ವಭಾವ. ಹೀಗೆಯೇ ಮಾತಿನಿಂದ ವಿಷವೆ
ರಿಸಿ ಕಾಣದಂತೆ ಕೊಲ್ಲುವ ಚಾಡೀಕೋರರಿಗೂ ವಿಷಪೂರಿತ
ವಾದ ಒಂದೊಂದು ಅಂಗದ ಈ ಜಂತುಗಳಿಗೂ ವ್ಯತಿರೇಕ
ವನ್ನು ಹೇಳಿ ಹೋಲಿಸುವುದು ಕಾಂಫೂಷನ ನಾಮಭೇದ
ಸಿದ್ಧಾಂತಕ್ಕೆ ಅನುಗಣವಾಗಿದೆ.

ಮತ್ತೂ ಕಾಂಫೂಷನ ಅಭಿಮತವೇನೆಂದರೆ—ಜನಸ
ಮುದಾಯವೆನ್ನುವುದು ದೈವಕೃತವಾದ್ದು. ಇದರಲ್ಲಿ ನಾಲ್ಕು
ಸಂಬಂಧಗಳುಂಟು. ಅರಸು ಮಂದಿಯು ಸಂಬಂಧ, ತಂದೆ
ಮಕ್ಕಳ ಸಂಬಂಧ, ಅಣ್ಣತಮ್ಮಂದಿರ ಸಂಬಂಧ, ಮಿತ್ರ
ಸಂಬಂಧ. ಅರಸು ಗಂಡ, ತಂದೆ, ಅಣ್ಣ, ಇವರುಗಳಲ್ಲಿ ಆ
ಜ್ಞಾತ್ರಾಣವೂ, ಮಂದಿ, ಹೆಂಡಿರು, ಮಕ್ಕಳು, ತಮ್ಮ ಇವರು
ಗಳಲ್ಲಿ ವಿಧೇಯತಾ ತ್ರಾಣವೂ ಇರತಕ್ಕದ್ದು. ಆಜ್ಞೆಯನ್ನು
ವುದು ಸನ್ಮಾರ್ಗದಲ್ಲಿಯೂ, ಪರಹಿತದಲ್ಲಿಯೂ, ವಿಧೇಯತೆ,
ಎನ್ನುವುದು ಸನ್ಮಾರ್ಗದಲ್ಲಿಯೂ ನಿಷ್ಕಾಪಟ್ಯದಲ್ಲಿಯೂ, ಪರಿ
ಣಮಿಸಬೇಕು. ಮಿತ್ರರಲ್ಲಿ ಪರಸ್ಪರ ಸದ್ಗುಣಾಚರಣೆಯೆ



Digitized by ROJA MUTHIAH RESEARCH LIBRARY

ಮುಖ್ಯವಾದ ವಿಧಿ. ಈ ಸಂಬಂಧಗಳು ಅರಿಷಡ್ವರ್ಗಗಳ ಬಾಧೆಯಿಂದ ವ್ಯತ್ಯಸ್ತವಾಗುವುದು ನಿಜ, ಇಂಥಾ ವ್ಯತ್ಯಾಸದಿಂದಲೇ ಲೋಕ ಅನಾಯಕವಾಗುವುದು. ಆದರೆ ಮನುಷ್ಯ ಸ್ವಭಾವದೊಳಿರತಕ್ಕ ವಿಶೇಷವಾದ ಒಳ್ಳೆ ಸ್ವಭಾವದಲ್ಲಿಯೂ ಹಿರಿಯರು ನಡಿಸಿದಂತೆ ನಡಿಸಬೇಕೆಂಬ ಗೌರವದ ಬಿಗುವಿನಲ್ಲಿಯೂ ಕಾಂಫೂಷನಿಗೆ ಬಹಳ ನಂಬಿಕೆ ಇತ್ತು. ತಮಗಿಂತಲೂ ದೊಡ್ಡವರಾದವರ ಇಷ್ಟಕ್ಕೆ ಪಾಮರರು ಬಗ್ಗವದಕ್ಕಿಂತಲೂ ಹೆಚ್ಚಾಗಿ ಗಾಳಿಗೆ ದರ್ಭೇಗರಿ ಬಗ್ಗುವುದಿಲ್ಲವೆಂದು ಆತ ಹೇಳುತಿದ್ದನು. ಉತ್ತಮನಾದ ಅರಸ ಹುಟ್ಟಿದರೆ ಉತ್ತಮವಾದ ಪ್ರಜೆಗಳೂ ಕೂಡಲೆ ಹುಟ್ಟುವರಂತೆ ಇಂಥಾ ನಾಲ್ಕು ಸಂಬಂಧಗಳಲ್ಲದೆ ಇನ್ನೂ ಬೇರೇ ಸಂಬಂಧಗಳಿರಬಹುದು: ಮಸಲ ಇವು ಯಾವುದಕ್ಕೂ ಸೇರದೆ ಉದಾಸೀನರಾಗಿರತಕ್ಕವರು ಇದಕ್ಕೆ ಸೇರಲೇ ಇಲ್ಲ. ಆದರೆ ಲೋಕವನ್ನೆಲ್ಲಾ ಈ ಐದುಭಾಗವಾಗಿ ಮಾಡಿರುವ ಕಾರಣ ಮೊದಲಿನ ನಾಲ್ಕು ಭಾಗಗಳಲ್ಲಿ ಹೇಳಿರುವ ಸಂಬಂಧಗಳು ಯಾವುದೂ ಇಲ್ಲದಿರತಕ್ಕವರು ಐದನೇ ಸಂಬಂಧವಾದ ಮಿತ್ರರಲ್ಲಿಯೇ ಸೇರಬೇಕಾಯಿತು. ಇದರಿಂದ ಲೋಕದ ಜನರೆಲ್ಲಾ ಪರಸ್ಪರ ಮಿತ್ರರೇ ಆದರು. ಇಂಥಾ ಶ್ಲಾಘನೀಯವಾದ ಅಭಿಮತವು ಕಾಂಫೂಷನ ಸಮಕಾಲಿಕನಾದ ಬುದ್ಧನ ಪರಮಧರ್ಮಕ್ಕೆ ಸರಿಯಾದ್ದಾಗಿದೆ.

ಆದರೆ ಮೇಲೆ ಹೇಳಿದಂತೆ ಉತ್ತಮವಾದ ಅರಸು, ತಾನೊಬ್ಬನೇ ಆಗಬಹುದಾಗಿತ್ತು. ಆಯಾ, ರಾಜ್ಯಗಳ ದೊರೆಗಳು ಹ್ಯಾಗಿರಬೇಕೋ ಅದನ್ನು ಅವರಿಗೆ ಬೋಧಿಸಬಲ್ಲ. ಮೇಲೂಪುರಾತನರಲ್ಲಿದ್ದ ಅಚ್ಚಳಿಯದ ಧರ್ಮಾಚರಣೆಯನ್ನೂ



ಆಯಾ ರಾಯರ ವಂಶಕ್ಕೆ ಮೂಲಪುರುಷರಾದ ರಾಜರುಷಿಗಳನ್ನೂ, ಅದಕ್ಕೆ ಪೂರ್ವದಲ್ಲಿದ್ದ ಷಾ ಆಂಗಿ ಎಂಬ ಸಂತತಿಯ ಮೂಲಪುರುಷನಾದ ಸಾ. ಅಂಗ್. ಎಂಬ ಮಹಾಪುರುಷನನ್ನೂ, ಚೀನಾಸಂಸ್ಥಾನದಲ್ಲಿ ಪ್ರಥಮತಃ ವಂಶಪರಂಪರೆಯಾಗಿ ನಡೆದು ಬರುವ ರಾಜ್ಯವನ್ನು ಸ್ಥಾಪನೆಮಾಡಿದ ಯುರ್. ಎಂಬಾತನನ್ನೂ, ಇನ್ನೂ ಅನೇಕ ಪೂರ್ವೀಕರನ್ನೂ, ಬಹಳ ಶ್ಲಾಘನೆಮಾಡಿ ಆಕಾಲದ ರಾಜರಿಗೆ ತಿಳಿಯಪಡಿಸಬಲ್ಲ. ಆಗಿನ ಕಾಲದಲ್ಲಿದ್ದ ಚೀನಾರಾಜ್ಯದ ಧೊರೆಗಳೆಲ್ಲಾ ರಾಜ್ಯಭಾರಮಾಡತಕ್ಕ ರೀತಿಯನ್ನು ತಿಳಿದುಕೊಂಡಿದ್ದರೆ ಆಯಾ ರಾಜ್ಯಗಳ ಜನರು ಸೌಖ್ಯಕ್ಕೆ ತೌರುಮನೆಯಾಗಿರುತಿದ್ದರು.

ಹನ್ನೆರಡು ತಿಂಗಳಮಟ್ಟಿಗೆ ಯಾವ ಧೊರೆಯಾದರೂ ತಾನು ಹೇಳಿದಂತೆ ಕೇಳಿದರೆ ಅನೇಕ ಮಹಾಕಾರ್ಯಗಳನ್ನು ಮಾಡತಕ್ಕ ರೀತಿ ಹೀಗೆಂದು ತಾನು ಲೋಕಕ್ಕೆ ತೋರಿಸಿಯೇನಲ್ಲಾ ಎಂದು ಕಾಂಫೂಷನು ಪೇಚಾಡುತಿದ್ದನು.

## ೮ನೇ ಅಧ್ಯಾಯ.

### ದೇಶಾಟನೆ.

ಕಡಲೆ ಇದ್ದವರಿಗೆ ಹಲ್ಲಿಲ್ಲ, ಹಲ್ಲಿದ್ದವರಿಗೆ ಕಡಲೆ ಇಲ್ಲವೆನ್ನುವುದು ಈಗ ಖಂಡಿತವಾಯಿತು. ಈತನು ತನ್ನ

Digitized by ROJA MUTHIAH RESEARCH LIBRARY

ವಿವೇಕವನ್ನು ತೋರಿಸುವುದಕ್ಕೆ ಯಾವ ರಾಜ್ಯವೂ ಸಿಕ್ಕಲಿಲ್ಲ. ರಾಜ್ಯಾಧಿಪತಿಗಳಾದ ಅರಸರೋ ಅವಿವೇಕಕೂಪದಲ್ಲಿ ಇಳಿಯಮುಳುಗುವದು ಯಾವಾಗ್ಯೂ ಅವರ ಹಣೆಯಲ್ಲಿ ಬರೆಯಿತು. ನಿಷ್ಕಪಟವಾದ ಬುದ್ಧಿವಾದವನ್ನು ಕೇಳಿ, "ಅಯ್ಯೋ ಕೆಲಸಕ್ಕೆ ಬಾರದ ಮುದುಕನಬೊಗಳೆ" ಎಂದು ಕೆಲವರು ಒದರುವರು. ಇಂಥಾ ಬುದ್ಧಿವಾದದಂತೆ ನಡೆದರೆ ಹೇಗೋ ನಡೆಯದೆ ಇದ್ದರೆ ಹೇಗೋ ಎಂದು ಮನಸ್ಸಿನಲ್ಲಿ ಉಯ್ಯಾಲೆಯನ್ನು ಕಟ್ಟಿ ಜೋಗುಳವನ್ನು ಹಾಡುತಿರುವರು. ಅಂತೂ ಇಂತೂ ಕುಂತಿಮಕ್ಕಳಿಗೆ ರಾಜ್ಯವಿಲ್ಲ. ಅಪರಿಮಿತವಾದ ಐಶ್ವರ್ಯದಿಂದಲೂ ನಿರಂಕುಶವಾದ ಅಧಿಕಾರದಿಂದಲೂ ಹುಟ್ಟುವ ಕೆಟ್ಟ ಫಲಗಳನ್ನು ಮಾತ್ರ ತಿಂದು ಜ್ಞಾನತಪ್ಪುವ ರಾಜಕೀಟಗಳಿಗೆ ಪೂರ್ವವಯಸ್ಸೆಲ್ಲಾ ಸಂಕಟ ಸಂಪಾದನೆಗೂ ಅಪರವಯಸ್ಸೆಲ್ಲಾ ಅದರ ಅನುಭವಕ್ಕೂ ಹೀಗೆ ಅವರ ಆಯುಸ್ಸೆಲಾ ಎರಡು ಭಾಗವಾಗಿದೆ. ಇವರಿಗಿಂತ ಸ್ವಲ್ಪ ಮೇಲ್ತರದ ಅರಸರು ತಮ್ಮ ಕೈಗೆ ಸಿಕ್ಕಿದ ಗಂಟನ್ನು ಹೇಗೆಕಾಪಾಡಿಕೊಳ್ಳುವದಪ್ಪಾ ಎಂದು ಸಂಶಯಾತ್ಮರಾಗಿ ಏನು ಮಾಡಿದರೇನೋ ಯಾರನ್ನು ನಂಬಿದರೇನೋ ಎಂದು ಯೋಚನೆಯಲ್ಲಿಯೇ ಕಾಲವನ್ನು ಕಳೆಯುತಾ ಮೋಸದಿಂದ ತನ್ನ ದಾರಿದ್ರ್ಯವಿಚ್ಛಿತ್ತಿಯನ್ನು ಮಾಡಿಕೊಂಡು ಕಳ್ಳನಹಾಗೆ ಎಡಗೈ ಬಲಗೈಯನ್ನು ನಂಬದೆ ಹೆಚ್ಚು ಕೆಲಸಕ್ಕೂ ಹೋಗದೆ ತಮ್ಮ ಪದವಿ ಎಲ್ಲಿಹೋದೀತೋ ಎಂದು ಭಯಪಡುವರು. ಆದರೆ ಇವರೇ ಆಗಲಿ ಅವರೇ ಆಗಲಿ ಉಳಿದ ಕೆಲಸವೇನನ್ನಾದರೂ ಮಾಡಿಯಾರು. ತಮ್ಮ ಹಿತಚಿಂತಕರ ಮಾತನ್ನು ಮಾತ್ರ ಕೇಳುವುದಿಲ್ಲ. ಯಾರಮಾತನ್ನಾದರೂ ಕೇಳದೆ ಇದ್ದಾರು. ಕೃತ್ರಿಮಗಳ ಮಾತನ್ನು ಮಾತ್ರ

Digitized by ROJA MUTHIAH RESEARCH LIBRARY



ಕೇಳದೆ ಇರುವುದಿಲ್ಲ. ಕುರಿಗೆ ಬುದ್ಧಿ ಇಲ್ಲವೆನ್ನುವುದು ಪ್ರಕಾಶವಾಗಿಯೇ ಇದೆ. ಅನೇಕ ಪ್ರಾಣಿವಧೆಯನ್ನು ಮಾಡಿದ್ದರಿಂದ ರಕ್ತಗಟ್ಟಿ ಮಣ್ಣಾಗಿ ಕೊಳಕು ಮೆತ್ತಿಗೊಂಡಿರುವ ಕೈಯನ್ನೇ ನೆಕ್ಕುತ್ತಾ ಆ ಕೊಳೆಯ ಕ್ಷಾರವೇ ಬಹುರುಚಿ ಎಂದು ತಿಳಿದು ಬಿಸ್ಮಿಲ್ಲಾ ಮಾಡುವುದಕ್ಕೆ ಸಿದ್ಧವಾಗಿರುವವನ ಹಿಂದೆ ಹೋಗುವುದೇ ಹೊರತು ಮತ್ತೆ ಯಾರು ಎಷ್ಟುಬಗೆಯಲ್ಲಿ ಕರೆದರೂ ಹೋಗದು. ತಾತ್ಕಾಲಿಕವಾದ ಕೈಕೊಳೆಯೇ ಪಾವನವಾಯಿತು. ಅತ್ತ ಇತರರು ಹಿಡಿದಿರುವ ಗರಿಕೆಹುಲ್ಲು ಬೇಡವಾಯಿತು. ಒಂದು ನಿಮಿಷಮಾತ್ರದಲ್ಲಿ ತನ್ನ ತಲೆಯೂ ದೇಹವೂ ಬೇರೆಯಾಗುವುದೆಂದು ಅದೇನುಬಲ್ಲದು? ಭವಿಷ್ಯತ್ಜ್ಞಾನದ ಪರಿಮಾಣವೇ ವಿವೇಕದ ಪರಿಮಾಣ ಅಥವಾ ಬುದ್ಧಿಶಕ್ತಿಯ ಪರಿಮಾಣವಾದಕಾರಣ ಹಲವು ರಾಜರೂ ಅಜರಾಜನೂ ಬುದ್ಧಿಯಲ್ಲಿ ನಾನು ಹೆಚ್ಚು ತಾನು ಹೆಚ್ಚೆಂದು ಸೆಣಗಾಡಬಹುದು. ಪಂಚಭೂತಾತ್ಮಕವಾದ ಈ ಲೋಕದಲ್ಲಿ ಎಲ್ಲಾದರಲ್ಲಿಯೂ ಸುಗುಣ ಮಿಳಿತವಾಗಿಯೇ ಇದೆ. ಆದರೆ ಇಂಥಾ ಸುಗುಣ ತೋರುವುದಕ್ಕೆ ಕಾಲವ್ಯವಸ್ಥೆ ಮಾತ್ರ ಸ್ವಲ್ಪ ಉಂಟು. ದ್ರಾಕ್ಷೆಹಣ್ಣಿನ ಗುಣವನ್ನು ತಕ್ಷಣವೇ ಬಾಯಿಗೆ ಹಾಕಿಕೊಂಡು ಹೊಣಕಿಸಿ ಹೇಳಬಹುದು. ಹಲಸಿನ ಹಂಣಿನರುಚಿಯೂ ತೆಂಗಿನಕಾಯಿನ ರುಚಿಯೂ ಸ್ವಲ್ಪಕಾಲ ವ್ಯವಧಾನದಿಂದ ಹೊರತು ಹೇಳುವುದಕ್ಕಾಗುವುದಿಲ್ಲ. ಇದರಂತೆ ಮೇಣವನ್ನು ನಿಮಿಷದಲ್ಲಿ ರೂಪಾಂತರಮಾಡಿ ಅದರಪ್ರಯೋಜನವನ್ನು ನೋಡಬಹುದು. ಕಬ್ಬಿಣವು ಕೆಲವು ಕಾಲಗಳಮೇಲೆ ಸ್ವಲ್ಪ ಪ್ರಯತ್ನದಿಂದ ಉಪಯೋಗಕ್ಕೆ ಬರುವುದು. ಕಳ್ಳನಿಗೆ ಇಂದು ಅವಕದ್ದ ದ್ರವ್ಯದಿಂದ ಆನಂದವುಂಟಾಗುವುದು. ಶ್ರಮಪಟ್ಟು ಕಾಸಿಗೆ ಕಾಸು

ಕೂಡಹಾಕಿ ಆರ್ಜನೆಮಾಡುವವರಿಗೆ ಉತ್ತರೋತ್ತರ ಆನಂದ ಉಂಟಾಗುವದು. ಬೈಗಳು ಬೈದವರಿಗೆ ತತ್ಕಾಲದಲ್ಲಿ ಆಪ್ಯಾಯನವಾಗಿರುವುದು. ಒಳ್ಳೇ ಮಾತಿನಲ್ಲಿ ಉತ್ತರೋತ್ತರ ಫಲವುಂಟಾಗುವುದು. ಹೀಗೆ ಯಾವಾಗಲಾದರೂ ಆಗಲಿ, ಯಾರಿಗಾದರೂ ಆಗಲಿ ಪ್ರತಿಯೊಂದು ಪದಾರ್ಥದಿಂದಲೂ ಪ್ರತಿಯೊಂದು ಕೃತ್ಯದಿಂದಲೂ ಗುಣವುಂಟಾಗುವುದು. ಒಳ್ಳೇ ಕೆಲಸ ಕೆಟ್ಟಕೆಲಸಗಳಲ್ಲಿ ಹೀಗೆ ಗುಣವುಂಟು, ಎಂದರೆ ಜನರಿಗ ಸೌಖ್ಯವುಂಟು. ಕೆಟ್ಟ ಕೃತ್ಯದ ಸೌಖ್ಯ ತಾತ್ಕಾಲಿಕವಾಗಿಯೂ ಕ್ಷಣಮಾತ್ರದ್ದಾಗಿಯೂ ಇರುವುದು. ಒಳ್ಳೇ ಕೃತ್ಯದ ಸೌಖ್ಯ ಮುಂದೆ ಆಗತಕ್ಕದ್ದಾಗಿಯೂ ನಿರಂತರವಾದ್ದಾಗಿಯೂ ಇರುವುದು. ಇಷ್ಟೇ ವ್ಯತ್ಯಾಸ. ಆದರೆ ಮೇಲೆ ಹೇಳಿದಂತೆ ಅಜಸ್ವಭಾವವುಳ್ಳ ನಮ್ಮ ರಾಜರುಗಳು ವರ್ತಮಾನಕಾಲವೇ ಮುಖ್ಯವಾದದ್ದೆಂದು ಹಿಡಿಯುವರಾದ ಕಾರಣ ಗುಣಾಢ್ಯರನ್ನು ತಿರಸ್ಕರಿಸಿ ನೀಚರ ದುರ್ಬೋಧೆಯ ಆನಂದದಲ್ಲಿ ಲೀನರಾಗುವರು. ಹೀಗಾದಕಾರಣ ರಾಜ್ಯದ ದುರ್ಮಂತ್ರಿಗಳ ಮಾತೇ ಮೇಲಾಗಿ ಕಾಂಫೂಷನ ವಿವೇಕವಾರ್ತೆ ಎಲ್ಲಾ ಗಾಳಿಗೆ ತೂರಿಹೋಯಿತು. ಇಂತು ಲೂ ರಾಜ್ಯವನ್ನು ಕಾಂಫೂಷನು ಬಿಡುವಾಗ್ಯೆ ವಯಸ್ಸು ಐವತ್ತಾರಾಗಿತ್ತು. ಆಮೇಲೆ ಹದಿಮೂರು ವರುಷದವರಿಗೆ ಅನೇಕ ರಾಜ್ಯಗಳನ್ನು ಸುತ್ತುತಾ ಒಳ್ಳೇ ಒಂದು ದೇಶವೂ ತನ್ನಮಾತನ್ನು ಕೇಳತಕ್ಕ ಒಬ್ಬ ಧೊರೆಯೂ ತನ್ನ ಕೈಗೆ ಸಿಕ್ಕಿ ಅಂಥಾ ರಾಜ್ಯದ ಮೂಲಕ ಇತರ ಅರಸುಗಳ ಸೀಮೆಯೂ ಕ್ರಮಪಡುವಹಾಗೆ ಆದರೆ ಸಾಕೆಂದು ಅರಸು ತಾ ಹೊರಟನು. ಆದರೇನುಪ್ರಯೋಜನ ? ಈತನನ್ನು ಆದರದಿಂದ ಕಂಡು ವಿಶೇಷ ಮರ್ಯಾದೆಯಿಂದ ಕೆಲವು ದಿವಸ

Digitized by ROJA MUTHIAH RESEARCH LIBRARY



ತಮ್ಮಲ್ಲಿರಿಸಿಕೊಂಡಿದ್ದು ತರುವಾಯ ಮುಂದಕ್ಕೆ ಸಾಗುಕಳ್ಹಿಸುವಂಥಾ ದೊರೆಗಳು ಅನೇಕರು ದೊರೆತರೇಅಲ್ಲದೆ ಈತ ಹೇಳಿದ ವಿವೇಕವನ್ನು ಕೇಳಿ ಅದರಂತೆ ರಾಜ್ಯಭಾರಮಾಡಲು ಮನಸ್ಸುಳ್ಳ ಭೂಪತಿಯೊಬ್ಬನಾದರೂ ದೊರೆಯಲಿಲ್ಲ.

ಹೀಗೆ ದೇಶಾಟನಮಾಡತಕ್ಕ ಕಾಲದಲ್ಲಿ ಆಕಾಲದ ಜನರ ನಡತೆಯನ್ನೂ ಪದ್ಧತಿಯನ್ನೂ ಈಮಹನೀಯನ ಹಲವು ಸಿಧ್ಧಾಂತಗಳನ್ನೂ ವ್ಯಕ್ತಪಡಿಸತಕ್ಕ ಅನೇಕ ಸಂಗತಿಗಳು ನಡೆದವು. ಸಾಧಾರಣವಾಗಿ ಪ್ರಾಜ್ಞರ ವಿವೇಕವು ಬಾಯಿನಲ್ಲಿ ಎಷ್ಟೇ ಹೇಳಲ್ಪಟ್ಟಾಗ್ಯೂ ಸಮಯದಲ್ಲಿ ಕಾರ್ಯತಃ ತೋರಿಬರುವಷ್ಟು ಬಲವಾಗಿ ತಿಳಿಯುವುದಿಲ್ಲ. ಮೇಲೂ ಅಂಥಾ ಕಾರ್ಯವನ್ನು ಮಾಡಿ ಆ ವಿವೇಕವನ್ನು ತೋರಿಸುವಾಗ್ಯೆ ತತ್ಕಾರ್ಯ ನಿರ್ವಾಹವಾಗುವುದರೊಳಗಾಗಿ ತದಂಗವಾಗಿ ಹುಟ್ಟುವ ಶ್ರಮವನ್ನೂ ತೊಡಕುಗಳನ್ನೂ ತಕ್ಕ ತೋಡುಗಳಿಂದ ನಿವಾರಣಮಾಡಿ ಕೆಲಸವನ್ನು ಕೊನೆಗಾಣಿಸಿ ತೋರಿಸುವ ವಿವೇಕವೇ ಜ್ಞಾನಾಂಜನವೆನ್ನಿಸಿಕೊಳ್ಳುವುದಕ್ಕೆಹಕ್ಕುಳ್ಳದ್ದಾಗುವಕಾರಣ, ಇಂಥಾ ಸಣ್ಣ ಸಂಗತಿಗಳು ಬಹಳ ಮುಖ್ಯವಾದವುಗಳೆಂದು ಎಣಿಸಬೇಕು. ಕಾಂಫೂಷನು ತನ್ನ ಶಿಷ್ಯರೊಡಗೂಡಿಕೊಂಡು ಹೋಗುತಿರುವಾಗ ಒಂದಾನೊಂದು ಸಮಯದಲ್ಲಿ ತಿನ್ನುವದಕ್ಕೆ ಆಹಾರವಿಲ್ಲದೆ ದಾರಿದ್ರ್ಯದಿಂದ ಸಾಯುವ ಹೊತ್ತು ಬಂತು. ಈತನ ಮುಖ್ಯ ಶಿಷ್ಯನಾದ ಸೇಲು ಕೂಡ ಎದೆಗೆಟ್ಟು ಮಹಾತ್ಮಸಹಿತ ಇಂಥಾ ಕಷ್ಟವನ್ನು ಅನುಭವಿಸಬಹುದೇ ಎಂದು ಪ್ರಶ್ನೆಮಾಡಲು, ಕಾಂಫೂಷನು ಅವನನ್ನು ಕುರಿತು — ಮಹಾತ್ಮನೂ ಕೂಡ ದಾರಿದ್ರ್ಯಾವಸ್ಥೆಯನ್ನು ಅನುಭವಿಸಬೇಕಾಗಬಹುದು. ಆದರೂ ಮಹತ್ವಕ್ಕೇನೂ ಕುಂ

ದಕವಿಲ್ಲ ; ಇಂಥಾ ಸಂದರ್ಭಗಳಲ್ಲಿಯೇ ಮಹತ್ವದ ಪ್ರಭಾವ ವಿಶೇಷವಾಗಿ ಪ್ರಕಾಶಕ್ಕೆ ಬರತಕ್ಕದ್ದು, ಇಂಥಾ ಇಕ್ಕಟ್ಟಿನಲ್ಲಿಯೇ ಅಲ್ಪರಲ್ಲಿ ದಮೆಯು ಕೆಡುವುದು, ಎಂದು ಹೇಳಿದನು. ಇಂಥಾ ದುರ್ದಶೆಗಳನ್ನು ವಿಶೇಷವಾಗಿ ಕಂಡು ಅನುಭವಿಸಿದ್ದ ಈತನ ಶಿಷ್ಯರಿಗೆ ಇವನ ರಾಜಧರ್ಮದ ಕಾರ್ಯಲಾಭದಲ್ಲಿ ಅಷ್ಟೊಂದು ನಂಬುಗೆಇರಲಿಲ್ಲ, ಆಧರ್ಮದ ಬಿಗಿಯನ್ನು ಸ್ವಲ್ಪಮಟ್ಟಿಗಾದರೂ ಸಡಿಲಮಾಡಬಾರದೇ, ಹಾಗಿದರೆ ಸಹಜವಾಗಿಯೂ ಪ್ರಾಮುಖ್ಯಸರಾದ ಧೊರೆಗಳಗುಂಪಿನಲ್ಲಿ ಯಾವನಾದರೂ ಒಬ್ಬ ಅದೃಷ್ಟಶಾಲಿಯು ಆ ಧರ್ಮಸಾರವನ್ನುಕೊಂಚ ತಿಳಿದು ಆಶ್ರಯವನ್ನು ನೀಡಲು, ಅದನ್ನು ಸ್ವೀಕರಿಸಿ ತಮ್ಮಗುರುವು ಸೌಖ್ಯವಾಗಿರಬಾರದೇ; ಎಂದು, ಶಿಷ್ಯವರ್ಗವೆಲ್ಲಾ ಚಿಂತಿಸುತಿತ್ತು. ಸೇಕುಂಗನೆಂಬ ಶಿಷ್ಯನು ಗುರುವನ್ನುಕುರಿತು—ಸ್ವಾಮಿ ತಮ್ಮ ಬೋಧೆಯಿಂದದ್ಯೋತಕವಾಗುವಧರ್ಮರಹಸ್ಯವೆಲ್ಲಾ ಸರ್ವೋತ್ಕೃಷ್ಟವಾದದ್ದೇ ಸರಿ, ಅದನ್ನು ಅಂಗೀಕರಿಸಿಕೊಳ್ಳುವ ಮಟ್ಟಿನಶಕ್ತಿಯು ರಾಜರಿಗೆಯಾರಿಗೂ ಇಲ್ಲವಾಗಿ ಅಂಗೀಕೃತವಾಗುವ ಮಟ್ಟಿಗೆ ಸ್ವಲ್ಪ ಸಡಿಲಕೊಡಬಾರದೇ ಎಂದು ಕೇಳಿದನು. ಕೂಡಲೇ ಗುರುವು—ಅಯ್ಯ ಉತ್ತು, ಬಿತ್ತಿ, ಪೈರುಮಾಡುವುದು ರೈತನ ಕೆಲಸ, ಫಲವಾಗುವದು ಅವನ ಕೆಲಸವೆ? ಬೇಕಾದ ಸಾಮಾನುಗಳನ್ನು ಮಾಡುವುದು ಕೈವಾಡ ಬಣ್ಣಾಂತರದವರ ಕೆಲಸ, ಅದನ್ನು ಇತರರು ಕೊಂಡುಕೊಳ್ಳುವುದಕ್ಕೆ ಅವರು ಹೊಣೆಯೇ? ಹೀಗೆಯೇ ಪರ್ಯಾಲೋಚನೆಯಿಂದ ಧರ್ಮವ್ಯವಸ್ಥೆಯನ್ನು ಮಾಡುವುದು ಪಂಡಿತರ ಕರ್ತವ್ಯ, ಇತರರು ಅಂಥಾವ್ಯವಸ್ಥೆಯನ್ನು ಸ್ವೀಕರಿಸಿ ನಡೆಯುವ ವಿಷಯದಲ್ಲಿ ಪಂಡಿತರ ಜವಾ

Digitized by ROJA MUTHIAH RESEARCH LIBRARY



ಹಾಸ್ಯಮಾಡಿ ಧಿಃಕರಿಸುತಾ "ಇಲ್ಲಿ ಏನು ಒರಲುತಿ, ಮುಚ್ಚು" ಎಂದು ಪಿಸುಣ ಸ್ವಭಾವವನ್ನು ತೋರ್ಪಡಿಸುತಾ ಕುಣಿದಾಡುವುದನ್ನು ನಾವು ನೋಡಿಯೇ ಇದೇವೆ. ಇದು ಸಾಧಾರಣ ಜನರಿಗೆ ತಕ್ಕದ್ದಲ್ಲದೆ ಪ್ರಾಜ್ಞರ ವಿಷಯದಲ್ಲಿ ದೋಷ. ನಿಷ್ಠುರೋಕ್ತಿಗಳೂ, ಬಾಲಭಾಷೆಗಳೂ, ಅಪ್ರಕೃತವಾದ ಹಾಸ್ಯಗೋಷ್ಠಿಗಳೂ, ಅನ್ಯರಿಗೆ ಆಗ್ರಹವನ್ನೂ ಮನ ದುಗುಡವನ್ನೂ ಉಂಟುಮಾಡುವ ಕಾರಣ, ಪರೋಪಕಾರ ದೃಷ್ಟಿಯುಳ್ಳ ಪುರುಷರ ನಿಜವಾದ ಕೋರಿಕೆಯು, ಅಷ್ಟರಮಟ್ಟಿಗೆ ಭಗ್ನವಾಗುವುದೇನೋ ನಿಜ. ಆದರೆ ಒಳಗೂ ಹೊರಗೂ ಏಕರೀತಿಯಾಗಿದ್ದು ಕೆಟ್ಟದನ್ನು ಕಂಡಾಗ ಯಾವ ಮರ್ಯಾದೆಯೂ ಇಲ್ಲದೆ ನಿಗ್ರಹಿಸಿ, ಒಳ್ಳೇದನ್ನು ಕಂಡಾಗ ಶ್ಲಾಘಿಸಿ, ನಿಷ್ಕಪಟಿಯಾಗಿರುವುದರಿಂದ ಸ್ವಪ್ರಯೋಜನಕ್ಕೆ ಬಾಬರನಿಗಾದಂತೆ ಆಯುಸ್ಸು ಕಡಿಮೆಯಾದರೂ, ಪರಪ್ರಯೋಜನವು ಹುಮಾಯೂನನಂತೆ ಆರೋಗ್ಯವನ್ನು ಹೊಂದುವುದು. ಅಚ್ಚಳಿಯದ ಪರಪ್ರಯೋಜನವೇ ಉದಾರಚರಿತೆಯ ಮೂಲಸ್ತಂಭವಾದಕಾರಣ ಕಾಂಫೂಷನಂಥಾ ಮಹಾಪಂಡಿತ ಹಿಂದೆ ಒಂದು ಮುಂದೆ ಒಂದು ಆಗಿದ್ದನೆಂದು ಹೇಳಿರುವುದನ್ನು ಮನ ಯಾಕೋ ಒಪ್ಪುವದಿಲ್ಲ.

ಇದೂ ಅಲ್ಲದೆ ಮೇಲೆ ಹೇಳಿರತಕ್ಕಂಥಾ ಕಾಂಫೂಷನ ಆಸ್ಥಾನ ಚರ್ಯಗಳಲ್ಲಿ ಪ್ರತಿಯೊಂದಕ್ಕೂ ಲಾಕ್ಷಣಿಕಾರ್ಥವನ್ನು ಸ್ವಲ್ಪ ಶ್ರಮದಿಂದ ಕಲ್ಪಿಸಿಕೊಳ್ಳಬಹುದು. ಹೇಗೆಂದರೆ ಅಧಿಕಾರದಂಡವನ್ನು ಹಿಡಿದು ಸೊಂಟವನ್ನು ಬಗ್ಗಿಸಿಕೊಂಡಾಗ ಅಧಿಕಾರಮಾಡತಕ್ಕದ್ದು ಬಹುಶ್ರಮವೆಂತಲೂ ಅದು ಬಹು ಭಾರವೆಂತಲೂ ಲೋಕಕ್ಕೆ ತೋರ್ಪಡಿಸಬೇಕೆಂಬ

ಆತನ ಆಶೆ ದ್ಯೋತಕವಾಗಬಹುದು. ಧೊರೆಗೂ ಅಧಿಕಾರಿ
ಗಳಿಗೂ ಆತ ಮಾಡಿದ ಮರ್ಯಾದೆಯಿಂದ ಸಮಸ್ತರೂ ಗೌರವ
ವಾಗಿ ನಡೆದುಕೊಳ್ಳಬೇಕೆಂದು ತೋರಿಸಿದನೆಂದು ಹೇಳ
ಬಹುದು. ಹೀಗೆ ಒಂದೊಂದಕ್ಕೆ ಒಂದೊಂದು ಅರ್ಥ ವಿದ್ದಾ
ಗ್ಯೂ ಸರಿಯಾಗಿ ಭೇದಿಸಿಕೊಂಡು ಹೊದರೆ, ಇವುಗಳಿಗೆಲ್ಲಾ
ನಟನೆ ಎಂಬ ಮತ್ತೊಂದು ನಾಮವನ್ನಿಡದೇ ಇರುವುದು ಏಕ
ಪಕ್ಷವನ್ನೇ ಹಿಡಿದು ಮಾತಾಡತಕ್ಕವರ ಕೆಲಸವಾಗಿದೆ.
ಇನ್ನೊಂದು ವಿಷಯವೇನಂದರೆ ವಿಷ್ಣುವಲ್ಲದೆ ಪೃಥ್ವೀಪತಿ
ಯಲ್ಲವೆಂಬ ಗಳಗಳವನ್ನು ಬಿಟ್ಟು ಹಲವು ಹುಲ್ಲು ಮನೆಗ
ಳನ್ನು ಜನರು ತಾವಾಗಿ ಒಪ್ಪಿಬಿಟ್ಟದ್ದರಿಂದ ಒಂದು ಅರಮನೆ
ಯಾಯಿತೆಂಬ ಪಾಶ್ಚಾತ್ಯರ ನವೀನ ಮತವನ್ನು ಹಿಡಿದು
ಮಾತಾಡಿದರೆ, ಅಧಿಕಾರಕ್ಕೆ ಇಷ್ಟು ವಿಪರೀತವಾದ ಗೌರವ
ವನ್ನು ಕಾಂಫ್ಯೂಷ ಕಲ್ಪಿಸಿದ್ದು ಅತ್ಯಾಶ್ಚರ್ಯ. ಆದರೂ ಪೂರ್ವಾ
ಪರ ವಿರುದ್ಧವಿಲ್ಲದಂತೆ ಈ ನಡತೆಗ ಅರ್ಥಮಾಡತೊಡಗಿದರೆ
ಅಧಿಕಾರವೆನ್ನುವುದು ಈ ಲೋಕದಲ್ಲಿ ಯಾವ ಸತ್ಕಾರ್ಯವನ್ನು
ಮಾಡುವುದಕ್ಕೆ ಹುಟ್ಟಿತೋ ಅಂಥಾ ಕರ್ತವ್ಯವನ್ನು ಅದು
ಮಾಡದೇ ಜೇಲಿ ಎದ್ದು ಹೊಲಾನ್ನು ಮೆಯ್ಯುವ ಗಟ್ಟವಾದರೂ, ಇತ
ರರ ಗೌರವಕ್ಕೆ ಅದು ಬಾಧ್ಯವಾಗುವುದೆಂದು ಕಾಂಫ್ಯೂಷನ
ತಾತ್ಪರ್ಯವಿದ್ದಂತೆ ಕಂಡುಬರುವುದಿಲ್ಲ.

ಸಾಂಕ್ರಾಮಿಕ ಜಾಡ್ಯಗಳು ಎಲ್ಲಾ ದೇಶಗಳಲ್ಲಿಯೂ
ಅನಾದಿ. ಇವುಗಳು ದೈವಕೃತವೆಂದು ನಂಬಿ ಆಯಾ ದೇವತೆ
ಗಳ ತೃಪ್ತಿಗಾಗಿ ಬಲಿ ಮೊದಲಾದ್ದನ್ನು ಹಾಕಿ ಯಂತ್ರಮಂತ್ರ
ಗಳನ್ನು ಮಾಡುತ್ತೇವೆಂದು ನಟಿಸುವ ಜನರು ಎಲ್ಲೆಲ್ಲಿಯೂ
ಉಂಟು. ಇಂಥವರು ಅನೇಕವಾಗಿ ಗುಂಪುಸೇರಿ ಮೆರವಣಿಗೇ

Digitized by ROJA MUTHIAH RESEARCH LIBRARY



ಮಾಡಿಕೊಂಡು ಬೀದಿಯಲ್ಲಿ ಹೊರಟು ಕಾಂಫ್ಯೂಷನ ಮನೆಯ
ಸಮೀಪಕ್ಕೆಬರಲು, ವೃದ್ಧಾಚಾರವನ್ನು ಲೋಕಕ್ಕೆ ಬೋಧಿಸು
ತ್ತಿದ್ದ ಈತನು ಮನೆಯಿಂದ ಈಚೆಗೆ ಬಂದು ನಿಂತು ಅವರಿಗೆ
ಮರ್ಯಾದೆಮಾಡಿದನಂತೆ. ಈತನು ಅನ್ನಪಾನಗಳಲ್ಲಿ ವಿಶೇಷವಾ
ಗಿ ಮಿತವಾಗಿರುತ್ತಿದ್ದನು. ಈತನಿಗೆ ಸಾರು ಮೊದಲಾದ್ದನ್ನು
ಹಾಕಿ ಕಲಿಸಿ ಸಿದ್ಧಮಾಡಿತಂದಿಟ್ಟ ಅನ್ನವನ್ನೇ ತಿನ್ನುವ ಅಭ್ಯಾ
ಸ. ಗುಡುಗಿನಶಬ್ದವನ್ನು ಕೇಳಿದರೆ ಮುಖವಿವರ್ಣವಾಗುತಿತ್ತು.
ವ್ಯಸನಪಡುವ ಜನರನ್ನು ಕಂಡರೆ ಈತನೂ ಕೂಡಲೇ ಸಂಕ
ಟಪಡುತಿದ್ದನು. ದಿಕ್ಕಿಲ್ಲದ ಮಿತ್ರರು ಯಾರು ಕಾಲವಾದರೂ
ತಾನು ಅವರಿಗೆ ಉತ್ತರಕ್ರಿಯಾದಿಗಳನ್ನು ಮಾಡುತಿದ್ದನು.
ಉಚಿತವನ್ನು ವಿಶೇಷವಾಗಿ ಕೊಡುತಿದ್ದನು. ಯಾವಾಗಲೂ
ಪರರಿಗೋಸ್ಕರಮರುಗುವ ಸ್ವಭಾವವಾದ ಗುಣವು ಸಂತತ
ವಾದ ಅದೇ ಯೋಚನೆಯಿಂದಲೂ ಅದೇ ಅಭ್ಯಾಸದಿಂದಲೂ
ವೃದ್ಧಿಹೊಂದಿ ನೆಲೆಯಾಗಿ ನಿಂತಿದ್ದ ಕಾರುಣ್ಯಕ್ಕೆ ಬೀಜವಾಗಿ
ರುವುದು. ದುಃಖವನ್ನು ಕಂಡರೆ ದುಃಖಪಡುವುದೂ ಸಂತೋಷ
ವನ್ನು ಕಂಡರೆ ಸಂತೋಷಪಡುವುದೂ, ಮರುಕವುಳ್ಳ ಮನ
ಸ್ಸಿಗೆ ಸಹಜವಾಗಿರಲಾಗಿ, ಇಂಥಾ ಸುಖದುಃಖಸಂತಾಪದಿಂ
ದಲೇ ತದನುಗುಣವಾದ ಕಾರ್ಯಾಚರಣೆ ಹುಟ್ಟುವುದು. ನಮಗೆ
ಶಕ್ತಿಗುಂದದಿರುವಾಗ, ಈ ಸಂತಾಪ ಎಷ್ಟು ಬಲವಾದ್ದಾದರೆ
ಕಾರ್ಯೋದ್ಯೋಗದ ಸಂಭವ ಅಷ್ಟು ಹೆಚ್ಚಾಗಿದ್ದೀತು. ಕಾಂಫ್ಯೂ
ಷನಲ್ಲಿ ಈ ಉದ್ದಾಮವಾದಗುಣ ಹೆಚ್ಚಾಗಿದ್ದ ಕಾರಣ
ಪರೋಪಕಾರಬುದ್ಧಿಯೂ ಈತನಲ್ಲಿ ವಿಶೇಷವಾಗಿತ್ತು.
ಈತನ ಸಂಸಾರದಲ್ಲಿ ಇದ್ದ ಸುಖವು ಹಿಂದೆ ಸ್ವಲ್ಪ ಕಂಡಿದೆ.
ಪತ್ನಿಯಲ್ಲಿದ್ದ ಮೈತ್ರಿಯೂ ಮೇಲೆ ಕಂಡಿದೆ. ಪುತ್ರನಾದ ಲಿ

ಎಂಬುವನಲ್ಲಿಯೂ ವಿಶೇಷವಾದ ಅಭಿಮಾನವಿರಲಿಲ್ಲ. ಶಿಷ್ಯರೊಡನೆ ದೇಶದೇಶವನ್ನು ಸುತ್ತುತ್ತಾ ಇದ್ದ ಈ ಪಂಡಿತನಿಗೆ ಮಗನ ವಿಚಾರವನ್ನು ನೋಡುವುದಕ್ಕೆ ಸಂದರ್ಭವಿರಲಿಲ್ಲ. ಅಥವಾ ಊರಿನಲ್ಲಿಯೇ ಇದ್ದರೂ ತಂದೆ ಮಕ್ಕಳಿಬ್ಬರೂ ಸೇರಿ ಮಾತನಾಡಿದ್ದು ಬಹಳ ಅಪೂರ್ವ. ಆದರೆ, ಪುತ್ರವಾತ್ಸಲ್ಯವು ಯಾವಾಗಲೋ ಒಂದು ಸಾರಿ ಮಾತ್ರ ಕಂಡು ಬಂತು. ಒಂದುದಿನ ಶಿಷ್ಯನೊಬ್ಬನು ಲಿ ಯನ್ನು ಕಂಡು ನಮಗಳಿಗೆ ಹೇಳಿರುವ ಪಾಠಕ್ಕಿಂತಲೂ ಹೆಚ್ಚು ವಿಷಯಗಳನ್ನು ಏನಾದರೂ ಮಕ್ಕಳಾದ ತಮಗೆ ಗುರುಗಳು ಹೇಳಿಕೊಟ್ಟಿದಾರೆಯೆ? ಎಂದು ಕೇಳಿದನು. ಅದಕ್ಕೆ ಲಿಯು-"ಅಯ್ಯ? ಇಲ್ಲ ನಮ್ಮ ಯಜಮಾನರು ಒಂದು ಕಡೆಯಲ್ಲಿ ಏಕಾಂಗಿಯಾಗಿ ನಿಂತುಕೊಂಡಿದ್ದರು. ನಾನು ಜಾಗ್ರತೆಯಿಂದ ಮಹಡಿಯನ್ನು ಇಳಿದು ಹೋಗುತಿದ್ದೆ. ಕೀರ್ತನೆಗಳನ್ನು ಓದಿದ್ದೀಯ ಎಂದು ನನ್ನನ್ನು ಕೇಳಿದರು. ನಾನು ಇಲ್ಲವೆನಲು ಅವರು- ಕೀರ್ತನೆಗಳನ್ನು ನೀನು ಓದದಿದ್ದರೆ, ನೀನು ಸಂಭಾಷಣೆಗೆ ಯೋಗ್ಯನಲ್ಲ ಎಂದರು. ಮತ್ತೊಂದುದಿನ- ನೀತಿಶಾಸ್ತ್ರನಿಬಂಧನೆಗಳನ್ನು ಓದಿದೆಯ? ಎಂದು ಕೇಳಿದರು. ಇನ್ನೂ ಇಲ್ಲವೆಂದು ನಾನು ಹೇಳಲಾಗಿ-ನೀನು ಅದನ್ನು ಓದದಿದ್ದರೆ ನಿನ್ನ ಗುಣವೂ ನಡತೆಯೂ ನೆಲೆಗೆ ನಿಲ್ಲುವದಿಲ್ಲವೆಂದು ಹೇಳಿದರು. ನಮ್ಮ ಯಜಮಾನರು ಹೇಳಿದ್ದು ಈ ಎರಡು ಮಾತೇ ಹೊರತು ಇನ್ನೇನೂ ಇಲ್ಲ" ಎಂದು ಹೇಳಿದನು ಕೂಡಲೇ ಶಿಷ್ಯನು ಲಿ ಯನ್ನು ಕುರಿತು ಸ್ವಾಮಿ ತಮ್ಮನ್ನು ನಾನು ಒಂದು ಮಾತನ್ನು ಕೇಳಿದರೆ ನನಗೆ ಮೂರು ಮಾತು ತಿಳಿಯಿತು. ಹೇಗೆಂದರೆ ಕೀರ್ತನೆಯನ್ನು ಓದುವುದು ಒಂದು ನೀತಿಶಾಸ್ತ್ರನಿಬಂಧನೆ



ಗಳನ್ನು ತಿಳಿಯುವುದು ಒಂದು. ನಮ್ಮ ಮಹಾಪುರುಷನು ತನ್ನ ಮಗನ ವಿಷಯದಲ್ಲಿ ವಿಶೇಷವಾಗಿ ತಟಸ್ಥವಾಗಿರುವುದು ಒಂದು; ಹೀಗೆಂದು ಹೇಳಿದನು. ಇದರಿಂದ ತನ್ನ ಮಕ್ಕಳಲ್ಲಿ ಸ್ವಭಾವವಾಗಿ ಇತರರಿಗೆ ಇರಬಹುದಾದ ಅಭಿಮಾನವು ಕಾಂಫೂಷನಿಗೆ ಲಿ ಯಲ್ಲಿ ಇರಲಿಲ್ಲವೆಂದುಗೊತ್ತಾಗುವುದು. ಇದು ನನ್ನದು ಅದು ನಿನ್ನದುಎಂಬ ಭಿನ್ನವಾಕ್ಯವುಲೋಕವನ್ನು ತನ್ನ ಸಂಸಾರವಾಗಿ ಎಣಿಸತಕ್ಕ ಉದಾರಚರಿತರಲ್ಲಿ ಹೊದ್ದುವುದಿಲ್ಲವಾದಾಗ್ಯೂ, ಕಾಂಫೂಷನು ತನ್ನ ಮಗನನ್ನು ಕೇಳಿದ ಎರಡು ಮಾತುಗಳಿಂದ ಒಳಹುಟ್ಟಿದ ಪುತ್ರವಾತ್ಸಲ್ಯವು ಶೂನ್ಯವಾಗಿತ್ತೆಂದು ಹೇಳುವುದಕ್ಕೆ ಆಧಾರಸಾಲದು. ತಾನಾಗಿ ಒದಗಿಬಂದ ಅಂಥಾ ವಾತ್ಸಲ್ಯವನ್ನು ತೋರಿಸುವಾಗ ಕೂಡ ಸ್ವಪ್ರಯೋಜನ ಸಂಬಂಧವಾದ ಸಂಗತಿಗಳನ್ನು ಬಿಟ್ಟು ತಾನು ಲೋಕಕ್ಕೆ ಬೋಧಿಸುವ ನೀತಿಯನ್ನು ತಿಳಿದುಕೊಂಡು ಆಚರಿಸುವುದಕ್ಕೆ ಸಾಧಕವಾದ ಗ್ರಂಥಗಳನ್ನು ಓದಿದೆಯಾ? ಎಂದು ಕೇಳುವಾಗ್ಯೂ, ತನ್ನ ಸಂಸಾರಾಭಿಮಾನವನ್ನು ಪ್ರಕಾಶಮಾಡುವಲ್ಲಿಕೂಡ ಜನೋಪಕಾರಕ್ಕೆ ಅಸ್ತಿಭಾರವಾದ ನೀತಿಯನ್ನು ಮರೆಯಲಿಲ್ಲವೆಂದು ಸ್ಥಿರಪಡುವುದು. ಹೀಗೆ ನೆವನೆವದಲ್ಲಿಯೂ ತನ್ನ ಅಭಿಮತವನ್ನು ತಿಳಿಯಪಡಿಸುವುದು ಸತ್ಪುರುಷರ ಸ್ವಭಾವ.

ಇಂಥಾ ದಯಾರಸವು ಸಜ್ಜನ ವರ್ಗಕ್ಕೆ ಮಾತ್ರ ನೇಮಿಸಲಾಗಿರಲಿಲ್ಲ. ಇತರ ದುಷ್ಟವರ್ಗಕ್ಕೂ ಏಕರೀತಿಯಾಗಿ ಆವರಿಸಿತ್ತು. ಯೋಗ್ಯರಿಗೋಸ್ಕರ ದುಷ್ಟರನ್ನು ಕೊಲ್ಲುವ ವಿಷಯದಲ್ಲಿ ತಮ್ಮ ಅಭಿಪ್ರಾಯವೇನೆಂದು ಒಬ್ಬ ರಾಜನು ಒಂದು ಸಮಯದಲ್ಲಿ ಕೇಳಲಾಗಿ ಕಾಂಫೂಷನು-ದೊರೆಯೇ,

Digitized by ROJA MUTHIAH RESEARCH LIBRARY

ಯಾಕೆ ಮರಣದಂಡನೆಯನ್ನು ನಿಮ್ಮ ರಾಜ್ಯದಲ್ಲಿ ಆಚರಿಸಬೇಕು ? ಒಳ್ಳೇ ಕೆಲಸ ಮಾಡಬೇಕೆಂತಲೇ ನಮ್ಮ ಮನಸ್ಸಿನಲ್ಲಿದ್ದರೆ ಪ್ರಜೆ ಒಳ್ಳೆಯವರಾಗುವರು. ಗಾಳಿಗೂ ಹುಲ್ಲಿಗೂ ಯಾವ ಸಂಬಂಧವೋ, ಮೇಲ್ಪಟ್ಟವರಿಗೂ ಕೇಳ್ಪಟ್ಟವರಿಗೂ ಅದೇ ಸಂಬಂಧವಿದೆ. ಮೇಲಿನವರು ಮಾಡಿದ್ದನ್ನೆಲ್ಲಾ ಕೆಳಗಿನವರು ಅಂಗೀಕರಿಸಿ ಅದಕ್ಕೆ ವಿಧೇಯರಾಗುತ್ತಾರೆ ಎಂದನು. ಕಾಂಫ್ಯೂಷನ ಸಿದ್ಧಾಂತಕ್ಕೆ ಈ ಅಭಿಮತ ಅನುಗುಣವಾಗಿದೆ. ಶಿಕ್ಷೆಯು ಮುಂದೆ ಇಂಥಾ ಕೆಲಸಗಳನ್ನು ಮಾಡದಂತೆ ನಿರೋಧಕಾರಿಯಾಗಿಯೂ ಸಂಕಟ ಪಟ್ಟವರಿಗೆ ಪರಿಹಾರಕಾರಿಯಾಗಿಯೂ ಇರಬೇಕು. ಮರಣದಂಡನೆಯಿಂದ ಇವೆರಡೂ ಸಾಧಿಸಿದ ಹಾಗಾಗುವುದಿಲ್ಲ. ಒಂದು ಅಪರಾಧ ಮಾಡಿದ್ದಕ್ಕೆ ಅವನ ಪ್ರಾಣವೇ ಹೋಗುವ ಪಕ್ಷದಲ್ಲಿ ಶಿಕ್ಷೆಯು ವಂದಕ್ಕೆ, ನಿರೋಧಕಾರಿಯಾಗುವುದು ಎಂಬ ಮಾತು ಆ ಅಪರಾಧಿಯೊಬ್ಬನ ವಿಷಯದಲ್ಲಿ ಅರ್ಥವಿಲ್ಲದ್ದಾಗುವುದು ಸಂಕಟಪಟ್ಟವರಿಗೆ ಅಪರಾಧಿಯ ಪ್ರಾಣಾಪಹಾರದಿಂದಲೇ ಉಂಟಾಗುವ ಪ್ರತೀಕಾರವು ದ್ವೇಷಾಸೂಯಕ್ಕೆ ಆಪ್ಯಾಯನವನ್ನುಂಟು ಮಾಡುವುದೇ ಹೊರ್ತು ಪಟ್ಟ ನಷ್ಟಕ್ಕೆ ಪರಿಹಾರವೇನಾಯಿತು ? ಕೆರೇ ಒಡೆದವನ ಕೈಲಿ ಕಂಬಳಿ ಕಿತ್ತುಗೊಂಡ ಹಾಗಾಯಿತು. ಇದಲ್ಲದೆ ಮರಣದಂಡನೆಯು ಈ ಅಪರಾಧಿಯ ವಿಷಯದಲ್ಲಿ ನಿರೋಧಕಾರಿಯಾಗುವುದೇ ಅಲ್ಲದೆ ಇತರರಿಗೂ ಈ ಭೀತಿಯನ್ನು ಹುಟ್ಟಿಸುವುದು ರಾಜ್ಯಕ್ಷೇಮಕ್ಕೆ ಅಗತ್ಯವಾದ್ದರಿಂದ, ನಿರೋಧಕಾರಿ ಎಂಬರ್ಥವು ಇಲ್ಲಿ ಸಾರ್ಥಕವಾಯಿತೆಂತೆದು ಕ್ರೂರದಂಡನ ಪಕ್ಷಪಾತಿಗಳು ವಾದಿಸಬಹುದು. ಇದು ಬಲವಾದ ಅಂಶವೇ ಸರಿ. ಆದರೆ ಅಪ



ರಾಧಗಳು ಬುದ್ಧಿಮಾಂದ್ಯ ಹೊಂದಿದ ಕಾಲದಲ್ಲಿಯೇ ನಡೆಯುವವು. ಎಂದು ಖಂಡಿತವಾಗಿ ಹೇಳಲು ವಿಶೇಷ ಅವಕಾಶವಿದೆ, ಆಗ್ರಹವೂ, ಸ್ವಪ್ರಯೋಜನವೂ, ಆಯಾ ಸಮಯಗಳಲ್ಲಿ ತಾವೇತಾವಾಗಿ ಮನಸ್ಸಿನಲ್ಲಿ ನಿಂತು ಪೂರ್ವಾಪರ ಪರಿಜ್ಞಾನವನ್ನು ಕೆಡಿಸುವುದು ಬುದ್ಧಿಶಾಲಿಗಳ ಅನುಭವದಿಂದ ದೃಢೀಕಾರವಾಗಿದೆ. ಜೀವರಾಶಿಗಳಲ್ಲಿ ಮನುಷ್ಯನೆನಿಸುವುದಕ್ಕೆ ಮುಖ್ಯ ವಿಶೇಷಣವಾದ ಈ ಪೂರ್ವಾಪರಜ್ಞಾನವು ಅಡಗೆ ಸುಮ್ಮನೆ ನಿಂತು ಅರಿಷಡ್ವರ್ಗಗಳೇ ನಾಟ್ಯರಂಗಕ್ಕೆ ಬಂದ ಮೇಲೆ, ಮನುಷ್ಯನ ಅವಸ್ಥೆ ಭೇದಿಸುವುದು. ಈ ಅವಸ್ಥೆಗೆ ಸ್ವಲ್ಪಕಾಲದ ಮಟ್ಟಿಗೆ ಹುಚ್ಚು ಎಂತಾಗಲಿ, ಬುದ್ಧಿಯ ಮಡಿತನವೆಂತಾಗಲಿ ಹೇಳಬಹುದು. ಇಂಥಾಕಾಲಗಳಲ್ಲಿಯೂ, ಅಜಾಗರೂಕತೆಯಿಂದಲೂ ಆಕಸ್ಮಿಕವಾಗಿ ಕಾಕತಾಳನ್ಯಾಯದ ಹಾಗೆಯೂ ಅಪರಾಧಗಳನ್ನು ನಡೆಸಿ ತರುವಾಯ ಬುದ್ಧಿಯು ಎಂದಿನಂತೆ ಸಮಾಧಾನಸ್ಥಿತಿಗೆ ಬಂದಮೇಲೆ ಅನೇಕ ಅಪರಾಧಿಗಳು ಬಹಿರಂಗವಾಗಿಯೂ, ಕೆಲವರು ಅಂತರಂಗವಾಗಿಯೂ, ಪಶ್ಚಾತ್ತಾಪಪಡುವರಾದ್ದರಿಂದ, ಈ ಮನಸ್ಸಿನ ಸಂಕಟವೇ ಅರ್ಧ ಶಿಕ್ಷೆಯಾಗುವುದು. ದಂಡನೆಯನ್ನೇ ಕೊಟ್ಟುಬಿಟ್ಟರೆ ಅದು ಪೂರ್ತಿಯಾದ ಶಿಕ್ಷೆಯಾಯಿತು, ಮರಣದಂಡನೆಯೇ ಆದರೆ ಒಂದಕ್ಕೆ ಹತ್ತು ಸಾವಿರದಷ್ಟು ದಂಡನೆ ಆದಹಾಗಾಯಿತು. ಸಹಾಯ ರಹಿತನಾಗಿ ಕೈಗೆ ಸಿಕ್ಕಿದವನನ್ನು ಮನಸ್ಸು ಬಂದಹಾಗೆ ಶಿಕ್ಷಿಸುವುದು ಮಾತ್ರ ಸತ್ಕಾರ್ಯವೆಂತಲೂ ನ್ಯಾಯವಿರುದ್ಧವಲ್ಲವೆಂತಲೂ ಎನ್ನಿಸಿ

Digitized by ROJA MUTHIAH RESEARCH LIBRARY

ಕೊಂಡಿತು. ಮೊಂಡತನದಿಂದ ನಡೆಯದೆ ಹೋದ ಎತ್ತಿಗೆ ಎರಡುಪೆಟ್ಟುಹಾಕುವುದು ಮಾತ್ರ ದಂಡನೆಗೆ ಅರ್ಹವಾಯಿತು. ಅಯ್ಯೋ! ಧರ್ಮಶಾಸ್ತ್ರದ ಹೇಡಿತನವನ್ನು ಎಷ್ಟು ವರ್ಣಿಸೋಣ!

ಇಷ್ಟು ಅಲ್ಲದೆ ಮಾನವಂತನನಿಗೆ ಒಂದು ಗಳಿಗೆಯಾದರೂ ದಂಡನೆಯೇ ಹತ್ತು ವರ್ಷವಾದರೂ ದಂಡನೆಯೇ. ಸತ್ತ ಹಾವನ್ನು ಎಷ್ಟು ಸಲ ಹೊಡೆದರೂ ಫಲ ಬಂದೇ. ರೋಷಾವೇಶಗಳಿಗೂ ಇತರ ಅರಿಷಡ್ವರ್ಗಗಳ ಬಾಧೆಗೂ ಅಪರಾಧಿಯು ಅಪರಾಧವನ್ನು ಮಾಡುವುದರಲ್ಲಿ ಹೇಗೆ ಎಡೆಯಾಗಿರುವನೋ ಹಾಗೆಯೇ ಮನುಷ್ಯವರ್ಗಕ್ಕೆ ಸೇರಿದ ದಂಡನಾಧಿಕಾರಿಯೂ ಶಿಕ್ಷೆಯನ್ನು ವಿಧಿಸುವುದರಲ್ಲಿ ಸಮಯ ತಪ್ಪಿ ಎಡೆಯಾಗಿರಲು ಸಂದೇಹವಿಲ್ಲ. ಅಪರಾಧಿ ಸಂಕಟ ಪಟ್ಟವನಿಗೆ ಮಾಡಿದ ನಷ್ಟಕ್ಕಿಂತಲೂ ಅಧಿಕಾರಿಯು ತನ್ನ ಅಜ್ಞಾನದಿಂದ ಅಥವಾ ಅಚಾತುರ್ಯದಿಂದ ಅಥವಾ ಈರ್ಷೆಯಿಂದ ಕೊಡುವ ಶಿಕ್ಷೆಯು ಅಪರಾಧಿಗೆ ಅಧಿಕವಾದ ನಷ್ಟವನ್ನುಂಟು ಮಾಡಿದರೆ ಲೋಕವಾಡಿಕೆಯಲ್ಲಿ ಪರಿಹಾರವೇನಿದೆ ? ಇಂಥಾ ಯೋಚನೆ ನ್ಯಾಯ ವಿಧಾಯಕ ಮಾಡತಕ್ಕವರಿಗೆ ವಿಶೇಷವಾಗಿ ಹತ್ತದೇ ಇರುವುದಕ್ಕೆ, ಸರ್ಕಾರದ ಅಧಿಕಾರಿಗಳಿಗೆ ಎಳ್ಳಷ್ಟಾದರೂ ನಷ್ಟವಾದೀತಲ್ಲ ಎಂಬ ದುಶ್ಲಾಘನೀಯವಾದ ದುರಭಿಮಾನವೇ ಕಾರಣ. ಹೀಗಿರಲು ನ್ಯಾಯ ವಿಮರ್ಶೆ ಎನ್ನುವುದು ಪ್ರಜೆಗಳಲ್ಲಿ ಒಬ್ಬ ಮನುಷನಿಗೂ ಮತ್ತೊಬ್ಬ ಮನುಷ್ಯನಿಗೂ ಹೇಳಿದ್ದಾಯಿತೇ ಅಲ್ಲದೆ ಪ್ರಜೆಗಳಿಗೂ ಸರ್ಕಾರಕ್ಕೂ ಹೇಳಿದ್ದಾಗಿತೋರಲಿಲ್ಲ ಆದರೆ ನ್ಯಾಯಕ್ಕೆ ಎರಡು ಮುಖವೋ ?



## ೯ ನೇ ಅಧ್ಯಾಯ.

——:•:——

### ಲೂ ರಾಜ್ಯಕ್ಕೆ ಪುನಃ ಪ್ರವೇಶ.

ಈ ರೀತಿಯಲ್ಲಿ ಕಾಂಫೂಷನು ಲೂ ರಾಜ್ಯವನ್ನು ಪುನಃಪ್ರವೇಶಮಾಡಿ ಕೀಕಂಗನ ಆಸ್ಥಾನವನ್ನ ಹೊಕ್ಕನು. ಅಲ್ಲಿ "ಗೇ" ದೇಶದ ರಾಜಕುಮಾರನು ರಾಜನೀತಿಯನ್ನು ಕುರಿತು ಪ್ರಶ್ನೆಮಾಡಲು ಕಾಂಫೂಷನು ಹೀಗೆ ಉತ್ತರ ಕೊಟ್ಟನು:—

ಸರಿಯಾದ ಮಂತ್ರಿಗಳನ್ನು ಪಡಗಿಸಿಕೊಳ್ಳುವುದೇ ರಾಜ್ಯಭಾರದಲ್ಲಿ ಮುಖ್ಯವಾದ ಕೆಲಸ ಅದೇ ಪ್ರಶ್ನೆಯನ್ನು ಕೀಕಂಗನು ಕೇಳಲು ಆ ಪಂಡಿತನು:—ಅಯ್ಯಾ, ರಾಜಹಂಸನೇ, ನೆಟ್ಟಗಿರುವರನ್ನು ಮಂತ್ರಿಪದಕ್ಕೆ ಇಟ್ಟು ಡೊಂಕಾಗಿರುವವರನ್ನು ಪರಿಹರಿಸು ಹೀಗೆಮಾಡಿದರೆ ಡೊಂಕಾದ್ದು ನೆಟ್ಟಗಾಗುವುದು, ಇದೇ ರಾಜ್ಯತಂತ್ರದ ಜೀವಾಳ ಎಂದನು.

ಈ ಪ್ರಕಾರ ಈತ ಹೇಳಿದ ಎರಡುಮಾತಿನ ಅರ್ಥವೂ ಬಂದೇ. ಸರಿಯಾದ ಅಮಾತ್ಯನೆಂದರೆ ಪ್ರಜೆಗಳ ಹಿತಾಹಿತಗಳನ್ನು ಅರಿತು ಪ್ರಾಮಾಣಿಕನಾಗಿ ಕೆಲಸಮಾಡತಕ್ಕ ದಕ್ಷನಾದ ಮಂತ್ರಿ ಇಂಥಾ ಪ್ರಾಮಾಣಿಕರೇ ರುಜುವಾದ ಅಥವಾ ನೆಟ್ಟಗಾದ ಮಾರ್ಗದಲ್ಲಿ ಹೋಗುವರು. ರುಜುಮಾರ್ಗವನ್ನು ಬಿಟ್ಟು ನಡೆಯತಕ್ಕವರೇ ಡೊಂಕಾಗಿರುವರು. ಸೂರ್ಯ ಹುಟ್ಟಿದ ಕೂಡಲೇ ಕತ್ತಲೆ ನಾಶವಾಗುವ ಹಾಗೆ ಪ್ರಾ



Digitized by ROJA MUTHIAH RESEARCH LIBRARY

ಮಾಣಿಕರು ತಲೆ ಎತ್ತಿದ ಕೂಡಲೇ ವಕ್ರಮಾರ್ಗದವರು ಸ್ವತಃ ನಾಶಹೊಂದುವರು. ಅಥವಾ ತಮ್ಮ ವಕ್ರತೆಯನ್ನು ಬಿಟ್ಟು ಸನ್ಮಾರ್ಗಪ್ರವಿಷ್ಠರಾಗುವರು. ಈ ರೀತಿಯಾಗಿಯೂ ದೇಶದ ದೊರೆಯ ಮಂತ್ರಾಲೋಚನೆಗೆ ಸೇರಿ ಕಾಂಫೂಷನು ಸ್ವಲ್ಪ ನಿರಾತಂಕನಾಗಿರುವಹಾಗಾಯಿತು. ಈ ಕಾಲದಲ್ಲಿ ಅನೇಕ ಪುರಾತನ ಗ್ರಂಥಗಳನ್ನು ಚನ್ನಾಗಿ ವ್ಯಾಸಂಗಮಾಡಿದನು. ಮತ್ತು ಅವುಗಳಲ್ಲಿ ಕೆಲವಕ್ಕೆ ವ್ಯಾಖ್ಯಾನವನ್ನು ಬರೆದನು. ತನಗಿದ್ದ ರಾಜಕಾರ್ಯದ ಗಲಭೆಯಲ್ಲಿಯೂ ಕೂಡ ಅಲ್ಪಸ್ವಲ್ಪ ಕಾಲವನ್ನು ಉಳಿಸಿಕೊಂಡು ಕೆಲವು ಹೊಸ ಗ್ರಂಥಗಳನ್ನು ಬರೆದನು.

---

## ೧೦ ನೇ ಅಧ್ಯಾಯ.

———:o:———

### ಕಾಂಫೂಷನ ನಿರ್ಯಾಣ.

ಕಾಂಫೂಷನ ಕಾಲ ತೀರಿಬಂತು. ಮನೋವ್ಯಥೆಯು ಒಂದಕ್ಕೊಂದು ಸೇರುತ ಬಂದು ಮರಣವನ್ನು ಸಮೀಪಗೊಳಿಸಿತು. ಈ ವ್ಯಥೆಯು ಅನೇಕರಲ್ಲಿ ಅನೇಕವಿಧವಾಗಿ ಕಾಣಿಸಿಕೊಳ್ಳುವುದು. ಪುಣ್ಯಾತ್ಮರಿಗೂ ಇದು ತಪ್ಪಿದ್ದಲ್ಲ. ಇಷ್ಟವಾದ್ದು ಲೋಪವಾದರೆ ಉಂಟಾಗುವ ಅನುಭವವೇ ವ್ಯಸನವೆಂತಲೂ ವ್ಯಥೆ ಎಂತಲೂ ಹೇಳುವರು. ಆದರೆ ತನಗೆ ಪ್ರಿಯವಾದ ಕಾರ್ಯವು ಸಾಗದೇ ಹೋಗುವುದರಿಂದಲೂ ಇಂಥಾ ವ್ಯಥೆಯುಂಟಾಗುವುದು. ಕಾಂಫೂಷನ ವಿಷಯ

Digitized by ROJA MUTHIAH RESEARCH LIBRARY

R KUN M92



ದಲ್ಲಿ ಇವೆರಡೂ ಮಿಳಿತವಾದವು. ಕ್ರಿ. ಪೂ. ೪೪೧ ರಲ್ಲಿ ಕಾಂಫೂಷನ ಪ್ರಿಯಶಿಷ್ಯನಾದ ಯನ್ ಹ್ವಿ ಎಂಬಾತನು ಕಾಲವಾದನು. ಈ ಸಮಾಚಾರವನ್ನು ಕಾಂಫೂಷ ಕೇಳಿದ ಕೂಡಲೇ—ಅಯ್ಯೋ, ದೈವ ನನ್ನಲ್ಲಿ ಮುನಿಯಿತು. ನನ್ನ ಕೊನೆ ಸಮೀಪವಾಯಿತು, ಎಂದು ವ್ಯಸನಪಟ್ಟನು. ಆ ವರುಷದೊಳಗಾಗಿ ಒಬ್ಬನೊಬ್ಬ ರಾಜಭಟನು ಬೇಟೆಯಲ್ಲಿ ಒಂದೇಒಂದು ಕೊಂಬುಳ್ಳ ಒಂದು ವಿಜಾತೀಯವಾದ ಮೃಗವನ್ನು ಹಿಡಿದುತಂದು ದೊರೆಯಾದ ಕೀಕಂಗನ ಮುಂದೆ ನಿಲ್ಲಿಸಿದನು. ಮೃಗವು ಇಂಥಾದ್ದೆಂದು ಯಾರೂ ಹೇಳಲಾರದೇ ಹೋದರು. ಕಾಂಫೂಷನಿಗೆ ಹೇಳಿಕಳುಹಿಸಲು, ಆತ ಬಂದು ನೋಡಿದ ಕೂಡಲೇ ಅದು ಇಂಥಾದ್ದೆಂದು ಹೇಳಿದನು. ಈತ ಜನನವಾಗುವುದಕ್ಕೆ ಒಂದು ವರುಷಮುಂಚೆ, ಈತನ ತಾಯಿಯು, ನೆ ಎಂಬ ಪರ್ವತದ ಮೇಲೆ ಸ್ವಪ್ನದಲ್ಲಿ ಈ ಮೃಗವನ್ನು ಕಂಡಿದ್ದ ಹಾಗೂ, ಅದರ ಕೊಂಬಿಗೆ ಆಗ ಒಂದು ಪಟ್ಟೇ ಅಂತನ್ನು ಆಕೆ ಕಟ್ಟಿದ್ದಹಾಗೂ, ಆ ಅಂತು ಸಹಿತವಾಗಿ ಈಗ ಅದು ಕಾಣಿಸಿಕೊಂಡದ್ದರಿಂದ ಆ ಮೃಗವೇ ಈಗ ಕಾಣಿಸಿಕೊಂಡಿತೆಂತಲೂ ಒಂದು ಐತಿಹ್ಯವನ್ನು ಹೇಳುವರು. ಪ್ರಸಿದ್ಧಪುರುಷರ ಜನನ, ಅಥವಾ ಮರಣಕಾಲದಲ್ಲಿ ಇಂಥಾ ವೈಪರೀತ್ಯಗಳು ನಡೆದಂತೆ ಹೇಳಿಕೊಳ್ಳುವುದು ವಾಡಿಕೆಯಾಗಿದೆ. ಒಬ್ಬ ಹುಟ್ಟಿದಾಗ ನಕ್ಷತ್ರಗಳು ವಿಶೇಷ ಪ್ರಕಾಶವುಳ್ಳವುಗಳಾಗಿದ್ದವೆಂತಲೂ ಮತ್ತೊಬ್ಬ ಸತ್ತಾಗ ದೊಡ್ಡ ಬರಸಿಡಿಲು ಬಡಿಯಿತೆಂತಲೂ ಹೀಗೆ ಚಿತ್ರವಿಚಿತ್ರವಾಗಿ ನುಡಿಯುವರು. ಈ ಏಕಶೃಂಗಿಯ ದರ್ಶನವು ಕಾಂಫೂಷನ ಜನನಮರಣಗಳೆರಡನ್ನೂ ಸೂಚಿಸಿ

A-3115.

ತೆಂದಹಾಗಾಯಿತು. ಇಂಥಾ ವಿಜಾತೀಯವಾದ ಶಕುನದಿಂದ ಕಾಂಫೂಷನ ಮನಸ್ಸಿಗೆ ಬಹಳ ವ್ಯಸನ ಉಂಟಾಯಿತು. ಆಗ ಆತನು ಅದನ್ನು ನೋಡಿ—ಎಲಾ ಮೃಗವೇ, ನೀನು ಯಾತಕ್ಕೆ ಬಂದೆ, ಯಾರಿಗೋಸ್ಕರ ಬಂದೆ? ಎಂದು ಹೇಳಿ ಕಂಣಿನಲ್ಲಿ ನೀರು ತಂದುಕೊಳ್ಳುತ್ತಾ,—ನನ್ನ ಕಾಲವಾದರೋ ಕಳೆಯಿತು. ನಾನು ಬೋಧಿಸಿದ ಧರ್ಮವಾದರೋ ಲೋಕಕ್ಕೆ ತಿಳಿಯಲಿಲ್ಲ, ಎಂದು ಸಂಕಟಪಟ್ಟನು. ಆಗ ತ್ಸಿಕುಂಗ್ ಎಂಬ ಶಿಷ್ಯನು—ತಾವು ಬೋಧಿಸಿದ ಧರ್ಮ ಲೋಕಕ್ಕೆ ತಿಳಿಯಲಿಲ್ಲವೆಂದು ಹೇಗೆ ಹೇಳುತೀರಿ? ಎನಲು ಕಾಂಫೂಷನು—ದೈವಗತಿಯಿಂದ ನನ್ನ ಕಾಲ ಸಮೀಪಿಸಿದ್ದಕ್ಕಾಗಿ ನಾನು ಪೇಚಾಡುವುದಿಲ್ಲ; ಜನರು ವಿಶೇಷವಾಗಿ ಓದಿ ಪಾಂಡಿತ್ಯವನ್ನು ಸಂಪಾದಿಸಲಿಲ್ಲವೆಂದು ನನಗೆ ವ್ಯಸನವಿಲ್ಲ. ನಾನು ಬೋಧಿಸಿದ ಧರ್ಮವು ಜನರಿಗೆ ತಿಳಿಯಲಿಲ್ಲವಲ್ಲಾ, ಅದು ಏನೂ ವೃದ್ಧಿಯಾಗಲಿಲ್ಲವಲ್ಲಾ! ನನ್ನ ಸಿದ್ಧಾಂತ ಎಂಥಾದ್ದಾದರೇನು ನನ್ನ ಅಭಿಪ್ರಾಯ ಹೇಗಿದ್ದದರಿಂದ ಯಾರಿಗೇನು ಪ್ರಯೋಜನವಾದ ಹಾಗಾಯಿತು? ಇದರಿಂದ ಅವರಿಗೆ ಯಾವ ಉಪಯೋಗವೂ ಇಲ್ಲದೆಹೋದ ತಪ್ಪು. ನಾನು ಅವರಿಗೆ ಹೇಳಿದ್ದನ್ನು ಸರಿಯಾಗಿ ತಿಳಿದುಕೊಳ್ಳಲು ಅವರಿಗೆ ಯೋಗ್ಯತೆ ಇಲ್ಲದೇಹೋದ್ದರಿಂದ ಉಂಟಾಯಿತೋ ಅಥವಾ ಅವರಿಗೆ ಸರಿಯಾಗಿ ನಾನು ಬೋಧಿಸಲು ನನಗೆ ಶಕ್ತಿ ಇಲ್ಲದ್ದರಿಂದ ಹುಟ್ಟಿತೋ ನಾನರಿಯೆ ನನ್ನ ಸಾಮರ್ಥ್ಯಲೋಪದಿಂದಲೇ ಇದು ಹುಟ್ಟಿದ್ದ ಪಕ್ಷದಲ್ಲಿ ಮುಂದೆ ಹುಟ್ಟತಕ್ಕವರು ನನ್ನನ್ನು ಎಂಥವನೆಂದು ತಿಳಿದಾರು? ನಾನು ಎಷ್ಟು ಪ್ರಯತ್ನಮಾಡಿದರೂ ಇಷ್ಟರಲ್ಲಿ ಪರ್ಯವಸಾನಹೊಂದಿ



ತಲ್ಲಾ ಎಂದು ಯೋಚನೆಯಾಗಿದೆ. ವಿಶೇಷವಾಗಿ ತೆಲುಮೆಯುಳ್ಳ ಮಹಾಪುರುಷರು ತಮ್ಮ ತರುವಾಯ ಹೆಸರು ನಿಲ್ಲುವ ಹಾಗೆ ಮಾಡಿಕೊಳ್ಳಬೇಕು ಹೀಗೆಂದು ಹೇಳಿದನು. ಇಂತು ಎಂಥವರಿಗಾದರೂ ತಮ್ಮ ಪ್ರಯತ್ನಭಗ್ನವಾದರೆ ಆತ್ಮಪ್ರತ್ಯಯ ಕೂಡ ಕಡಮೆಯಾಗುವುದು. ತರುವಾಯ ಸ್ವಲ್ಪದಿನ ಕಳೆದ ಮೇಲೆ ಬಂದಾನೊಂದು ಪ್ರಾತಃಕಾಲದಲ್ಲಿ ಕಾಂಫೂಷನು ಹಾಸಿಗೆಯಿಂದ ಏಳಲಾರದೆ ಎದ್ದು ತನ್ನ ಊರುಗೋಲನ್ನು ಎಳೆದುಕೊಂಡು ಬಾಗಿಲಿಗೆ ಬಂದುನಿಂತು—ಮಹಾಪರ್ವತವಾದರೂ ಪುಡಿಯಾಗಿ ಹೋಗಬೇಕು, ದೊಡ್ಡವೃಕ್ಷವಾದರೂ ಬಿದ್ದುಹೋಗಬೇಕು, ಎಂಥಾಮಹಾತ್ಮನಾದರೂ ಬಾಡಿಹೋಗಬೇಕು, ಎಂದು ಹೇಳಿ ಬಾಗಿಲಿಗೆ ಎದುರಾಗಿ ಕೂತುಕೊಂಡನು. ಶಿಷ್ಯನಾದ ತ್ಸಿಕುಂಗನು ಈ ಮಾತನ್ನು ಸಂಚು ಕೇಳಿ ತನ್ನ ಮನಸ್ಸಿನಲ್ಲಿ—ಅಯ್ಯೋ, ಮಹಾಪರ್ವತವೂ ಹುಡಿಯಾಗಿ ವೃಕ್ಷರಾಜನೂ ಬಿದ್ದುಹೋಗಿ ಮಹಾತ್ಮರೂ ಬಾಡಿಹೋದರೆ ನಾನು ಇನ್ನು ಯಾರ ಅವಲಂಬನದ ಮೇಲಿರಲಿ, ನಾನು ಇನ್ನು ಯಾರನ್ನು ಗುರುವೇ ಎಂದು ಕರೆಯಲಿ? ಇನ್ಯಾರವಿವೇಕವು ಲೋಕಕ್ಕೆಲ್ಲಾ ಹಿತವನ್ನೆಣಿಸಿ ತಾನೇತಾನಾಗಿ ನಿಂತೀತು? ಅಯ್ಯೋ, ಅವಸ್ಥೆಯೆ, ನಮ್ಮ ಗುರುಗಳಿಗೆ ಬಹಳವಾಗಿ ಆಲಸ್ಯವಾಗಿರುವ ಹಾಗಿದೆ. ಅವರ ಕಾಲಸಮೀಪಿಸಿತು, ಎಂದು ಪ್ರಲಾಪಿಸುತಾ ಶುಶ್ರೂಷೆಗೋಸ್ಕರ ಮನೆಯೊಳಕ್ಕೆ ಜಾಗ್ರತೆಯಾಗಿ ಹೋದನು. ಹೀಗೆ ನಡೆದ ಏಳುದಿವಸಕ್ಕೆ ಸಕಲ ಧರ್ಮದ ಮತುವಾದ ವಿವೇಕದ ಅವತಾರವಾದ ನೀತಿಯ ಕಡಲಾದ, ಹೀಗಿದ್ದ ಕಾರಣವೇ ದೇವಾಂಶ ಭೂತನಾದ ಆ ಪುಣ್ಯ

Digitized by ROJA MUTHIAH RESEARCH LIBRARY

ಪುರುಷ ಕಾಂಫೂಷನು ಈ ಲೋಕವನ್ನು ಬಿಟ್ಟನು.

ತರುವಾಯ ಕಿಫೊ ಎಂಬ ಪಟ್ಟಣದಲ್ಲಿ ಈತನಿಗೆ ಸಮಾಧಿಯಾಯಿತು. ಈ ಗೋಳಲ ಬಹಿರಾವರ್ಣದಲ್ಲಿ ಕಮಾನು ಕಟ್ಟಿರುವ ದ್ವಾರವುಳ್ಳಂಥ ಮತ್ತು ಮಧ್ಯಪ್ರದೇಶದಲ್ಲಿ ಒಳಗಡೆ ಬಾಗಿಲಿಂದ ಹಿಡಿದು ಎರಡು ಪಕ್ಕದಲ್ಲಿಯೂ ನೀಳವಾದ ಮತ್ತು ಗಾಳಿಗೆ ಗಂಭೀರವಾಗಿ ಮೆಲ್ಲಗೆ ಅಲ್ಲಾಡುವ ತಿಲಕ ವೃಕ್ಷಗಳ ಸಾಲೆರಡರ ನಡುವೆ ಉದ್ದವಾಗಿಯೂ ವಿಶಾಲವಾಗಿಯೂ ಕಾಣಿಸುವ ನಿರ್ಮಲವಾದ ಮಾರ್ಗದ ಎದುರಿಗೆ ಈ ಪುಣ್ಯಾತ್ಮನ ಎತ್ತರವಾದ ಸಮಾಧಿಯನ್ನೂ, ಅದರ ಮುಂಭಾಗದಲ್ಲಿ ಅಮೃತ ಶಿಲೆಯ ವಿಗ್ರಹವನ್ನೂ, ಇದರ ಮುಂಭಾಗದಲ್ಲಿ ಸ್ವಲ್ಪ ದೂರವಾಗಿ ಎಡಬಲದಲ್ಲಿ ಕಾಂಫೂಷನ ಮಗ ಮೊಮ್ಮಗ ಇವರಿಬ್ಬರ ಸಮಾಧಿಯನ್ನೂ ಒಳಗೊಂಡಿರುವಂಥಾ ಆವರ್ಣ ಒಂದು ನೋಟಕರಿಗೆ ಅತ್ಯಂತ ಭಕ್ತಿಯನ್ನೂ ವೈರಾಗ್ಯವನ್ನೂ ಹುಟ್ಟಿಸುತ ಮೆರೆಯುತಿರುವುದು. ಆ ಮುಖ್ಯ ಸಮಾಧಿಯ ಮೇಲೆ “ಮಹಾಮುನಿ, ಪರಮ ಗುರು, ಸರ್ವಜ್ಞ ಮೂರ್ತಿ, ಆಚಾರ್ಯವರ್ಯ, ನೀತಿಯ ತಾಯಿಮನೆ, ಕಾಂಫೂಷ ಮಹಾಪುರುಷ” ಎಂದು ಸಮಾಧಿಶಾಸನ ಬರೆದಿಧೆ. ಈತನ ಮೊಮ್ಮಗನ ಸಮಾಧಿಯ ಬಲಭಾಗದಲ್ಲಿ ಕಾಂಫೂಷನ ಪ್ರಿಯ ಶಿಷ್ಯನಾದ ತ್ಸಿಕುಂಗನು ಗುರುವಿಗೋಸ್ಕರ ದುಃಖ ಪಡುತಾ ಸ್ಮಶಾನದಲ್ಲಿಯೇ ವಾಸವಾಗಿರಲು ಕಟ್ಟಿಕೊಂಡಿದ್ದ ಪರ್ಣಶಾಲೆಯ ಸ್ಥಳವನ್ನು ತೋರಿಸತಕ್ಕ ಒಂದು ಚಿಕ್ಕಮನೆಯು ಕಾಣಿಸುವುದು.

---

Digitized by ROJA MUTHIAH RESEARCH LIBRARY



# ೧೧ ನೇ ಅಧ್ಯಾಯ

——:o:——

## ಕಾಂಫೂಷನ ರೂಪು, ಅಭ್ಯಾಸಾದಿ ಇತರ ಗುಣಗಳು.

ಕಾಂಫೂಷನು ಆ ಕಾಲದಲ್ಲಿ ಅಷ್ಟು ರೂಪವಂತನಾಗಿರಲಿಲ್ಲ. ಈತನ ಅಂಗದಲ್ಲಿ ನಲವತ್ತೊಂಭತ್ತು ಅಂಕಗಳಿದ್ದಂತೆಯೂ ಅವುಗಳಲ್ಲಿ ಒಂದೊಂದು ಅಂಕವೇ ದೇಹಕ್ಕೆ ಎಷ್ಟೋ ವಿಕಾರವನ್ನುಂಟುಮಾಡತಕ್ಕದ್ದಾಗಿತ್ತೆಂತಲೂ ಹೇಳುವರು. ಈತನ ಇತರ ಅಭ್ಯಾಸಗಳು ಕೆಲವನ್ನು ಕಣ್ಣಾರ ಕಂಡಿದ್ದ ಶಿಷ್ಯರು ಬರೆದಿಟ್ಟಿರುವ ಲೇಖನಗಳಿಂದ ಇಂಥವೆಂದು ತಿಳಿಯಬಹುದಾಗಿದೆ. ಬಹಿರಂಗದಲ್ಲಿ ಕಾಂಫೂಷನು ಅತ್ಯಂತ ಕ್ರಮವಾಗಿಯೂ ಅತಿ ಮರ್ಯಾದೆಯುಳ್ಳವನಾಗಿಯೂ ಇರುತ್ತಿದ್ದನು. ಮನೆಯಲ್ಲಿದ್ದಾಗ ಇಂಥಾ ಮರ್ಯಾದೆಯ ಕಟ್ಟುಗಳನ್ನು ಸಡಿಲಮಾಡುತ್ತಿದ್ದನು. ಅರಸನ ಸಮೀಪಕ್ಕೆ ಹೋದಾಗ ತನ್ನ ದರ್ಪವನ್ನೂ ಗಾಂಭೀರ್ಯವನ್ನೂ ಕಾಪಾಡಿಕೊಳ್ಳುತಿದ್ದಾಗ್ಯೂ ಮರ್ಯಾದೆಯನ್ನು ತೋರಿಸಲು ಬಹಳ ಆತುರನಾಗಿರುತ್ತಿದ್ದನು. ಅರಮನೆಯ ಸಮೀಪದಲ್ಲಿಯಾಗಲಿ, ಬರೀ ಸಿಂಹಾಸನದ ಬಳಿಯಲ್ಲಾಗಲಿ, ಹೋಗಬೇಕಾದ ಸಂದರ್ಭ ಬಂದರೆ ಮುಖವು ಬದಲಾಯಿಸಿ ಸೊಂಟವೂ ಕತ್ತೂ ಸ್ವಲ್ಪ ಬಗ್ಗಿ ಧ್ವನಿಯು ಕುಗ್ಗಿ ಹೋಗುತಿತ್ತು. ಅಧಿಕಾರ ದಂಡವನ್ನು ಯಾವಾಗಲಾದರೂ ಹಿಡಿದುಕೊಳ್ಳುವ ಸಂದರ್ಭ ದೊರೆತರೆ ಅದನ್ನು ಹಿಡಿದು ಕೊಂಡಾಗ ರಾಜ್ಯಭಾರವು ಅತ್ಯಂತ ಭಾರವೆಂದು ತೋರಿಸುವ ಹಾಗೆ

ಮುಂದಕ್ಕೆ ಸೊಂಟವನ್ನು ಬಗ್ಗಿಸಿಕೊಳ್ಳುತಿದ್ದನು. ದೇಹ ಆಲಸ್ಯವಾಗಿರುವಾಗ ದೊರೆಯು ಈತನನ್ನು ನೋಡುವ ಉದ್ದಿಶ್ಯ ಮನೆಗೆ ಬರಲು, ತಾನು ಆಸ್ಥಾನದ ಉಡುಪನ್ನು ಹಾಕಿಕೊಂಡು ಪೂರ್ವ ಶಿರಸ್ಸಾಗಿ ಮಲಗಿಕೊಂಡನು. ಒಂದಾನೊಂದು ಕಾಲದಲ್ಲಿ ಅತಿಥಿಯಾಗಿ ಬಂದ ಮತ್ತೊಬ್ಬ ರಾಜನನ್ನು ಎದುರುಗೊಂಡು ಬರಬೇಕೆಂದು ಕಳುಹಿಸಲ್ಪಟ್ಟರೆ ಕಾಂಫೂಷನು ತನ್ನ ಕೈಗಳನ್ನು ಪಕ್ಷಿಯ ರಕ್ಕೆಗಳ ಹಾಗೆ ಸ್ವಲ್ಪ ಚಾಚಿಕೊಂಡು ಆತುರದಿಂದ ಹೋಗುತ್ತಿದ್ದನು. ಅಧಿಕಾರಿಗಳ ಮಧ್ಯದಲ್ಲಿ ತಾನು ನಿಂತಿರುವಾಗ ಅವರ ಕಡೆಗೆ ಸೊಂಟವನ್ನು ನಸುಬಗ್ಗಿಸಿಕೊಂಡಿರುತಿದ್ದನು. ಈ ಮೇಲೆ ಹೇಳಿದ ನಡತೆಗಳಿಂದ ಎರಡು ಸಂಗತಿಗಳು ವ್ಯಕ್ತವಾಗುವವು. ಮೊದಲನೆಯದೇನಂದರೆ, ಈತ ಬಹಿರಂಗದಲ್ಲಿ ವಿಶೇಷವಾಗಿ ಮರ್ಯಾದೆಯನ್ನು ಮಾಡತಕ್ಕವನಾಗಿಯೂ, ಅಂತರಂಗದಲ್ಲಿ ಸಲಿಗೆಯಾಗಿರತಕ್ಕವನಾಗಿಯೂ ಇದ್ದನೆಂಬುವುದು. ಈ ನಡತೆಯಿಂದ ಈ ಪ್ರಪಂಚದಲ್ಲಿ ಸಾಧಾರಣ ಜನರು ವಿಶೇಷವಾಗಿ ತಮ್ಮ ಸ್ವಪ್ರಯೋಜನ ಪೋಷಣೆಗೋಸ್ಕರ ಇಲ್ಲಿ ಬಿಳೀ ಮುಖವಾಡವನ್ನೂ ಅಲ್ಲಿ ಕರೀಮುಖವಾಡವನ್ನೂ ಕಟ್ಟಿಕೊಂಡು ಯಾವ ಉದಾಸೀನರು ಯಾವ ಮಾತನಾಡಿದರೂ ಅದಕ್ಕೆ ಸರಿಯಾಗಿ ತಾಳಾ ಹಾಕುತಾ ಮೇಲ್ಪಟ್ಟವರು ಆಡಿದ್ದಕ್ಕೆ "ಸತ್ಯ; ಬಹಳ ಚನ್ನಾಗಿ ಅಪ್ಪಣೆಯಾಯಿತು" ಎಂದು ಕೊಂಡಾಡಿ ಮೆಚ್ಚಿಗೆಯ ತಲೆದೂಗನ್ನು ತೂಗುತಾ, ಕೀಳ್ಪಟ್ಟವರು ಯಾವ ಶಾಸ್ತ್ರಾರ್ಥವನ್ನು ಉಸುರಿದರೂ "ಹೆ ಹೆ ಹೆ" ಎಂದ

Digitized by ROJA MUTHIAH RESEARCH LIBRARY



ಹಾಸ್ಯಮಾಡಿ ಧಿಃಕರಿಸುತಾ "ಇಲ್ಲಿ ಏನು ಒರಲುತಿ, ಮುಚ್ಚು" ಎಂದು ಪಿಸುಣ ಸ್ವಭಾವವನ್ನು ತೋರ್ಪಡಿಸುತಾ ಕುಣಿದಾಡುವುದನ್ನು ನಾವು ನೋಡಿಯೇ ಇದೇವೆ. ಇದು ಸಾಧಾರಣ ಜನರಿಗೆ ತಕ್ಕದ್ದಲ್ಲದೆ ಪ್ರಾಜ್ಞರ ವಿಷಯದಲ್ಲಿ ದೋಷ. ನಿಷ್ಠುರೋಕ್ತಿಗಳೂ, ಬಾಲಭಾಷೆಗಳೂ, ಅಪ್ರಕೃತವಾದ ಹಾಸ್ಯಗೋಷ್ಠಿಗಳೂ, ಅನ್ಯರಿಗೆ ಆಗ್ರಹವನ್ನೂ ಮನ ದುಗುಡವನ್ನೂ ಉಂಟುಮಾಡುವ ಕಾರಣ, ಪರೋಪಕಾರ ದೃಷ್ಟಿಯುಳ್ಳ ಪುರುಷರ ನಿಜವಾದ ಕೋರಿಕೆಯು, ಅಷ್ಟರಮಟ್ಟಿಗೆ ಭಗ್ನವಾಗುವುದೇನೋ ನಿಜ. ಆದರೆ ಒಳಗೂ ಹೊರಗೂ ಏಕರೀತಿಯಾಗಿದ್ದು ಕೆಟ್ಟದನ್ನು ಕಂಡಾಗ ಯಾವ ಮರ್ಯಾದೆಯೂ ಇಲ್ಲದೆ ನಿಗ್ರಹಿಸಿ, ಒಳ್ಳೇದನ್ನು ಕಂಡಾಗ ಶ್ಲಾಘಿಸಿ, ನಿಷ್ಕಪಟಿಯಾಗಿರುವುದರಿಂದ ಸ್ವಪ್ರಯೋಜನಕ್ಕೆ ಬಾಬರನಿಗಾದಂತೆ ಆಯುಸ್ಸು ಕಡಮೆಯಾದರೂ, ಪರಪ್ರಯೋಜನವು ಹುಮಾಯೂನನಂತೆ ಆರೋಗ್ಯವನ್ನು ಹೊಂದುವುದು. ಅಚ್ಚಳಿಯದ ಪರಪ್ರಯೋಜನವೇ ಉದಾರಚರಿತೆಯ ಮೂಲಸ್ತಂಭವಾದಕಾರಣ ಕಾಂಫೂಷನಂಥಾ ಮಹಾಪಂಡಿತ ಹಿಂದೆ ಬಂದು ಮುಂದೆ ಬಂದು ಆಗಿದ್ದನೆಂದು ಹೇಳಿರುವುದನ್ನು ಮನ ಯಾಕೋ ಒಪ್ಪುವದಿಲ್ಲ.

ಇದೂ ಅಲ್ಲದೆ ಮೇಲೆ ಹೇಳಿರತಕ್ಕಂಥಾ ಕಾಂಫೂಷನ ಆಸ್ಥಾನ ಚರ್ಯಗಳಲ್ಲಿ ಪ್ರತಿಯೊಂದಕ್ಕೂ ಲಾಕ್ಷಣಿಕಾರ್ಥವನ್ನು ಸ್ವಲ್ಪ ಶ್ರಮದಿಂದ ಕಲ್ಪಿಸಿಕೊಳ್ಳಬಹುದು. ಹೇಗೆಂದರೆ ಅಧಿಕಾರದಂಡವನ್ನು ಹಿಡಿದು ಸೊಂಟವನ್ನು ಬಗ್ಗಿಸಿಕೊಂಡಾಗ ಅಧಿಕಾರಮಾಡತಕ್ಕದ್ದು ಬಹುಶ್ರಮವೆಂತಲೂ ಅದು ಬಹು ಭಾರವೆಂತಲೂ ಲೋಕಕ್ಕೆ ತೋರ್ಪಡಿಸಬೆಕೆಂಬ

ಆತನ ಆಶೆ ದ್ಯೋತಕವಾಗಬಹುದು. ಧೊರೆಗೂ ಅಧಿಕಾರಿಗಳಿಗೂ ಆತ ಮಾಡಿದ ಮರ್ಯಾದೆಯಿಂದ ಸಮಸ್ತರೂ ಗೌರವವಾಗಿ ನಡೆದುಕೊಳ್ಳಬೇಕೆಂದು ತೋರಿಸಿದನೆಂದು ಹೇಳಬಹುದು. ಹೀಗೆ ಒಂದೊಂದಕ್ಕೆ ಒಂದೊದು ಅರ್ಥ ವಿದ್ದಾಗ್ಯೂ ಸರಿಯಾಗಿ ಭೇದಿಸಿಕೊಂಡು ಹೊದರೆ, ಇವುಗಳಿಗೆಲ್ಲಾ ನಟನೆ ಎಂಬ ಮತ್ತೊಂದು ನಾಮವನ್ನಿಡದೇ ಇರುವುದು ಏಕಪಕ್ಷವನ್ನೇ ಹಿಡಿದು ಮಾತಾಡತಕ್ಕವರ ಕೆಲಸವಾಗಿದೆ. ಇನ್ನೊಂದು ವಿಷಯವೇನಂದರೆ ವಿಷ್ಣುವಲ್ಲದೆ ಪೃಥ್ವೀಪತಿಯಲ್ಲವೆಂಬ ಗಳಗಳವನ್ನು ಬಿಟ್ಟು ಹಲವು ಹುಲ್ಲು ಮನೆಗಳನ್ನು ಜನರು ತಾವಾಗಿ ಒಪ್ಪಿಬಿಟ್ಟದ್ದರಿಂದ ಒಂದು ಅರಮನೆಯಾಯಿತೆಂಬ ಪಾಶ್ಚಾತ್ಯರ ನವೀನ ಮತವನ್ನು ಹಿಡಿದು ಮಾತಾಡಿದರೆ, ಅಧಿಕಾರಕ್ಕೆ ಇಷ್ಟು ವಿಪರೀತವಾದ ಗೌರವವನ್ನು ಕಾಂಫ್ಯೂಷ ಕಲ್ಪಿಸಿದ್ದು ಅತ್ಯಾಶ್ಚರ್ಯ. ಆದರೂ ಪೂರ್ವಾಪರ ವಿರುದ್ಧವಿಲ್ಲದಂತೆ ಈ ನಡತೆಗೆ ಅರ್ಥಮಾಡತೊಡಗಿದರೆ ಅಧಿಕಾರವೆನ್ನುವುದು ಈ ಲೋಕದಲ್ಲಿ ಯಾವ ಸತ್ಕಾರ್ಯವನ್ನು ಮಾಡುವುದಕ್ಕೆ ಹುಟ್ಟಿತೋ ಅಂಥಾ ಕರ್ತವ್ಯವನ್ನು ಅದು ಮಾಡದೇ ಬೇಲಿ ಎದ್ದು ಹೊಲಾ ಮೆಯ್ಯುವ ಗಟ್ಟವಾದರೂ, ಇತರರ ಗೌರವಕ್ಕೆ ಅದು ಬಾಧ್ಯವಾಗುವುದೆಂದು ಕಾಂಫ್ಯೂಷನ ತಾತ್ಪರ್ಯವಿದ್ದಂತೆ ಕಂಡುಬರುವುದಿಲ್ಲ.

ಸಾಂಕ್ರಾಮಿಕ ಜಾಡ್ಯಗಳು ಎಲ್ಲಾ ದೇಶಗಳಲ್ಲಿಯೂ ಅನಾದಿ. ಇವುಗಳು ದೈವಕೃತವೆಂದು ನಂಬಿ ಆಯಾ ದೇವತೆಗಳ ತೃಪ್ತಿಗಾಗಿ ಬಲಿ ಮೊದಲಾದ್ದನ್ನು ಹಾಕಿ ಯಂತ್ರಮಂತ್ರಗಳನ್ನು ಮಾಡುತ್ತೇವೆಂದು ನಟಿಸುವ ಜನರು ಎಲ್ಲೆಲ್ಲಿಯೂ ಉಂಟು. ಇಂಥವರು ಅನೇಕವಾಗಿ ಗುಂಪುಸೇರಿ ಮೆರವಣಿಗೇ



ಮಾಡಿಕೊಂಡು ಬೀದಿಯಲ್ಲಿ ಹೊರಟು ಕಾಂಫ್ಯೂಷನ ಮನೆಯ ಸಮೀಪಕ್ಕೆಬರಲು, ವೃದ್ಧಾಚಾರವನ್ನು ಲೋಕಕ್ಕೆ ಬೋಧಿಸುತಿದ್ದ ಈತನು ಮನೆಯಿಂದ ಈಚೆಗೆ ಬಂದು ನಿಂತು ಅವರಿಗೆ ಮರ್ಯಾದೆಮಾಡಿದನಂತೆ. ಈತನು ಅನ್ನಪಾನಗಳಲ್ಲಿ ವಿಶೇಷವಾಗಿ ಮಿತವಾಗಿರುತ್ತಿದ್ದನು. ಈತನಿಗೆ ಸಾರು ಮೊದಲಾದ್ದನ್ನು ಹಾಕಿ ಕಲಿಸಿ ಸಿದ್ಧಮಾಡಿತಂದಿಟ್ಟ ಅನ್ನವನ್ನೇ ತಿನ್ನುವ ಅಭ್ಯಾಸ. ಗುಡುಗಿನಶಬ್ದವನ್ನು ಕೇಳಿದರೆ ಮುಖವಿವರ್ಣವಾಗುತಿತ್ತು. ವ್ಯಸನಪಡುವ ಜನರನ್ನು ಕಂಡರೆ ಈತನೂ ಕೂಡಲೇ ಸಂಕಟಪಡುತಿದ್ದನು. ದಿಕ್ಕಿಲ್ಲದ ಮಿತ್ರರು ಯಾರು ಕಾಲವಾದರೂ ತಾನು ಅವರಿಗೆ ಉತ್ತರಕ್ರಿಯಾದಿಗಳನ್ನು ಮಾಡುತಿದ್ದನು. ಉಚಿತವನ್ನು ವಿಶೇಷವಾಗಿ ಕೊಡುತಿದ್ದನು. ಯಾವಾಗಲೂ ಪರರಿಗೋಸ್ಕರಮರುಗುವ ಸ್ವಭಾವವಾದ ಗುಣವು ಸಂತತವಾದ ಅದೇ ಯೋಚನೆಯಿಂದಲೂ ಅದೇ ಅಭ್ಯಾಸದಿಂದಲೂ ವೃದ್ಧಿಹೊಂದಿ ನೆಲೆಯಾಗಿ ನಿಂತಿದ್ದ ಕಾರುಣ್ಯಕ್ಕೆ ಬೀಜವಾಗಿರುವುದು. ದುಃಖವನ್ನು ಕಂಡರೆ ದುಃಖಪಡುವುದೂ ಸಂತೋಷವನ್ನು ಕಂಡರೆ ಸಂತೋಷಪಡುವುದೂ, ಮರುಕಉಳ್ಳ ಮನಸ್ಸಿಗೆ ಸಹಜವಾಗಿರಲಾಗಿ, ಇಂಥಾ ಸುಖದುಃಖಸಂತಾಪದಿಂದಲೇ ತದನುಗುಣವಾದ ಕಾರ್ಯಾಚರಣೆ ಹುಟ್ಟುವುದು. ನಮಗೆ ಶಕ್ತಿಗುಂದದಿರುವಾಗ, ಈ ಸಂತಾಪ ಎಷ್ಟು ಬಲವಾದ್ದಾದರೆ ಕಾರ್ಯೋದ್ಯೋಗದ ಸಂಭವ ಅಷ್ಟು ಹೆಚ್ಚಾಗಿದ್ದೀತು. ಕಾಂಫ್ಯೂಷನಲ್ಲಿ ಈ ಉದ್ದಾಮವಾದಗುಣ ಹೆಚ್ಚಾಗಿದ್ದ ಕಾರಣ ಪರೋಪಕಾರಬುದ್ಧಿಯೂ ಆತುರತೆಯೂ ವಿಶೇಷವಾಗಿತ್ತು. ಈತನ ಸಂಸಾರದಲ್ಲಿ ಇದ್ದ ಸುಖವು ಹಿಂದೆ ಸ್ವಲ್ಪ ಕಂಡಿದೆ. ಪತ್ನಿಯಲ್ಲಿದ್ದ ಮೈತ್ರಿಯು ಮೇಲೆ ಕಂಡಿದೆ. ಪುತ್ರನಾದ ಲಿ

Digitized by ROJA MUTHIAH RESEARCH LIBRARY

ಎಂಬುವನಲ್ಲಿಯೂ ವಿಶೇಷವಾದ ಅಭಿಮಾನವಿರಲಿಲ್ಲ. ಶಿಷ್ಯರೊಡನೆ ದೇಶದೇಶವನ್ನು ಸುತ್ತುತಾ ಇದ್ದ ಈ ಪಂಡಿತನಿಗೆ ಮಗನ ವಿಚಾರವನ್ನು ನೋಡುವುದಕ್ಕೆ ಸಂದರ್ಭವಿರಲಿಲ್ಲ. ಅಥವಾ ಊರಿನಲ್ಲಿಯೇ ಇದ್ದರೂ ತಂದೆ ಮಕ್ಕಳಿಬ್ಬರೂ ಸೇರಿ ಮಾತನಾಡಿದ್ದು ಬಹಳ ಅಪೂರ್ವ. ಆದರೆ, ಪುತ್ರವಾತ್ಸಲ್ಯವು ಯಾವಾಗಲೋ ಒಂದು ಸಾರಿ ಮಾತ್ರ ಕಂಡುಬಂತು. ಒಂದುದಿನ ಶಿಷ್ಯನೊಬ್ಬನು ಲಿ ಯನ್ನು ಕಂಡು ನಮಗಳಿಗೆ ಹೇಳಿರುವ ಪಾಠಕ್ಕಿಂತಲೂ ಹೆಚ್ಚು ವಿಷಯಗಳನ್ನು ಏನಾದರೂ ಮಕ್ಕಳಾದ ತಮಗೆ ಗುರುಗಳು ಹೇಳಿಕೊಟ್ಟಿದಾರೆಯೋ? ಎಂದು ಕೇಳಿದನು. ಅದಕ್ಕೆ ಲಿಯು-“ಅಯ್ಯ? ಇಲ್ಲ ನಮ್ಮ ಯಜಮಾನರು ಒಂದು ಕಡೆಯಲ್ಲಿ ಏಕಾಂಗಿಯಾಗಿ ನಿಂತುಕೊಂಡಿದ್ದರು. ನಾನು ಜಾಗ್ರತೆಯಿಂದ ಮಹಡಿಯನ್ನು ಇಳಿದು ಹೋಗುತಿದ್ದೆ. ಕೀರ್ತನೆಗಳನ್ನು ಓದಿದ್ದೀಯ ಎಂದು ನನ್ನನ್ನು ಕೇಳಿದರು. ನಾನು ಇಲ್ಲವೆನಲು ಅವರು- ಕೀರ್ತನೆಗಳನ್ನು ನೀನು ಓದದಿದ್ದರೆ, ನೀನು ಸಂಭಾಷಣೆಗೆ ಯೋಗ್ಯನಲ್ಲ ಎಂದರು. ಮತ್ತೊಂದುದಿನ- ನೀತಿಶಾಸ್ತ್ರನಿಬಂಧನೆಗಳನ್ನು ಓದಿದೆಯ ? ಎಂದು ಕೇಳಿದರು. ಇನ್ನೂ ಇಲ್ಲವೆಂದು ನಾನು ಹೇಳಲಾಗಿ-ನೀನು ಅದನ್ನು ಓದದಿದ್ದರೆ ನಿನ್ನಗುಣವೂ ನಡದೆಯೂ ನೆಲೆಗೆ ನಿಲ್ಲುವದಿಲ್ಲವೆಂದು ಹೇಳಿದರು. ನಮ್ಮ ಯಜಮಾನರು ಹೇಳಿದ್ದು ಈ ಎರಡು ಮಾತೇ ಹೊರತು ಇನ್ನೇನೂ ಇಲ್ಲ” ಎಂದು ಹೇಳಿದನು ಕೂಡಲೇ ಶಿಷ್ಯನು ಲಿ ಯನ್ನು ಕುರಿತು ಸ್ವಾಮಿ ತಮ್ಮನ್ನು ನಾನು ಒಂದು ಮಾತನ್ನು ಕೇಳಿದರೆ ನನಗೆ ಮೂರು ಮಾತು ತಿಳಿಯಿತು. ಹೇಗೆಂದರೆ ಕೀರ್ತನೆಯನ್ನು ಓದುವುದು ಒಂದು ನೀತಿಶಾಸ್ತ್ರನಿಬಂಧನೆ

Digitized by ROJA MUTHIAH RESEARCH LIBRARY



ಗಳನ್ನು ತಿಳಿಯುವುದು ಒಂದು. ನಮ್ಮ ಮಹಾಪುರುಷನು ತನ್ನ ಮಗನ ವಿಷಯದಲ್ಲಿ ವಿಶೇಷವಾಗಿ ತಟಸ್ಥವಾಗಿರುವುದು ಒಂದು, ಹೀಗೆಂದು ಹೇಳಿದನು. ಇದರಿಂದ ತನ್ನ ಮಕ್ಕಳಲ್ಲಿ ಸ್ವಭಾವವಾಗಿ ಇತರರಿಗೆ ಇರಬಹುದಾದ ಅಭಿಮಾನವು ಕಾಂಫೂಷನಿಗೆ ಲಿ ಯಲ್ಲಿ ಇರಲಿಲ್ಲವೆಂದುಗೊತ್ತಾಗುವುದು. ಇದು ನನ್ನದು ಅದು ನಿನ್ನದುಎಂಬ ಭಿನ್ನವಾಕ್ಯವುಲೋಕವನ್ನು ತನ್ನ ಸಂಸಾರವಾಗಿ ಎಣಿಸತಕ್ಕ ಉದಾರಚರಿತರಲ್ಲಿ ಹೊದ್ದುವುದಿಲ್ಲವಾದಾಗ್ಯೂ, ಕಾಂಫೂಷನು ತನ್ನ ಮಗನನ್ನು ಕೇಳಿದ ಎರಡು ಮಾತುಗಳಿಂದ ಒಳಹುಟ್ಟಿದ ಪುತ್ರವಾತ್ಸಲ್ಯವು ಶೂನ್ಯವಾಗಿತ್ತೆಂದು ಹೇಳುವುದಕ್ಕೆ ಆಧಾರಸಾಲದು. ತಾನಾಗಿ ಒದಗಿಬಂದ ಅಂಥಾ ವಾತ್ಸಲ್ಯವನ್ನು ತೋರಿಸುವಾಗ ಕೂಡ ಸ್ವಪ್ರಯೋಜನ ಸಂಬಂಧವಾದ ಸಂಗತಿಗಳನ್ನು ಬಿಟ್ಟು ತಾನು ಲೋಕಕ್ಕೆ ಬೋಧಿಸುವ ನೀತಿಯನ್ನು ತಿಳಿದುಕೊಂಡು ಆಚರಿಸುವುದಕ್ಕೆ ಸಾಧಕವಾದ ಗ್ರಂಥಗಳನ್ನು ಓದಿದೆಯಾ? ಎಂದು ಕೇಳುವಾಗ್ಗೆ, ತನ್ನ ಸಂಸಾರಾಭಿಮಾನವನ್ನು ಪ್ರಕಾಶಮಾಡುವಲ್ಲಿಕೂಡ ಜನೋಪಕಾರಕ್ಕೆ ಅಸ್ತಿಭಾರವಾದ ನೀತಿಯನ್ನು ಮರೆಯಲಿಲ್ಲವೆಂದು ಸ್ಥಿರಪಡುವುದು. ಹೀಗೆ ನೆವನೆವದಲ್ಲಿಯೂ ತನ್ನ ಅಭಿಮತವನ್ನು ತಿಳಿಯಪಡಿಸುವುದು ಸತ್ಪುರುಷರ ಸ್ವಭಾವ.

ಇಂಥಾ ದಯಾರಸವು ಸಜ್ಜನ ವರ್ಗಕ್ಕೆ ಮಾತ್ರ ನೇಮಿಸಲಾಗಿರಲಿಲ್ಲ. ಇತರ ದುಷ್ಟವರ್ಗಕ್ಕೂ ಏಕರೀತಿಯಾಗಿ ಆವರಿಸಿತ್ತು. ಯೋಗ್ಯರಿಗೋಸ್ಕರ ದುಷ್ಟರನ್ನು ಕೊಲ್ಲುವ ವಿಷಯದಲ್ಲಿ ತಮ್ಮ ಅಭಿಪ್ರಾಯವೇನೆಂದು ಒಬ್ಬ ರಾಜನು ಒಂದು ಸಮಯದಲ್ಲಿ ಕೇಳಲಾಗಿ ಕಾಂಫೂಷನು-ದೊರೆಯೇ,

ಯಾಕೆ ಮರಣದಂಡನೆಯನ್ನು ನಿಮ್ಮ ರಾಜ್ಯದಲ್ಲಿ ಆಚರಿಸಬೇಕು? ಒಳ್ಳೇ ಕೆಲಸ ಮಾಡಬೇಕೆಂತಲೇ ನಮ್ಮ ಮನಸ್ಸಿನಲ್ಲಿದ್ದರೆ ಪ್ರಜೆ ಒಳ್ಳೆಯವರಾಗುವರು. ಗಾಳಿಗೂ ಹುಲ್ಲಿಗೂ ಯಾವ ಸಂಬಂಧವೋ, ಮೇಲ್ಪಟ್ಟವರಿಗೂ ಕೀಳ್ಪಟ್ಟವರಿಗೂ ಅದೇ ಸಂಬಂಧವಿದೆ. ಮೇಲಿನವರು ಮಾಡಿದ್ದನ್ನೆಲ್ಲಾ ಕೆಳಗಿನವರು ಅಂಗೀಕರಿಸಿ ಅದಕ್ಕೆ ವಿಧೇಯರಾಗುತ್ತಾರೆ ಎಂದನು. ಕಾಂಫೂಷನ ಸಿದ್ಧಾಂತಕ್ಕೆ ಈ ಅಭಿಮತ ಅನುಗುಣವಾಗಿದೆ. ಶಿಕ್ಷೆಯು ಮುಂದೆ ಇಂಥಾ ಕೆಲಸಗಳನ್ನು ಮಾಡದಂತೆ ನಿರೋಧಕಾರಿಯಾಗಿಯೂ ಸಂಕಟ ಪಟ್ಟವರಿಗೆ ಪರಿಹಾರಕಾರಿಯಾಗಿಯೂ ಇರಬೇಕು. ಮರಣದಂಡನೆಯಿಂದ ಇವೆರಡೂ ಸಾಧಿಸಿದ ಹಾಗಾಗುವುದಿಲ್ಲ. ಒಂದು ಅಪರಾಧ ಮಾಡಿದ್ದಕ್ಕೆ ಅವನ ಪ್ರಾಣವೇ ಹೋಗುವ ಪಕ್ಷದಲ್ಲಿ ಶಿಕ್ಷೆಯು ಮುಂದಕ್ಕೆ ನಿರೋಧಕಾರಿಯಾಗುವುದು ಎಂಬ ಮಾತು ಆ ಅಪರಾಧಿಯೊಬ್ಬನ ವಿಷಯದಲ್ಲಿ ಅರ್ಥವಿಲ್ಲದ್ದಾಗುವುದು. ಸಂಕಟಪಟ್ಟವರಿಗೆ ಅಪರಾಧಿಯ ಪ್ರಾಣಾಪಹಾರದಿಂದಲೇ ಉಂಟಾಗುವ ಪ್ರತೀಕಾರವು ದ್ವೇಷಾಸೂಯಕ್ಕೆ ಅನ್ಯಾಯನವನ್ನುಂಟು ಮಾಡುವುದೇ ಹೊರ್ತು ಪಟ್ಟ ನಷ್ಟಕ್ಕೆ ಪರಿಹಾರವೇನಾಯಿತು? ಕೆರೆ ಒಡೆದವನ ಕೈಲಿ ಕಂಬಳಿ ಕಿತ್ತುಗೊಂಡ ಹಾಗಾಯಿತು. ಇದಲ್ಲದೆ ಮರಣದಂಡನೆಯು ಈ ಅಪರಾಧಿಯ ವಿಷಯದಲ್ಲಿ ನಿರೋಧಕಾರಿಯಾಗುವುದೇ ಅಲ್ಲದೆ ಇತರರಿಗೂ ಈ ಭೀತಿಯನ್ನು ಹುಟ್ಟಿಸುವುದು. ರಾಜ್ಯಕ್ಷೇಮಕ್ಕೆ ಅಗತ್ಯವಾದ್ದರಿಂದ, ನಿರೋಧಕಾರಿ ಎಂಬರ್ಥವು ಇಲ್ಲಿ ಸಾರ್ಥಕವಾಯಿತೆಂದು ಕ್ರೂರದಂಡನ ಪಕ್ಷಪಾತಿಗಳು ವಾದಿಸಬಹುದು. ಇದು ಬಲವಾದ ಅಂಶವೇ ಸರಿ. ಆದರೆ ಅಪ



ರಾಧಗಳು ಬುದ್ಧಿಮಾಂದ್ಯ ಹೊಂದಿದ ಕಾಲದಲ್ಲಿಯೇ ನಡೆಯುವವು. ಎಂದು ಖಂಡಿತವಾಗಿ ಹೇಳಲು ವಿಶೇಷ ಅವಕಾಶವಿದೆ, ಆಗ್ರಹವೂ, ಸ್ವಪ್ರಯೋಜನವೂ, ಆಯಾ ಸಮಯಗಳಲ್ಲಿ ತಾವೇತಾವಾಗಿ ಮನಸ್ಸಿನಲ್ಲಿ ನಿಂತು ಪೂರ್ವಾಪರ ಪರಿಜ್ಞಾನವನ್ನು ಕೆಡಿಸುವುದು ಬುದ್ಧಿಶಾಲಿಗಳ ಅನುಭವದಿಂದ ದೃಢೀಕಾರವಾಗಿದೆ. ಜೀವರಾಶಿಗಳಲ್ಲಿ ಮನುಷ್ಯನೆನಿಸುವುದಕ್ಕೆ ಮುಖ್ಯ ವಿಶೇಷಣವಾದ ಈ ಪೂರ್ವಾಪರಜ್ಞಾನವು ಆಡದೆ ಸುಮ್ಮನೆ ನಿಂತು ಅರಿಷಡ್ವರ್ಗಗಳೇ ನಾಟ್ಯರಂಗಕ್ಕೆ ಬಂದ ಮೇಲೆ, ಮನುಷ್ಯನ ಅವಸ್ಥೆ ಭೇದಿಸುವುದು. ಈ ಅವಸ್ಥೆಗೆ ಸ್ವಲ್ಪಕಾಲದ ಮಟ್ಟಿಗೆ ಹುಚ್ಚು ಎಂತಾಗಲಿ, ಬುದ್ಧಿಯ ಮಡಿತನವೆಂತಾಗಲಿ ಹೇಳಬಹುದು. ಇಂಥಾಕಾಲಗಳಲ್ಲಿಯೂ, ಅಜಾಗರೂಕತೆಯಿಂದಲೂ ಆಕಸ್ಮಿಕವಾಗಿ ಕಾಕತಾಳನ್ಯಾಯದ ಹಾಗೆಯೂ ಅಪರಾಧಗಳನ್ನು ನಡೆಸಿ ತರುವಾಯ ಬುದ್ಧಿಯು ಎಂದಿನಂತೆ ಸಮಾಧಾನಸ್ಥಿತಿಗೆ ಬಂದಮೇಲೆ ಅನೇಕ ಅಪರಾಧಿಗಳು ಬಹಿರಂಗವಾಗಿಯೂ, ಕೆಲವರು ಅಂತರಂಗವಾಗಿಯೂ, ಪಶ್ಚಾತ್ತಾಪಪಡುವರಾದ್ದರಿಂದ, ಈ ಮನಸ್ಸಿನ ಸಂಕಟವೇ ಅರ್ಧ ಶಿಕ್ಷೆಯಾಗುವುದು. ದಂಡನೆಯನ್ನೇ ಕೊಟ್ಟುಬಿಟ್ಟರೆ ಅದು ಪೂರ್ತಿಯಾದ ಶಿಕ್ಷೆಯಾಯಿತು, ಮರಣದಂಡನೆಯೇ ಆದರೆ ಒಂದಕ್ಕೆ ಹತ್ತು ಸಾವಿರದಷ್ಟು ದಂಡನೆ ಆದಹಾಗಾಯಿತು. ಸಹಾಯ ರಹಿತನಾಗಿ ಕೈಗೆ ಸಿಕ್ಕಿದವನನ್ನು ಮನಸ್ಸು ಬಂದಹಾಗೆ ಶಿಕ್ಷಿಸುವುದು ಮಾತ್ರ ಸತ್ಕಾರ್ಯವೆಂತಲೂ ನ್ಯಾಯವಿರುದ್ಧವಲ್ಲವೆಂತಲೂ ಎನ್ನಿಸಿ

Digitized by ROJA MUTHIAH RESEARCH LIBRARY

ಕೊಂಡಿತು. ಮೊಂಡತನದಿಂದ ನಡೆಯದೆ ಹೋದ ಎತ್ತಿಗೆ ಎರಡುಪೆಟ್ಟು ಹಾಕುವುದು ಮಾತ್ರ ದಂಡನೆಗೆ ಅರ್ಹವಾಯಿತು. ಅಯ್ಯೋ! ಧರ್ಮಶಾಸ್ತ್ರದ ಹೇಡಿತನವನ್ನು ಎಷ್ಟು ವರ್ಣಿಸೋಣ!

ಇಷ್ಟೂ ಅಲ್ಲದೆ ಮಾನವಂತನನಿಗೆ ಒಂದು ಗಳಿಗೆಯಾದರೂ ದಂಡನೆಯೇ ಹತ್ತು ವರ್ಷವಾದರೂ ದಂಡನೆಯೇ. ಸತ್ತ ಹಾವನ್ನು ಎಷ್ಟು ಸಲ ಹೊಡೆದರೂ ಫಲ ಒಂದೇ. ರೋಷಾವೇಶಗಳಿಗೂ ಇತರ ಅರಿಷಡ್ವರ್ಗಗಳ ಬಾಧೆಗೂ ಅಪರಾಧಿಯು ಅಪರಾಧವನ್ನು ಮಾಡುವುದರಲ್ಲಿ ಹೇಗೆ ಎಡೆಯಾಗಿರುವನೋ ಹಾಗೆಯೇ ಮನುಷ್ಯವರ್ಗಕ್ಕೆ ಸೇರಿದ ದಂಡನಾಧಿಕಾರಿಯೂ ಶಿಕ್ಷೆಯನ್ನು ವಿಧಿಸುವುದರಲ್ಲಿ ಸಮಯ ತಪ್ಪಿ ಎಡೆಯಾಗಿರಲು ಸಂದೇಹವಿಲ್ಲ. ಅಪರಾಧಿ ಸಂಕಟ ಪಟ್ಟವನಿಗೆ ಮಾಡಿದ ನಷ್ಟಕ್ಕಿಂತಲೂ ಅಧಿಕಾರಿಯು ತನ್ನ ಅಜ್ಞಾನದಿಂದ ಅಥವಾ ಅಚಾತುರ್ಯದಿಂದ ಅಥವಾ ಈರ್ಷೆಯಿಂದ ಕೊಡುವ ಶಿಕ್ಷೆಯು ಅಪರಾಧಿಗೆ ಅಧಿಕವಾದ ನಷ್ಟವನ್ನುಂಟುಮಾಡಿದರೆ ಲೋಕವಾಡಿಕೆಯಲ್ಲಿ ಪರಿಹಾರವೇನಿದೆ ? ಇಂಥಾ ಯೋಚನೆ ನ್ಯಾಯ ವಿಧಾಯಕ ಮಾಡತಕ್ಕವರಿಗೆ ವಿಶೇಷವಾಗಿ ಹತ್ತದೇ ಇರುವುದಕ್ಕೆ, ಸರ್ಕಾರದ ಅಧಿಕಾರಿಗಳಿಗೆ ಎಳ್ಳಷ್ಟಾದರೂ ನಷ್ಟವಾದೀತಲ್ಲ ಎಂಬ ದುಶ್ಲಾಘನೀಯವಾದ ದುರಭಿಮಾನವೇ ಕಾರಣ. ಹೀಗಿರಲು ನ್ಯಾಯ ವಿಮರ್ಶೆ ಎನ್ನುವುದು ಪ್ರಜೆಗಳಲ್ಲಿ ಒಬ್ಬ ಮನುಷನಿಗೂ ಮತ್ತೊಬ್ಬ ಮನುಷ್ಯನಿಗೂ ಹೇಳಿದ್ದಾಯಿತೇ ಅಲ್ಲದೆ ಪ್ರಜೆಗಳಿಗೂ ಸರ್ಕಾರಕ್ಕೂ ಹೇಳಿದ್ದಾಗಿತೋರಲಿಲ್ಲ ಆದರೆ ನ್ಯಾಯಕ್ಕೆ ಎರಡು ಮುಖವೂ ?



ದಂಡನೆ ಮಾಡುವುದರ ಕೋರಿಕೆಯೇ ಮರಣದಂಡನೆಯಿಂದ ಭಗ್ನವಾಗುವುದು. ಲೋಕದಲ್ಲಿ ಮನೋವ್ಯಥೆಗಿಂತಲೂ ಹೆಚ್ಚಾದ ವ್ಯಥೆ ಇಲ್ಲ. ಈ ಒಳಸಂಕಟವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಆತ್ಮ ಹತ್ಯವನ್ನಾದರೂ ಮಾಡಿಕೊಳ್ಳುವರು. ಇಂಥಾ ಮರಣ ದಂಡನೆಯು ಒಳ ಸಂಕಟಕ್ಕಿಂತಲೂ ಲೇಸಾಯಿತು. ತೇಜೋವಧೆಯೂ, ಅಪಮಾನವೂ, ಮನೋರಥ ಭಂಗವೂ, ನಿರ್ಬಂಧವೂ ಇತರ ಹಿಂಸೆಗಳೂ ಮನೋವ್ಯಥೆಗೆ ಮೂಲಕಾರಣಗಳು. ಕಾರಾಗೃಹವಾಸದಲ್ಲಿ ಇವುಗಳೆಲ್ಲಾ ಸೇರಿವೆ. ಇಂಥಾ ಕಾರಾಗೃಹವಾಸವನ್ನು ತಪ್ಪಿಸಿ ಮರಣದಂಡನೆಯನ್ನು ಕೊಡುವುದು ಪ್ರಾಣಹತ್ಯ ಮಾಡಿದವನಿಗೆ ದಯಾರಸ ತೋರಿಸಿದ ಹಾಗಾಯಿತಾದ್ದರಿಂದ, ಸರ್ಕಾರವು ಕಾರ್ಯದ ದೋಷಕ್ಕೆ ಒಂದು ಭಾಗದಲ್ಲಿ ಗುರಿಯಾಗದಿದ್ದಾಗ್ಯೂ, ಅತ್ಯಂತ ಹೀನವಾದ ದುಷ್ಕಾರ್ಯವನ್ನು ಮಾಡಿದವನಿಗೆ ಅತ್ಯಂತ ಕಠಿಣವಾದ ಶಿಕ್ಷೆಯನ್ನು ಕೊಡಬೇಕು ಎಂತ ತಿಳಿದುಕೊಂಡಿರುವ ಸರ್ಕಾರದವರ ಮುಖ್ಯೋದ್ದೇಶನೇ ಇಲ್ಲಿ ಭಗ್ನವಾಗಿ ಹೋಯಿತು.

ಯಾವ ದೇಶದಲ್ಲಿಯಾಗಲಿ ಯಾವ ಕಾಲದಲ್ಲಿಯಾಗಲಿ ಬಹಳ ಬುದ್ಧಿಶಾಲಿಗಳಾಗಿ ವಿದ್ಯಾವಂತರಾಗಿರತಕ್ಕವರನ್ನೇ ಸರ್ಕಾರದ ಕೆಲಸಕ್ಕೆ ನೇಮಿಸಬೇಕು. ಮತ್ತು ಹಾಗೆಯೇ ನೇಮಿಸುವರು. ಬುದ್ಧಿಶಾಲಿಗಳೆಂದು ತಾವು ತಿಳಿದುಕೊಂಡಿರತಕ್ಕವರನ್ನು ನೋಡಿ ಇತರ ಸಾಧಾರಣರು ತಮ್ಮ ನಡತೆಯನ್ನು ತಿದ್ದಿಕೊಳ್ಳುವರು. ಆದಕಾರಣ ಸರ್ಕಾರದ ಉದ್ಯೋಗಸ್ಥರು ಯಾವ ಕೆಲಸವನ್ನುಮಾಡಿದರೂ ಅದರಂತೆ ತಾವೂ



Digitized by ROJA MUTHIAH RESEARCH LIBRARY

ಮಾಡುವರು. ಹೀಗೆ ಮೇಲ್ಪಟ್ಟವರು ಕೀಳ್ಪಟ್ಟವರಿಗೆ ದಾರಿಯನ್ನು ತೋರಿಸುವುದರಲ್ಲಿ ಕೆಟ್ಟ ಮಾರ್ಗವನ್ನು ಹಿಡಿದರೆ ಇತರರೂ ಹಾಗೆಯೇ ಮಾಡುವರು. ಒಳ್ಳೆಯ ಮಾರ್ಗವನ್ನು ಹಿಡಿದರೆ ಅದೂ ಸಾಮಾನ್ಯಜನರಲ್ಲಿ ಪ್ರತಿಫಲಿಸುವುದು. ಇದೆಲ್ಲವನ್ನೂ ಪರ್ಯಾಲೋಚಿಸಿಯೇ ಕಾಂಫ್ಯೂಷನು ಮರಣ ದಂಡನೆ ಕೂಡದೆಂತಲೂ ಮೇಲ್ಪಟ್ಟವರು ಸನ್ಮಾರ್ಗದಲ್ಲಿಯೇ ಇರಬೇಕೆಂತಲೂ ಉತ್ತರವನ್ನು ಕೊಟ್ಟನು.

ಹಿತ್ತಲಗಿಡ ಮದ್ದಲ್ಲವೆಂದು ತಿಳಿಯುವುದು, ಕಂಡಾಗ ಬಿಟ್ಟು ಕಾಣದಾಗ ಅಳುವುದು, ಇದ್ದಾಗ ಕಾಲಿಗೆ ಕಸಮಾಡಿ ಹೋದಾಗ ದೇವರೆಂದು ಪೂಜಿಸುವುದು ಲೋಕದ ಸ್ವಭಾವವಾಗಿದೆ. ಚೀನಾಜನರು ಈ ಸ್ವಭಾವಕ್ಕೆ ಪ್ರತಿಷೇಧರಲ್ಲ. ಮಹಾಪುರುಷನಾದ ಕಾಂಫ್ಯೂಷನು ಜೀವಂತನಾಗಿದ್ದಾಗ ಕೆಲವರು ವಿನಾ ಉಳಿದವರೆಲ್ಲಾ ಕಾಂಫ್ಯೂಷನನ್ನು ಲಕ್ಷ್ಯವಿಲ್ಲದೆ ಹೀಳನಮಾಡುತಿದ್ದು, ಆತ ಗತಿಸಿ ಹೋದ ಮೇಲೆ ಆತನ ಸಿದ್ಧಾಂತವನ್ನೂ ವಿವೇಕವನ್ನೂ ಕೇಳಿ ಮೆಚ್ಚುತಾ ಬಂದರು. ಮೆಚ್ಚಿಗೆಯು ಮರ್ಯಾದೆಯಾಯಿತು; ಕಾಲಕಳೆದ ಹಾಗೆಲ್ಲ ಮರ್ಯಾದೆಯೂ ಭಕ್ತಿಯಾಯಿತು. ಕೊನೆಗೆ ಈತನು ಅವತಾರಪುರುಷನೆಂದು ಭಾವಿಸುತ ಬಂದರು. ಈಗಲೂ ಚೀನಾ ಸಂಸ್ಥಾನದಲ್ಲಿ ಒಂದು, ಎರಡು, ಮೂರನೇ ದರ್ಜೆಯ ಪ್ರತಿಪಟ್ಟಣದಲ್ಲಿ ಕೂಡ ಕಾಂಫ್ಯೂಷನಿಗಾಗಿ ಗುಡಿಯನ್ನು ಕಟ್ಟಿ ವಿಗ್ರಹವನ್ನು ಪ್ರತಿಷ್ಠೆ ಮಾಡಿ ಪೂಜಿಸುವರು. ಇಂದೂರಿನಲ್ಲಿ ಅಹಲ್ಯಾಬಾಯಿಗೂ ಶೃಂಗೇರಿಯಲ್ಲಿ ಈಶ್ವರನ ಅವತಾರವೆಂಬ ಶಂಕರಾಚಾರ್ಯರಿಗೂ ಹೀಗೆಯೇ ಪೂಜೆ ನಡೆಯುವುದು. ಇದಲ್ಲದೆ ಕಾಂಫ್ಯೂಷನ ವಂಶಸ್ಥರು ೧೧೦೦೦





ಜನರಿದ್ದಾರೆಂತಲೂ ಅಲ್ಲಿಂದ ಇಲ್ಲಿನವರೆಗೆ ಅರವತ್ತೇಳು ಅರವತ್ತೆಂಟು ತಲೆ ಕಳೆಯಿತೆಂತಲೂ ಆತನ ವಂಶೀಯರಿಗೆ ಈಗಲೂ ವಿಶೇಷವಾದ ಬಹುಮಾನ ನಡೆಯುವುದೆಂತಲೂ ತಿಳಿಯಬಂದಿದೆ. ಹೀಗೆ ಮಹಾಪುರುಷರು ಇದ್ದಾಗ ತಿರಸ್ಕಾರವೂ ಹೋದಮೇಲೆ ಪುರಸ್ಕಾರವೂ ಉಂಟಾಗುವುದು ಎಲ್ಲೆಲ್ಲಿಯೂ ಏಕರೀತಿಯಾಗಿದೆ.

---

## ೧೨ ನೇ ಅಧ್ಯಾಯ.

——:o:——

### ಕಾಂಫ್ಯೂಷನ ಮತ ಮುಂತಾದ್ದು.

ಈತನು ಹೊಸದಾಗಿ ಯಾವ ಮತವನ್ನೂ ಸ್ಥಾಪಿಸಲಿಲ್ಲ. ಹೊಸದಾಗಿ ಯಾವ ಮತವನ್ನೂ ಲೋಕಕ್ಕೆ ಬೋಧಿಸಲಿಲ್ಲ. ಈತನ ಅಮೋಘವಾದ ಪ್ರಖ್ಯಾತಿಯು ಈತನು ಬೋಧಿಸಿದ ನೀತಿಯಲ್ಲಿಯೂ ಧರ್ಮಾಚರಣೆಯಲ್ಲಿಯೂ ನೆಲೆಗೊಂಡಿದೆ. ಆದರೂ ಈತನ ಗ್ರಂಥ ಮೊದಲಾದುವುಗಳಿಂದ ತಿಳಿಯಬರುವುದೇನೆಂದರೆ:—

ಈ ಪ್ರಪಂಚರೂಪವಾಗಿರತಕ್ಕ ಪಂಚಭೂತಗಳು ಅನಾದಿಸಿದ್ಧ. ಇದಕ್ಕೆ ಮೂಲಕಾರಣ ಇಂಥಾದ್ದೆಂದು ಹೇಳುವುದಕ್ಕಾಗುವುದಿಲ್ಲ. ಈ ಮೂಲಕಾರಣವು ಊರ್ಧ್ವಭಾಗದಲ್ಲಿರುವ ಆಕಾಶರೂಪವಾಗಿ ನಮಗೆ ಗೋಚರವಾಗು[illegible] ಇದು ಹೊರತು ದೇವರೆಂಬ ವ್ಯಕ್ತಿಯು ಬೇರೆ [illegible] ಹೊಂದಿಲ್ಲ ಅನಾದಿಯಾದ ಒಂದು ವಿಧಿಯ[illegible] ತವಾಗಿದೆ. ಈ ಬ್ರಹ್ಮಾಂಡಕಟಾಹದ [illegible]

Digitized by ROJA MUTHIAH RESEARCH LIBRARY

ಳಲ್ಲಿಯೂ ಇದು ವ್ಯಾಪಿಸಿದೆ. ಚಂದ್ರ, ಸೂರ್ಯ, ನಕ್ಷತ್ರಗಳ ಗತಿಗಳೂ, ಋತುಧರ್ಮಗಳೂ, ಪರ್ವತಗಳೂ, ನದಿಗಳೂ, ಬೀಜವೃಕ್ಷಫಲಗಳೂ, ಸಾವುಪುಟ್ಟುಗಳೂ, ಸಮುದ್ರದ ಅಲ್ಲೋಲಕಲ್ಲೋಲಗಳೂ, ಸಿಡಿಲು, ಮಿಂಚುಗುಡುಗುಗಳೂ, ಗಾಳಿಮಳೆಗಳೂ ಇವುಗಳೆಲ್ಲಾ ಉಂಟಾಗುವುದು ಈ ಮಹಾತತ್ವದ ಪ್ರಾಣದಿಂದಲೇ. ಇವುಗಳನ್ನೆಲ್ಲಾ ನಾನು ಹೇಳುವುದಕ್ಕಿಂತಲೂ ಹೆಚ್ಚಾಗಿ ನೀವೇ ನೋಡಿ ತಿಳಿದುಕೊಳ್ಳಬಹುದೆಂದು ಕಾಂಫೂಷನು ಶಿಷ್ಯರಿಗೆ ಹೇಳುತಾನೆ. ಮತ್ತೊಂದುಕಡೆಯಲ್ಲಿ ಈ ತತ್ವವು ಶುದ್ಧ ಚಿನ್ಮಯವಾಗಿಯೂ ಸೂಕ್ಷ್ಮರೂಪವುಳ್ಳ ಭೂತಗಳನ್ನೊಳಗೊಂಡಿರುವುದಾಗಿಯೂ, ದುಷ್ಟನಿಗ್ರಹ ಶಿಷ್ಟಪರಿಪಾಲನೆಮಾಡತಕ್ಕದ್ದಾಗಿಯೂ, ಭೂತಬಲಿಯಿಂದ ತೃಪ್ತಿಹೊಂದತಕ್ಕದ್ದಾಗಿಯೂ ಹೇಳಿದೆ. ಮರಣವೆಂಬುವ ಮಾತನ್ನೇ ಈತ ಎತ್ತುವುದಿಲ್ಲ ಸತ್ತುಹೋದನೆನ್ನುವುದಕ್ಕೆ ಬದಲಾಗಿ ಸಂಸಾರಕ್ಕೆ ಸೇರಿಕೊಂಡನೆಂದು ಚೀಣರು ಹೇಳುತಾರಂತೆ. ಪಿತೃದೇವತೆಗಳು ಸೂಕ್ಷ್ಮರೂಪದಲ್ಲಿ ಆಗಾಗ್ಯೆ ಬಂದು ತಮ್ಮ ಬಂಧುವರ್ಗವನ್ನು ನೋಡಿಕೊಂಡು ಅವರು ತಮಗೆ ಮಾಡುವ ಸತ್ಕಾರವನ್ನು ಸ್ವೀಕರಿಸಿ, ಅವರನ್ನು ಹರಸಿ ಹೊರಟುಹೋಗುವರಂತೆ. ಇದಲ್ಲದೆ ಮೃತಿಹೊಂದಿದ ಮೇಲೆ ಪಂಚಭೂತಾತ್ಮಕವಾದ ನಮ್ಮ ಶರೀರವು ಆಯಾ ...ಗೆ ಸೇರಿಹೋಗುವುದು ; ಮನುಷ್ಯನಲ್ಲಿ ಸೂಕ್ಷ್ಮಭಾಗ ...ಸ್ಥೂಲಭಾಗವೆಂತಲೂ ಹೆದ್ದಟ್ಟಾದ ಎರಡು ಭಾಗ ... ಶರೀರವು ಮೇಲಕ್ಕೇರುವುದು. ಸ್ಥೂಲಶರೀ... ಎಂದು ಬೋಧಿಸಿದನು.

Digitized by ROJA MUTHIAH RESEARCH LIBRARY



ಹೀಗೆ ಸಾಂಕೇತಿಕವಾಗಿ ಕಾಂಪೂಷನು ಹೇಳುವ ಸಿದ್ಧಾಂತದಲ್ಲಿ ಗೊತ್ತಾಗುವುದೇನೆಂದರೆ :—ಆ ಬ್ರಹ್ಮತತ್ವವು ಆ ಅವಿಕಾರಣವು, ಅಪರಾಪರವಸ್ತುವು ಸಚ್ಚಿದಾನಂದನಿತ್ಯಪರಿಪೂರ್ಣತೆಯುಳ್ಳದ್ದಾಗಿ ತನ್ನಲ್ಲಿ ಗುಪ್ತವಾಗಿರುವ ಒಂದು ಮಹಾವಿಧಿಯನ್ನು ಎಲ್ಲೆಲ್ಲಿಯೂ ವ್ಯಾಪನೆಮಾಡಿ ಅದನ್ನು ಆಯಾ ಪದಾರ್ಥಗಳ ಸ್ವಭಾವಕ್ಕೆ ಅನುಗುಣವಾದ ಉಪವಿಧಿಗಳ ರೂಪವಾಗಿ ತೋರುತ್ತಿರುವುದು. ನೀರಿನಲ್ಲಿ ತೇಲಿಸಿ ಮುಳುಗಿಸುವ ಬೆಂಕಿಯಲ್ಲಿ ಸುಡುವ ಬೀಜದಲ್ಲಿ ಗಿಡವಾಗುವ ಉಪವಿಧಿಗಳನ್ನು ನಿಯಮಿಸಿ ಅದರಂತೆ ಕಾರ್ಯಕಾರಣಗಳನ್ನು ತಪ್ಪದೆ ಜರುಗಿಸುವುದಕ್ಕಿಂತ ಹೆಚ್ಚಾದ ಅಧೀಶ್ವರತ್ವವು ಆ ತತ್ವಕ್ಕೆ ಇಲ್ಲ. ದುಷ್ಟನಿಗ್ರಹ ಶಿಷ್ಟಪರಿಪಾಲನೆ ಇದರಿಂದ ಆಗುವುದೆನ್ನುವಾಗಲೂ ಆಯಾಕಾರ್ಯಾನುಗುಣವಾದ ಫಲಾಫಲಗಳು ಸ್ವಭಾವವಾಗಿ ದೊರೆಯುವುದೇ ಹೊರತು ಪರತತ್ವದ ಗೋಜು ಮತ್ತ್ಯಾತರಲ್ಲಿಯೂ ಪದೇಪದೇ ಇರುವುದಿಲ್ಲ. ಅದು ತಟಸ್ಥವಾಗಿದೆ. ಇದೇ ಕಾಂಪೂಷನ ಮತಸಿದ್ಧಾಂತ.

ನೀತಿಯ ವಿಷಯದಲ್ಲಿಯೂ, ರಾಜ್ಯಧರ್ಮದ ವಿಷಯದಲ್ಲಿಯೂ, ಈತನ ಸಿದ್ಧಾಂತವು ಹಿಂದೆ ಹೇಳಿರುವುದರಿಂದಲೇ ಗೊತ್ತಾಗಬಹುದು. ಮಾತಾಪಿತೃಗಳಲ್ಲಿ ಮಕ್ಕಳಿಗೆ ವಿಶೇಷವಾದ ಭಕ್ತಿಯೂ ಆಜ್ಞಾಧಾರಕತೆಯೂ ಇರಬೇಕಾದ್ದು ಪರಮ ಧರ್ಮ. ಇದರಿಂದಲೇ ಚೀನಾ ರಾಜ್ಯದಲ್ಲಿ ಆವರಿಸಿಕೊಂಡಿರುವ ವೃದ್ಧಾಚಾರವು ಬಹಳವಾಗಿ ಬೇರು ಬಿಟ್ಟುಕೊಂಡಿರುವುದು. ದೊರೆಯು ತಂದೆಯಂತಲೂ, ಪ್ರಜೆಗಳು ಮಕ್ಕಳಂತಲೂ ಉದ್ದಕ್ಕೂ ಭಾವನೆ ಇದ್ದು ಪ್ರಜೆಗಳು ಅರಸರ ಆಜ್ಞಾನುಸಾರ ನಡೆದುಕೊಳ್ಳಬೇಕಂತೆ. ಸಂಸಾರವೇ

ಚಿಕ್ಕರಾಜ್ಯ, ರಾಜ್ಯವೇ ದೊಡ್ಡ ಸಂಸಾರವೆಂದು ಹೇಳುತ್ತಾನೆ ಹಾಗಾದರೆ ಮಕ್ಕಳಿಗೆ ಶ್ರಮವಿಲ್ಲದೆ ಅನ್ನವಸ್ತ್ರವೇ ಮೊದಲಾದ ಅವರ ಯೋಗಕ್ಷೇಮವನ್ನು ತಂದೆ ನೋಡಿಕೊಳ್ಳುವ ಹಾಗೆ ಪ್ರಜೆಗಳಿಗೆ ಶ್ರಮವಿಲ್ಲದೆ ಅರಮನೆಯಿಂದ ಅನ್ನವಸ್ತ್ರವನ್ನು ಕೊಡಿಸಬೇಕಾಯಿತು. ಇದು ಸಾಧ್ಯವೆ ? ಮಕ್ಕಳು ಎಂಥಾ ಅಪರಾಧವನ್ನು ಮಾಡಿದಾಗ್ಯೂ ಮರಣ ದಂಡನೆಯನ್ನಾಗಲಿ, ಮರಣ ದಂಡನೆ ಕೂಡದೆಂದು ಕಾಂಫ್ಯೂಷನ ತಾತ್ಪರ್ಯವಿದೆಎಂತ ವಾದಿಸಿದರೆ, ಆಮರಣಾಂತ ಶಿಕ್ಷೆಯನ್ನಾಗಲಿ ವಿಧಿಸಬಹುದೆ ? ರಾಜ್ಯಭಾರದಲ್ಲಿ ಇದು ನಡೆದ ಮೇಲೆ ಆ ಪೂರುತಂದೆಯ ಮನಸ್ಸು ಎಂಥಾ ಕಠಿಣ ಮನಸ್ಸಾಯಿತು ? ಇಂಥಾ ಸಿದ್ಧಾಂತವು ಸರಿಯಾಗಿ ನಡೆಯಬಹುದೆಂದು ಯೋಚಿಸುವ ಭಾಗ ಯಾವುದಾದರೂ ಇದ್ದರೆ ಅದರಲ್ಲಿ ಮುಖ್ಯವಾದ್ದು ತಂದೆಯ ಆಸ್ತಿವ್ಯವಸ್ಥೆ. ರಾಜ್ಯವೆಲ್ಲಾ ತಂದೆಯ ಆಸ್ತಿ ಎಂದು ಹೇಳಲಾಗಿ ಮಕ್ಕಳಾದ ಪ್ರಜೆಗಳಿಗಲ್ಲಾ ಅದನ್ನು ಸಮಭಾಗ ಮಾಡಬೇಕಾಯಿತು. ರಾಜಪುತ್ರನೇ ದೊರೆಯ ಜ್ಯೇಷ್ಠಪುತ್ರನೆಂದು ಭಾವಿಸಿ ಯೂರೋಪ್ ದೇಶಗಳಲ್ಲಿರುವಂತೆ ಈ ರಾಜ್ಯವೆಂಬ ಪಿತ್ರಾರ್ಜಿತವಾದ ಆಸ್ತಿಯು ಜ್ಯೇಷ್ಠಪುತ್ರನಿಗೆ ನಡೆಯುವಂತೆ ನೇಮಕ ಮಾಡಿಕೊಂಡಿರುವುದಾಗಿ ಹೇಳುವ ಪಕ್ಷಕ್ಕೆ, ಅಂಥಾ ಜ್ಯೇಷ್ಠಪುತ್ರನಾದ ರಾಜಪುತ್ರನು ಮನೆಯ ಯಜಮಾನನಾದ ಮೇಲೆ, ಉಳಿದ ಮಕ್ಕಳೆಲ್ಲಾ ತಮ್ಮ ಕಷ್ಟಾರ್ಜನೆಯಲ್ಲಿಯೂ ಯಜಮಾನನಿಂದ ತಮಗೆ ಯಾವ ಪ್ರಯೋಜನವೂ ಇಲ್ಲದಿರುವ ಸಂದರ್ಭದಲ್ಲಿ ಕೂಡ ಹಿರೀ ಅಣ್ಣನಿಗೆ ಕಂದಾಯ ರೂಪವಾಗಿ ಕೊಡಬೇಕೆಂಬುವುದು ನ್ಯಾಯ ಸಮ್ಮತವಾಗಲಾರದು ಪ್ರಜೆಗಳ

Digitized by ROJA MUTHIAH RESEARCH LIBRARY



ಆಚರಣೆಗಾಗಿರುವ ನ್ಯಾಯದ ಕಟ್ಟಿಗಿಂತಲೂ ದೊರೆಗಳ ಆಚರಣೆಗಿರುವ ನ್ಯಾಯದ ಕಟ್ಟು ಸ್ವಲ್ಪ ಸಳ್ಳಕವಾಗಿದೆ ಎಂದು ಇದುವರಿಗೆ ಯಾರೂ ವಾದಿಸಲೂ ಇಲ್ಲ, ಯಾರೂ ಒಪ್ಪಲೂ ಇಲ್ಲ ಮತ್ತೂ ಇದಕ್ಕೆ ಪ್ರತಿಯಾಗಿ ನ್ಯಾಯಕ್ಕೆ ಮೊದಲು ಬದ್ಧನಾಗಬೇಕಾದ ಪ್ರಜೆಯೋ ದೊರೆಯೆಂತಲೂ ಇವರು ಜನರೆಂದೂ ಅವರು ಜನಪತಿ ಎಂದೂ ಅದು ಪಕ್ಷಪಾತ ಮಾಡುವುದಿಲ್ಲವೆಂತಲೂ ನ್ಯಾಯವು ಹೆಸರುಗೊಂಡಿದೆ. ಇದೂ ಅಲ್ಲದೆ ಪ್ರಜೆಗಳು ತಮ್ಮ ಪ್ರಯೋಜನವನ್ನೂ ಪರ ಪ್ರಯೋಜನವನ್ನೂ ಪೂರ್ವಾಪರ ಸಂಬಂಧಗಳನ್ನೂ ಒಳ್ಳೇದು ಕೆಟ್ಟದ್ದನ್ನೂ ಯೋಚಿಸುವ ಹಾಗೆ ಬುದ್ಧಿಯುಂಟು ಮಕ್ಕಳಿಗ ಇಂಥಾ ವಿವೇಕವಿಲ್ಲ. ಇದರಿಂದ ಅನೇಕ ವ್ಯತ್ಯಾಸಗಳು ಹುಟ್ಟುವವಷ್ಟೆ. ಇದಕ್ಕೇನು ಉತ್ತರ? ಜಗತ್ತಿನಲ್ಲಿ ತಂದೆಯಿಂದ ಮಕ್ಕಳು ವಿವೇಕವನ್ನು ಕಲಿತುಕೊಳ್ಳುವರೇ ಹೊರತು ಮಕ್ಕಳಿಂದ ತಂದೆಯು ಓಂನಮಶ್ಶಿವಾಯ ಸಿದ್ಧಂನಮಃ ವನ್ನು ತಿದ್ದಹಾಕಿಸಿಕೊಳ್ಳುವುದನ್ನು ಕಂಡವರು ಇನ್ನೂ ಹುಟ್ಟಲ್ಲ. ಆದರೆ ಪ್ರಜೆಗಳಾದ ಮಕ್ಕಳಿಂದಲೇ ರಾಜೋಪಾಧ್ಯಾಯರೂ ರಾಜ ಪುರೋಹಿತರೂ ರಾಜ ಗುರುಗಳೂ, ಮಂತ್ರಿಗಳೂ, ಆಸ್ಥಾನ ಸಾಮಾಜಿಕರೂ ಬಂದು ಧೊರೆಯಾದ ತಂದೆಗೆ ವಿದ್ಯೆಯನ್ನು ಕಲಿಸಿ ಮತ ರಹಸ್ಯಗಳನ್ನು ಉಪದೇಶಿಸಿ, ಬುದ್ಧಿಯನ್ನು ಹೇಳುತ್ತಿದ್ದು ಸರಿಯಾದ ದಾರಿಗೆ ತಂದು ಎಚ್ಚರವನ್ನೂ ಹೇಳುತಾ ಈ ದೊಡ್ಡ ತಂದೆಯ ನಮಸ್ಕಾರಕ್ಕೂ ಮರ್ಯಾದೆಗೂ ಪಾತ್ರರಾಗುವರು. ಹೀಗೆ ಕಾಂಫ್ಯೂಷನ ಈ ದೊಡ್ಡ ಸಂಸಾರದಲ್ಲಿ ಪುತ್ರರೇ ಪಿತೃವಿನಿಂದ ವಂದ್ಯರಾದರು. ಈ ಸನ್ನಿವೇಶದಲ್ಲಿ ಅಪ್ಪ ದೊಡ್ಡ ದೋ

ಮಗ ದೊಡ್ಡದೋ ಎಂದು ಕೇಳುವ ಹಾಸ್ಯಗಾರರಿಗೆ ಮಗ ದೊಡ್ಡದು ಎಂತಲೇ ಉತ್ತರವನ್ನು ಹೇಳ ಬೇಕಾಯಿತು. ರಾಜನು ಪ್ರಜೆಗಳ ಕೈಕೂಸೆಂಬ ಪಶ್ಚಿಮ ದೇಶೀಯರ ಸಿದ್ಧಾಂತಕ್ಕೆ ಇದು ಶುದ್ಧ ವಿರುದ್ಧವಾಗಿರುವುದೇ ಅಲ್ಲದೆ ವಿವೇಕಶಾಲಿಗಳಾದ ಮಂತ್ರಿಗಳನ್ನು ಇಟ್ಟುಕೊಳ್ಳಬೇಕೆಂಬುವುದೇ ಮೊದಲಾಗಿ ಕಾಂಫ್ಯೂಷನು ಆದಿಭಾಗದಲ್ಲಿ ಹೇಳಿರುವ ರಾಜಧರ್ಮಕ್ಕೆ ಇದು ವಿರುದ್ಧವ ಗಿದೆ.

ಪರಮಾರ್ಥವಾದ ಪರೋಪಕಾರ ತತ್ಪರತ್ವವೇ ವಿಶೇಷವಾಗಿ ಬೋಧಿಸಿರುವುದಲ್ಲದೆ ಜನರೆಲ್ಲರೂ ಪರಸ್ಪರ ಮರ್ಯಾದೆಯಿಂದ ನೀತಿಯನ್ನು ವೃದ್ಧಿಮಾಡಿಕೊಳ್ಳುತಿರಬೇಕೆಂದು ಬೋಧಿಸಿದಾನೆ. ಬಾಯಿಯಲ್ಲಿ ಬೋಧಿಸಿದ್ದಲ್ಲದೆ ತನ್ನ ಕಾರ್ಯವನ್ನು ನೋಡಿಯೂ ಇತರರು ಬುದ್ಧಿ ಕಲಿಯಬೇಕೆಂಬ ಕೋರಿಕೆಯಿಂದ ಸಮಸ್ತ ಕೆಲಸವನ್ನೂ ಮಾಡುತಿದ್ದನು.

ಇಂತು ಸಮಸ್ತ ತತ್ವಗಳನ್ನೂ ಲೋಕೋಪಕಾರಾರ್ಥವಾಗಿ ಬೋಧಿಸಿ ಸಕಲ ರಹಸ್ಯಗಳನ್ನೂ ವಿಶದಮಾಡಿ ಧರ್ಮಸಂಸ್ಥಾಪನೆಯನ್ನು ಮಾಡಿದ ಈ ಕಾಂಫ್ಯೂಷನ ಪ್ರತಿಮೆಯನ್ನು ಚೀನಾ ರಾಜ್ಯದಲ್ಲಿ ೪೦,೦೦೦೦೦೦೦ ಪ್ರಜೆಗಳು ಪೂಜಿಸುವರು. ಇಂಥಾ ಮಹಾಪುರುಷ ಸಾವಿರ ವರ್ಷಕ್ಕೆ ಒಂದು ಸಾರಿಯಾದರೂ ಅವತರಿಸುವುದು ಕಷ್ಟ.

ಸಂಪೂರ್ಣ

—— · :— —

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮
ಸರಸ್ವತಿ ಭಂಡಾರ
ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರೂ ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|
| 4 JAN 1993 | |

ಪುಸ್ತಕಸೂಚಿ
ವ. ಸಂ: R KUN M92
ಕ್ರ. ಸಂ: 3115.
ಲೇಖಕ: ಪಟ್ಟಣ್ಣ (ಎಂ ಎಸ್).

ವ. ಸಂ: R KUN M92
ಕ್ರ. ಸಂ: 3115.
ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY